ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಕಲಿಕಾ ಚೇತರಿಕೆ

## 2022–2023

## ಶಿಕ್ಷಕರ ಕೈಪಿಡಿ

# ಸಮಾಜ ವಿಜ್ಞಾನ

## 6ನೇ ತರಗತಿ

ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
ಮತ್ತು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.

# ಸಂದೇಶ



**ಆತ್ಮೀಯರೇ,**

ಮಕ್ಕಳ ಶಿಕ್ಷಣವೇ ಭಾರತದ ಭವಿಷ್ಯ. ಇದಕ್ಕಾಗಿ ಕೇಂದ್ರ ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು 2020ನ್ನು ಜಾರಿಗೊಳಿಸಿದೆ. ಈ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದ್ದು, ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗುತ್ತಿದೆ. ಪಠ್ಯಕ್ರಮ ವಿನ್ಯಾಸ, ಕಲಿಸುವಿಕೆಯಲ್ಲಿ ನಾವೀನ್ಯತೆ, ತರಗತಿ ಪ್ರಕ್ರಿಯೆಯ ಮರುವಿನ್ಯಾಸ ಹಾಗೂ ಶಾಲೆಗಳಲ್ಲಿ ಕಲಿಕಾ ಸಮೃದ್ಧ ವಾತಾವರಣ ನಿರ್ಮಾಣ ಮಾಡಲು ಹಲವು ಕಾರ್ಯತಂತ್ರಗಳನ್ನು ರೂಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ನಿಪುಣ್ ಭಾರತ್ ಮಿಷನ್ ಅಡಿಯಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ಕೌಶಲಗಳನ್ನು ಖಾತ್ರಿಪಡಿಸುವಲ್ಲಿ ನಮ್ಮ ರಾಜ್ಯ ಕಾರ್ಯಪ್ರವೃತ್ತಗೊಂಡಿದೆ.

ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಮಕ್ಕಳು ಔಪಚಾರಿಕ ಶಿಕ್ಷಣ ಪಡೆಯುವಲ್ಲಿ ಅಡೆತಡೆಗಳಾಗಿ, ಎರಡು ವರ್ಷಗಳಲ್ಲಿ ಕಲಿಕಾ ನಷ್ಟವಾಗಿರುತ್ತದೆ. ಔಪಚಾರಿಕ ಹಾಗೂ ಅನೌಪಚಾರಿಕ ಕಾರ್ಯತಂತ್ರಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯ ನಿರಂತರತೆಗೆ ಪ್ರಯತ್ನಿಸಿದ್ದಾಗಿಯೂ ಸಹ ನಿರೀಕ್ಷಿತ ಮಟ್ಟದ ಕಲಿಕೆ ಆಗದಿರುವುದನ್ನು ಹಲವು ಅಧ್ಯಯನಗಳು ತಿಳಿಸಿವೆ. ಈ ಕಲಿಕಾ ಅಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಿದೆ. ಸದರಿ ಕಲಿಕಾ ಅಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ವೈಜ್ಞಾನಿಕ ತಳಹದಿಯ ಮೇಲೆ ಕರ್ನಾಟಕ ಸರ್ಕಾರ **'ಕಲಿಕಾ ಚೇತರಿಕೆ'** ಎಂಬ ವಿನೂತನ ಉಪಕ್ರಮವನ್ನು 2022–23ನೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನಗೊಳಿಸುತ್ತಿದೆ.

ಎಲ್ಲಾ ವಿದ್ಯಾರ್ಥಿಗಳು ಹಿಂದಿನ ಎರಡು ತರಗತಿಗಳಲ್ಲಿ ಕಲಿಯಲೇ ಬೇಕಾಗಿದ್ದ ಪ್ರಮುಖ ಸಾಮರ್ಥ್ಯ, ಪರಿಕಲ್ಪನೆಗಳನ್ನು ಗುರುತಿಸಿದೆ. ಇದಕ್ಕೆ ಸಂವಾದಿಯಾಗಿ ಪ್ರಸಕ್ತ ತರಗತಿಯಲ್ಲಿ ಕಲಿಯಲೇ ಬೇಕಾದ ಪ್ರಮುಖ ಸಾಮರ್ಥ್ಯ, ಪರಿಕಲ್ಪನೆಗಳನ್ನು ಜೋಡಿಸಿ ಕಲಿಕಾ ಹಾಳೆಗಳನ್ನು ಮತ್ತು ಶಿಕ್ಷಕರ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಕಲಿಕಾ ಹಾಳೆಗಳು ಚಟುವಟಿಕೆಗಳಿಂದ ಕೂಡಿದ್ದು, ಮಗುವಿನ ಮುಗ್ಧ ಮನಸ್ಸಿಗೆ ಸಂತೋಷವನ್ನುಂಟು ಮಾಡುವಂತೆ ರೂಪಿಸಲಾಗಿರುತ್ತದೆ. ಇವುಗಳನ್ನು ಪೂರ್ಣಗೊಳಿಸುವುದರಿಂದ ಕಲಿಕಾ ನಷ್ಟವನ್ನು ಸರಿದೂಗಿಸಬಹುದು ಎಂಬ ಆಶಯ ನನ್ನದಾಗಿರುತ್ತದೆ. ಪಠ್ಯಪುಸ್ತಕ, ಶಿಕ್ಷಕರ ಕೈಪಿಡಿಗಳು ಮತ್ತು ಕಲಿಕಾ ಹಾಳೆಗಳು ಪರಸ್ಪರ ಪೂರಕವಾಗಿವೆ. ಶಿಕ್ಷಕರು ಕೈಪಿಡಿಯಲ್ಲಿ ನೀಡಿದ ಮಾರ್ಗಸೂಚಿಯನ್ವಯ ಈ ವಿನೂತನ ಕಾರ್ಯವನ್ನು ಅದರ ಅಂತಸ್ಸತ್ವದಿಂದ ಅನುಷ್ಠಾನಗೊಳಿಸಿ, ಮಕ್ಕಳ ಕಲಿಕೆಯ ಸುಧಾರಣೆಗೆ ಕಾರಣವಾಗುತ್ತೀರಿ ಎಂದು ಹಾರೈಸುತ್ತೇನೆ. ಆದ್ದರಿಂದ ಇಲಾಖೆಯ ಸರ್ವರೂ, ಪೋಷಕವರ್ಗ ಮತ್ತು ಭಾಗೀದಾರರೆಲ್ಲರೂ ಇದರಲ್ಲಿ ಪರಿಣಾಮಕಾರಿಯಾಗಿ ಕೈ ಜೋಡಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತೀರೆಂದು ಆಶಿಸುತ್ತೇನೆ.

ಎಲ್ಲರಿಗೂ ಶುಭವಾಗಲಿ........

**ಶ್ರೀ ಬಿ.ಸಿ. ನಾಗೇಶ್**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ಹಾಗೂ ಸಕಾಲ ಸಚಿವರು**

## ಮುನ್ನುಡಿ



ರಾಷ್ಟ್ರೀಯ ಶಿಕ್ಷಣ ನೀತಿ–2020ರ ಆಶಯದಂತೆ ಮಕ್ಕಳ ಕಲಿಕೆ ಮತ್ತು ಅಭಿವೃದ್ಧಿ ನಮ್ಮೆಲ್ಲರ ಜವಾಬ್ದಾರಿ. ಆದರೆ ಕೋವಿಡ್–19 ಸಾಂಕ್ರಾಮಿಕ ವಿಪತ್ತಿನಿಂದ ಮಕ್ಕಳ ಕಲಿಕೆಯಲ್ಲಿ ವ್ಯತ್ಯಯವಾಗಿ ಕಲಿಕಾ ನಿರಂತರತೆಯನ್ನು ಕಾಪಾಡಿಕೊಳ್ಳಲು ಕಳೆದೆರಡು ವರ್ಷಗಳಿಂದ ಸಾಧ್ಯವಾಗಿರುವುದಿಲ್ಲ. ಸಾಕಷ್ಟು ಕಲಿಕಾ ಅಂತರವಾಗಿರುತ್ತದೆ. ಈ ಅಂತರವನ್ನು ನೀಗಿಸಲು 2022–23ನೇ ಸಾಲಿನಲ್ಲಿ ಕಲಿಕಾ ಚೇತರಿಕೆ ಎಂಬ ವಿನೂತನ ಉಪಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಉಪಕ್ರಮದ ಮೂಲಕ ಎಲ್ಲಾ ವಿದ್ಯಾರ್ಥಿಗಳಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನಕ್ಕೆ ಒತ್ತು ನೀಡಲಾಗುವುದು ಹಾಗೂ ಮಗು ತನ್ನ ಹಿಂದಿನ ತರಗತಿಗಳಲ್ಲಿ ಅತ್ಯಗತ್ಯವಾಗಿ ಗಳಿಸಲೇಬೇಕಿದ್ದ **ಕಲಿಕಾ ಫಲಗಳು** ಹಾಗೂ ಪ್ರಸಕ್ತ ತರಗತಿಯಲ್ಲಿ ಕಲಿಯಲೇ ಬೇಕಾದ **"ಅತಿ ಮುಖ್ಯ ಕಲಿಕಾ ಫಲ"** ಗಳನ್ನು ಗುರುತಿಸಿ, ಚಟುವಟಿಕೆ ರೂಪಿಸಿ ಕಲಿಕಾ ಹಾಳೆಗಳನ್ನು ಮತ್ತು ಶಿಕ್ಷಕರ ಕೈಪಿಡಿಯನ್ನು ರೂಪಿಸಲಾಗಿದೆ. ಇವುಗಳಲ್ಲಿ **'ನಿಪುಣ್ ಭಾರತ್', 'ವಿದ್ಯಾ ಪ್ರವೇಶ್'ನಂತಹ ಉಪಕ್ರಮಗಳನ್ನು ಅಂತರ್ಗತಗೊಳಿಸಲಾಗಿದೆ.** ಈ ಚಟುವಟಿಕೆಗಳು ಶಿಶುಕೇಂದ್ರಿತ, ಕಲಿಕಾ ಹಾಗೂ ಶಿಕ್ಷಕ ಸ್ನೇಹಿಯಾಗಿವೆ. ಚಟುವಟಿಕಾ ಹಾಳೆಗಳ ಜೊತೆಗೆ, ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ನೀಡುವ 'ಶಿಕ್ಷಕರ ಕೈಪಿಡಿ'ಯನ್ನೂ ಸಿದ್ಧಪಡಿಸಿ ನೀಡಲಾಗುತ್ತಿದೆ. ಇವುಗಳನ್ನು ಬಳಸಿ ಮಕ್ಕಳ ಕಲಿಕಾ ಅಂತರ ಸರಿದೂಗಿಸುವ ಕಾರ್ಯವನ್ನು ತಾವೆಲ್ಲರೂ ಜವಾಬ್ದಾರಿಯಿಂದ ನಿರ್ವಹಿಸುತ್ತೀರೆಂಬ ಆಶಯವನ್ನು ಹೊಂದಿರುತ್ತೇನೆ. ಈ ಕಾರ್ಯದಲ್ಲಿ ತೊಡಗಿಸಿಕೊಂಡ DSERT ಹಾಗೂ SSK ಯ ಅಧಿಕಾರಿಗಳಿಗೆ ಅಭಿನಂದನೆಗಳು. ಈ ಕಾರ್ಯದಲ್ಲಿ ಸಹಕರಿಸಿದ ಅಜೀಮ್ ಪ್ರೇಮ್‌ಜೀ ಫೌಂಡೇಷನ್ ಸಂಸ್ಥೆಗೂ ಇಲಾಖೆಯ ಪರವಾಗಿ ಅಭಿನಂದನೆಗಳು.

**ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ**

## ಆಶಯ ನುಡಿ



ವಿದ್ಯಾರ್ಥಿಯ ಶೈಕ್ಷಣಿಕ ಬದುಕಿನಲ್ಲಿ ಪ್ರತೀ ನಿತ್ಯವೂ ಕಲಿಕಾ ನಿರಂತರತೆ ಅತ್ಯಗತ್ಯ. ಆದರೆ ಕೋವಿಡ್–19 ಸಾಂಕ್ರಾಮಿಕದಿಂದಾಗಿ ಜಾಗತಿಕವಾಗಿ ಕಲಿಕಾ ನಿರಂತರತೆಗೆ ವ್ಯತ್ಯಯ ಉಂಟಾಗಿ ಮಕ್ಕಳಲ್ಲಿ ಕಲಿಕಾ ನಷ್ಟವಾಗಿರುವುದು ವೇದ್ಯ. ಇದನ್ನು ಸರಿದೂಗಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ನಮ್ಮ ರಾಜ್ಯದಲ್ಲಿ ಕೋವಿಡ್–19 ನಿಂದಾಗಿ ಶಾಲೆಗಳು ಮುಚ್ಚಲ್ಪಟ್ಟಾಗ ವಿದ್ಯಾಗಮ, ಸಂವೇದ, ವಿಶೇಷ ಸೇತುಬಂಧ ಮುಂತಾದ ಪರ್ಯಾಯ ಕಾರ್ಯಕ್ರಮಗಳನ್ನು ರೂಪಿಸಿದರೂ ಮುಖಾಮುಖಿ ತರಗತಿ ಪ್ರಕ್ರಿಯೆಗೆ ಇವೆಲ್ಲಾ ಸಮಾಂತರವಾಗುವುದಿಲ್ಲ. ಪ್ರಸ್ತುತ **'ಕಲಿಕಾ ಚೇತರಿಕೆ'** ಉಪಕ್ರಮವು ವೈಜ್ಞಾನಿಕ ತಳಹದಿಯ ಮೇಲೆ ಶಿಶು ಕೇಂದ್ರಿತ ಚಟುವಟಿಕೆಗಳನ್ನು ಒಳಗೊಂಡ ಕಲಿಕಾ ಹಾಳೆಗಳನ್ನು ರೂಪಿಸಿ ನೀಡುತ್ತಿರುವ ವಿನೂತನ ಪ್ರಯತ್ನ. ಸರಿಸುಮಾರು ಎರಡು ವರ್ಷಗಳ ಶೈಕ್ಷಣಿಕ ಪ್ರಕ್ರಿಯೆಗಳು ಪೂರ್ಣವಾಗಿ ನಡೆಯದೇ, ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸುವ ಸಲುವಾಗಿಯೇ ರೂಪಿಸಿದ ಉಪಕ್ರಮ. ಈ ಕಾರ್ಯವನ್ನು ಒಂದು ವರ್ಷದವರೆಗೆ ರಾಜ್ಯದಾದ್ಯಂತ ಅನುಷ್ಠಾನಗೊಳಿಸಿ ಮಕ್ಕಳ ಕಲಿಕಾ ನಷ್ಟವನ್ನು ತಾವೆಲ್ಲರೂ ತುಂಬಿಕೊಡುತ್ತೀರಿ ಎಂದು ಆಶಿಸುತ್ತೇನೆ. ಉಪಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಭಾಗೀದಾರರು ಸಕ್ರಿಯವಾಗಿ ತೊಡಗಿಸಿಕೊಳ್ಳುವಿರೆಂದು ನಂಬಿದ್ದೇನೆ.

**ಡಾ. ವಿಶಾಲ್ ಆರ್. ಭಾ.ಆ.ಸೇ.**
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

## ಆಶಯ ನುಡಿ



**ಆತ್ಮೀಯರೇ,**

ಹಿಂದಿನ ಎರಡು ವರ್ಷಗಳ ಕಾಲ ಕೋವಿಡ್–19ರ ಕಾರಣದಿಂದ ಔಪಚಾರಿಕ ತರಗತಿಗಳು ನಿರೀಕ್ಷೆಯಂತೆ ನಡೆಯದೇ ಮಕ್ಕಳಲ್ಲಿ ಕಲಿಕಾ ನಷ್ಟವುಂಟಾಗಿರುವುದು ಶೋಚನೀಯ. ಇದರಿಂದಾಗಿ ಕಲಿಕಾ ಅಂತರ, ಸಾಮಾಜಿಕ ಹಾಗೂ ಭಾವನಾತ್ಮಕ ಏರುಪೇರುಗಳೂ ಉಂಟಾಗಿವೆ. ಈ ಎಲ್ಲ ಅಡೆತಡೆಗಳನ್ನು ನಿವಾರಿಸಿ, ಕಲಿಕಾ ನಿರಂತರತೆಯನ್ನು ಕಾಯ್ದುಕೊಳ್ಳಲು 2022–23ನೇ ಶೈಕ್ಷಣಿಕ ವರ್ಷದಲ್ಲಿ **ಕಲಿಕಾ ಚೇತರಿಕೆ ಉಪಕ್ರಮವನ್ನು** ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಸಾಧಿಸುವುದು ಪ್ರಥಮ ಆದ್ಯತೆಯಾಗಿರುತ್ತದೆ. ಎಲ್ಲಾ ಕಲಿಕೆಗೆ ಮೂಲಭೂತವಾಗಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಅತ್ಯಗತ್ಯ. ಆದ್ದರಿಂದ ಆಯಾ ತರಗತಿಯ ನಿರ್ದಿಷ್ಟ ಕಲಿಕಾ ಫಲಗಳೊಂದಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಕಲಿಕಾ ಚಟುವಟಿಕೆಗಳನ್ನು ಅಂತರ್ಗತಗೊಳಿಸಿ ಕಲಿಕಾ ಚೇತರಿಕೆ ಉಪಕ್ರಮವನ್ನು ರೂಪಿಸಲಾಗಿದೆ. ಇಲ್ಲಿ ನೀಡಿರುವ ಕಲಿಕಾ ಹಾಳೆಗಳನ್ನು ತಾವು ಬಳಸಿಕೊಂಡು ಮಕ್ಕಳಲ್ಲಿ ಬುನಾದಿ ಕಲಿಕಾ ಜ್ಞಾನವನ್ನು ಅನುಕೂಲಿಸುವಿರಿ ಹಾಗೂ ಕಲಿಕಾ ಅಂತರವನ್ನು ಪೂರೈಸುವಿರಿ ಎಂದು ಆಶಿಸುತ್ತೇನೆ. ಇದನ್ನು ಶಾಲಾಧಾರಿತವಾಗಿ ಮೌಲ್ಯಾಂಕನ ಮಾಡುತ್ತಾ ನಿಗದಿತ ಸಾಮರ್ಥ್ಯ ಮತ್ತು ಪರಿಕಲ್ಪನೆ ಗಳಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಿ ಎಂದು ನಂಬಿರುತ್ತೇನೆ. ತಮ್ಮೆಲ್ಲರ ಬೆಂಬಲದಿಂದ ಪರಿಣಾಮಕಾರಿ ಅನುಷ್ಠಾನ ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರಿಗೂ ಯಶಸ್ಸನ್ನು ಹಾರೈಸುತ್ತೇನೆ.

**ಶ್ರೀಮತಿ ಪಲ್ಲವಿ ಆಕುರಾತಿ, ಭಾ.ಆ.ಸೇ.**<br>
**ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ**



## ಪ್ರಾಸ್ತಾವಿಕ ನುಡಿ

**ಆತ್ಮೀಯರೇ,**

ಹೊಸ ಶತಮಾನದ ಆಶಯಗಳನ್ನು ಒಳಗೊಂಡ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿನ ಬದಲಾವಣೆಗೆ ನಾವೆಲ್ಲರೂ ತೆರೆದುಕೊಳ್ಳಬೇಕಿದೆ. ಅದರ ಜೊತೆಗೆ ಕೋವಿಡ್ ಸಂದರ್ಭದಲ್ಲಿ ಉಂಟಾದ ವ್ಯತಿರಿಕ್ತ ಪರಿಣಾಮವನ್ನು ಸರಿಪಡಿಸುವ ಹೊಣೆಗಾರಿಕೆ ಮಹತ್ವದ್ದಾಗಿದೆ. ಕಳೆದ ಎರಡು ವರ್ಷಗಳಲ್ಲಿ ಬಹು ಮಾಧ್ಯಮಗಳನ್ನು ಬಳಸಿಕೊಂಡು ವಿದ್ಯಾಗಮ, ಸಂವೇದದಂತಹ ಶೈಕ್ಷಣಿಕ ಉಪಕ್ರಮಗಳ ಮೂಲಕ ಮಾಡಿದ ಪ್ರಯತ್ನಗಳ ನಡುವೆಯೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಾಕಷ್ಟು ಕಲಿಕಾ ಅಂತರ ಉಂಟಾಗಿರುವುದು ವಾಸ್ತವದ ಸಂಗತಿ. ಕಲಿಕಾ ನಷ್ಟ, ಕಲಿಕಾ ಅಂತರ ಪೂರೈಸುವ ಯೋಜನೆಯೇ **'ಕಲಿಕಾ ಚೇತರಿಕೆ'** ಉಪಕ್ರಮ. ಈ ಸಂದರ್ಭೋಚಿತ ಉಪಕ್ರಮದಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಸಾಮರ್ಥ್ಯವನ್ನು ಸಾಧಿಸುವುದರೊಂದಿಗೆ, ಹಿಂದಿನ ಎರಡು ಶೈಕ್ಷಣಿಕ ವರ್ಷಗಳ ಆಯ್ದ ಕಲಿಕಾಫಲಗಳು ಹಾಗೂ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಲಿಯಲೇಬೇಕಾದ ಅತ್ಯಗತ್ಯ ಕಲಿಕಾಫಲಗಳನ್ನು ಎಲ್ಲಾ ಮಕ್ಕಳಲ್ಲಿ ಸಾಧಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಸಾಧನೆಗಾಗಿ ಕಲಿಕಾ ಪ್ರಕ್ರಿಯೆಯ ಸಾಧ್ಯತೆಗಳನ್ನು ಸೂಚಿಸುವ **'ಶಿಕ್ಷಕರ ಕೈಪಿಡಿ'** ಮತ್ತು ಶಿಶುಕೇಂದ್ರಿತ ಕಲಿಕಾ ಪೂರಕ ಚಟುವಟಿಕೆಗಳನ್ನೊಳಗೊಂಡ ವಿದ್ಯಾರ್ಥಿಗಳ 'ಕಲಿಕಾ ಹಾಳೆ'ಗಳ ಪುಸ್ತಕ ಎಂಬ ಎರಡು ಸಾಹಿತ್ಯಗಳನ್ನು ಸೃಜಿಸಲಾಗಿದೆ. ಈ ಕಲಿಕಾ ಹಾಳೆಗಳಲ್ಲಿ ವಿದ್ಯಾರ್ಥಿಗಳು ಕಲಿಯಲೇಬೇಕಾದ ಸಾಮರ್ಥ್ಯ, ಪರಿಕಲ್ಪನೆ ಮತ್ತು ಕಲಿಕಾಫಲಗಳನ್ನು ಕೇಂದ್ರೀಕರಿಸಿದೆ. ಇವುಗಳನ್ನು ಬಳಸಿ ಮಕ್ಕಳ ಕಲಿಕಾ ನಷ್ಟವನ್ನು ಸರಿದೂಗಿಸಲು ಎಲ್ಲಾ ಭಾಗೀದಾರರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಾಗಿ ಈ ಮೂಲಕ ವಿನಂತಿಸುತ್ತೇನೆ. ಈ ಕಾರ್ಯಾಭಿವೃದ್ಧಿಯಲ್ಲಿ ತೊಡಗಿಸಿಕೊಂಡ ಇಲಾಖಾ ಮಿತ್ರರು ಮತ್ತು ಅಜೀಮ್ ಪ್ರೇಮ್‌ಜೀ ಫೌಂಡೇಷನ್ ಇವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶುಭವಾಗಲಿ.

**ಶ್ರೀಮತಿ ಸುಮಂಗಲ .ವಿ**<br>
**ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**

## ಪರಿಕಲ್ಪನೆ & ಮಾರ್ಗದರ್ಶನ

| | |
|---|---|
| **ಡಾ॥ ಸೆಲ್ವಕುಮಾರ್ ಎಸ್.** ಭಾ. ಆ. ಸೇ.<br>ಪ್ರಧಾನ ಕಾರ್ಯದರ್ಶಿಗಳು,<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ. ಬೆಂಗಳೂರು | **ಡಾ. ವಿಶಾಲ್. ಆರ್** ಭಾ. ಆ. ಸೇ.<br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ<br>ಬೆಂಗಳೂರು |
| **ಶ್ರೀಮತಿ ಪಲ್ಲವಿ ಆಕುರಾತಿ,** ಭಾ. ಆ. ಸೇ.<br>ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ<br>ಕರ್ನಾಟಕ, ಬೆಂಗಳೂರು | **ಶ್ರೀಮತಿ ಸುಮಂಗಲ ವಿ.**<br>ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.<br>ಬೆಂಗಳೂರು. |

**ಸಾಹಿತ್ಯ ರಚನಾ ತಂಡ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ ರವರ ನೇತೃತ್ವದಲ್ಲಿ**

| | |
|---|---|
| **ಡಾ ಹರಿಪ್ರಸಾದ್ ಜಿ.ವಿ**<br>ಹಿರಿಯ ಉಪನ್ಯಾಸಕರು, ಡಯಟ್,<br>ಶಿವಮೊಗ್ಗ | **ವಿಜಯ ಎಂ .ಈ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಸ.ಹಿ.ಪ್ರಾ ಶಾಲೆ<br>ವಿಶ್ವನಗರ. ಭದ್ರಾವತಿ |
| **ಯುಗುಪುರುಷ ಜಿ**<br>ಪದವೀಧರ ಶಿಕ್ಷಕರು, ಸ.ಹಿ.ಪ್ರಾ ಶಾಲೆ<br>ಸಿದ್ದಾಪುರ. ಭದ್ರಾವತಿ | **ಸಂತೋಷ್ ಕುಮಾರ್ ಎಸ್.ಎಚ್.**<br>ಪದವೀಧರ ಪ್ರಾಥಮಿಕ ಶಿಕ್ಷಕರು<br>ಸ.ಹಿ.ಪ್ರಾ ಶಾಲೆ. ಎಮ್ಮೆಹಟ್ಟಿ. ಭದ್ರಾವತಿ. |
| **ರುದ್ರಮೂರ್ತಿ ಎಚ್.ಜಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಸ.ಹಿ.ಪ್ರಾ ಶಾಲೆ<br>ಬಸವನಗಂಗೂರು. ಶಿವಮೊಗ್ಗ | |
| **ಪರಿಶೀಲಕರು** | |
| **ಡಾ ಹರಿಪ್ರಸಾದ್ ಜಿ.ವಿ**<br>ಹಿರಿಯ ಉಪನ್ಯಾಸಕರು, ಡಯಟ್,<br>ಶಿವಮೊಗ್ಗ | **ವಿಜಯ ಎಂ .ಈ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಸ.ಹಿ.ಪ್ರಾ ಶಾಲೆ<br>ವಿಶ್ವನಗರ. ಭದ್ರಾವತಿ |
| **ಅಜೀಮ್ ಪ್ರೇಮ್‌ಜಿ ಫೌಂಡೇಶನ್ ತಂಡ** | |

**ಸಂಯೋಜಕರು:**

**ಇ.ವಿ.ಜಿ. ವಿಭಾಗ, ಡಿ.ಎಸ್.ಇ.ಆರ್.ಟಿ.**

# ಒಳಪುಟಗಳು


| ಕ್ರ ಸಂ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 1 | ಕಲಿಕಾ ಚೇತರಿಕೆ – ಒಂದು ಉಪಕ್ರಮ | 1 |
| 2 | ಕಲಿಕಾ ಚೇತರಿಕೆ ಹೀಗಾಗಬಾರದು – ಹೀಗಾಗಬೇಕು | 2–4 |
| 3 | ಕುಟುಂಬ | 5–6 |
| 4 | ಇತಿಹಾಸದ ಮೂಲಾಧಾರಗಳು | 6–7 |
| 5 | ಕಾಲಗಣನೆ | 7–8 |
| 6 | ಆರಂಭಿಕ ಸಮಾಜ | 8–9 |
| 7 | ಮಾನವನ ನೆಲೆಯೂರುವಿಕೆ | 9–10 |
| 8 | ನಾಗರೀಕತೆ | 10–12 |
| 9 | ವೇದಗಳ ಕಾಲ | 12–13 |
| 10 | ಹೊಸ ಧರ್ಮಗಳ ಉದಯ | 13–14 |
| 11 | ಕ್ರೈಸ್ತ ಮತ್ತು ಇಸ್ಲಾಂ ಧರ್ಮ | 15–16 |
| 12 | ಭಾರತದ ಪ್ರಮುಖ ರಾಜಮನೆತನಗಳು | 16–17 |
| 13 | ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳು | 17–18 |
| 14 | ಮತ ಪ್ರವರ್ತಕರು ಮತ್ತು ಸಾಮಾಜಿಕ ಸುಧಾರಕರು | 19 |
| 15 | ಪೌರತ್ವ ಮತ್ತು ರಾಷ್ಟ್ರೀಯ ಚಿಹ್ನೆಗಳು | 19–20 |
| 16 | ಪ್ರಭುತ್ವ | 20–21 |
| 17 | ಸ್ಥಳೀಯ ಸರ್ಕಾರಗಳು | 21–22 |
| 18 | ಭಾರತದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ | 22–23 |
| 19 | ಆಕಾಶ ಕಾಯಗಳು | 24 |
| 20 | ಭೂಮಿಯ ಆಕಾರ ಮತ್ತು ಚಲನೆಗಳು | 25 |
| 21 | ಭೂಮಿಯ ದೈನಂದಿನ ಚಲನೆ | 25–26 |
| 22 | ದಿಕ್ಕುಗಳು | 26–27 |
| 23 | ಅಕ್ಷಾಂಶ ಮತ್ತು ರೇಖಾಂಶಗಳು | 27–28 |
| 24 | ನಕ್ಷೆ | 28–29 |
| 25 | ಭೂಖಂಡಗಳು | 29–30 |
| 26 | ಸಮಾಜ ವಿಜ್ಞಾನ ಕಲಿಕೆ ಅನುಕೂಲಿಸಬಹುದಾದ ವಿಧಾನಗಳು | 30–33 |

**ಪ್ರೀತಿಯ ಶಿಕ್ಷಕರೇ,**

ಕೋವಿಡ್ 19ರ ಸಾಂಕ್ರಾಮಿಕ ರೋಗದ ಸನ್ನಿವೇಶವನ್ನು ಎದುರಿಸಿ ನಿಮ್ಮ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಎಷ್ಟೋ ದಿನ ಅವರ ಆಟ, ಓದು, ಸಹಜವಾಗಿರುವುದನ್ನು ಬಿಟ್ಟು ಮನೆಯಲ್ಲಿರಬೇಕಾದ ಪ್ರಸಂಗವನ್ನು ಎದುರಿಸಿ ಬಂದಿದ್ದಾರೆ. ಹಾಗೆಯೇ ನೀವೂ ಸಹ ಶಾಲೆ ಆರಂಭವಾದರೆ ಸಾಕು ಎಂದು ಪರಿತಪಿಸಿದ್ದೀರಿ. ಕಲಿಕಾ ಅಂತರಕ್ಕೆ ಬೇಸರಗೊಂಡಿದ್ದೀರಿ. ಈ ಅಂತರವನ್ನು ಸರಿದೂಗಿಸಲು ಇಲ್ಲಿ ಒಂದು ಪ್ರಯತ್ನವನ್ನು ಮಾಡಿ ಇಲಾಖೆ ಕಲಿಕಾ ಚೇತರಿಕೆ ಉಪಕ್ರಮವನ್ನು ರೂಪಿಸಿದೆ.

ಆರನೆಯ ತರಗತಿಯ ಮಕ್ಕಳು ಹಿಂದಿನ ಎರಡು ತರಗತಿಗಳಲ್ಲಿ ಕಲಿಯಲೇಬೇಕಾದ, ಮುಂದಿನ ವರ್ಷ ಏಳನೇ ತರಗತಿಗೆ ಹೋದಾಗ ಅರ್ಥವಾಗಬೇಕಾದ ಪರಿಕಲ್ಪನೆಗಳ ಮೂಲವನ್ನು ಈ ಕಲಿಕಾ ಹಾಳೆಗಳ ಪುಸ್ತಕದಲ್ಲಿ ನೀಡಿದೆ. ನೀವು ಅವುಗಳನ್ನೊಮ್ಮೆ ಪರಿಶೀಲಿಸಿ. ಕಲಿಕಾ ಹಾಳೆಗಳು ಸ್ವಕಲಿಕೆಯಂತೆಯೇ ಇವೆ. ಆದರೆ ಹಾಗೆ ಸ್ವಂತ ಕಲಿಯಲು ಮಕ್ಕಳು ಓದಬಲ್ಲವರಾಗಿರಬೇಕಾಗುತ್ತದೆ. ಇಲ್ಲವಾದಲ್ಲಿ ತಮ್ಮ ಸಹಾಯ ಮಕ್ಕಳಿಗೆ ಅಗತ್ಯವಾಗಿರುತ್ತದೆ.

ಇಲ್ಲಿ ನೀಡಿರುವ ಕಲಿಕಾ ಹಾಳೆಗಳು ಉದಾಹರಣಾತ್ಮಕವಾಗಿ ಮಾತ್ರ. ತರಗತಿ ಪ್ರಕ್ರಿಯೆಯಲ್ಲಿ ನಿತ್ಯ ಇರುವ ನೀವು ಮಕ್ಕಳ ಅಗತ್ಯವನ್ನು ಉತ್ತಮವಾಗಿ ಅರಿತಿರುತ್ತೀರಿ. ನಿಮ್ಮ ಅಪಾರ ಅನುಭವದ ಹಿನ್ನೆಲೆಯಲ್ಲಿ ಇಲ್ಲಿರುವ ಕಲಿಕಾ ಹಾಳೆಗಳ ಜೊತೆಯಾಗಿ ನೀವು ಒಂದಿಷ್ಟು ಸೇರ್ಪಡೆ ಮಾರ್ಪಾಡುಗಳನ್ನು ಮಾಡಿಕೊಳ್ಳಿ. ಅವುಗಳನ್ನು ಬಳಸಿ ಸೂಕ್ತ ರೀತಿಯಿಂದ ಮಕ್ಕಳ ಅಭಿವೃದ್ಧಿಗೆ ಸಹಾಯ ಮಾಡಲು ಕೋರುತ್ತೇವೆ. ನಿಮ್ಮ ಮಕ್ಕಳ ಕಲಿಕೆ ಚೆಂದವಾಗಲೆಂದು ಹಾರೈಸುತ್ತೇವೆ.

**ಮಕ್ಕಳ ಪುಸ್ತಕದ ಕಲಿಕಾ ಹಾಳೆಗಳನ್ನು ಅವಲೋಕಿಸಿ ಈ ಕೆಳಕಂಡಂತೆ ಮಾರ್ಗದರ್ಶನ ನೀಡಿ.**

- ಅಗತ್ಯವಿದ್ದಲ್ಲಿ ನೀವೂ ಸ್ವತಃ ಮಕ್ಕಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿ.
- ನೀಡಿರುವ ವಿಷಯದ ಕುರಿತು ಮಕ್ಕಳು ಆಲೋಚಿಸುವಂತೆ ಮಾಡಿರಿ. ಬರೆಯುವುದಕ್ಕಿಂತಲೂ ಮಕ್ಕಳು ಆ ವಿಷಯದ ಕುರಿತು ಹೆಚ್ಚು ಹೆಚ್ಚು ಅವರ ಸ್ನೇಹಿತರು, ಅಣ್ಣ, ಅಕ್ಕ, ಶಿಕ್ಷಕರೊಂದಿಗೆ ಮಾತಾಡುವಂತೆ ಮಾಡಿ.
- ಪಠ್ಯ ಪುಸ್ತಕದ ಜೊತೆಗೆ ಕಲಿಕಾ ಹಾಳೆಯ ಚಟುವಟಿಕೆಗಳನ್ನು ನಿರ್ವಹಿಸುವಂತೆ ಅನುಕೂಲಿಸಿ.
- ಪಠ್ಯಪುಸ್ತಕದ ಅಭ್ಯಾಸ ಪ್ರಶ್ನೆಗಳನ್ನು ಈ ವರ್ಷ ಅಗತ್ಯವಿದ್ದಲ್ಲಿ ನೀವೇ ನಿರ್ಧರಿಸಿ ಮಾಡಿಸಿ. ಇಲ್ಲದಿದ್ದಲ್ಲಿ ಈ ವರ್ಷಕ್ಕೆ ಕಲಿಕಾ ಹಾಳೆಗಳ ಚಟುವಟಿಕೆಗಳು ಮತ್ತು ತಾವು ರೂಪಿಸುವ ಚಟುವಟಿಕೆಗಳು ಸಾಕಾಗಬಹುದು.
- ಪ್ರತಿ ಕಲಿಕಾಂಶದ ನಂತರ ಸ್ವ-ಅವಲೋಕನದ ಭಾಗವಾಗಿ ಮಕ್ಕಳು ಕಲಿಕಾ ಪ್ರಗತಿಯನ್ನು ದಾಖಲಿಸಿಕೊಳ್ಳುವರು. ಅಲ್ಲಿ ನಾಲ್ಕು ಹಂತಗಳಿವೆ. ಆ ಮಕ್ಕಳು ನಾಲ್ಕನೇ ಹಂತಕ್ಕೆ ತಲುಪಲು ಸಹಾಯಮಾಡಿ. ನಾಲ್ಕನೇ ಹಂತ ತಲುಪಲು ಇರುವ ಸಮಸ್ಯೆಗಳನ್ನು ಪರಿಹರಿಸಿರಿ.
- ಮಕ್ಕಳ ಪ್ರಗತಿ ನೋಟದ ಕೆಳಗೆ ಆ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಮಗು ಸಾಧಿಸಿದ ಕಲಿಕಾ ಸಾಮರ್ಥ್ಯವನ್ನು ದಾಖಲಿಸಿ, ಸಹಿ ಮಾಡಿರಿ.
- ಏನಾದರೂ ಹೆಚ್ಚಿನ ಅಗತ್ಯಬೇಕಾದಲ್ಲಿ ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿರಿ. ಹಾಗೂ ಮುಖಪುಟದಲ್ಲಿ ನೀಡಿರುವ ಡಿ.ಎಸ್.ಇ.ಆರ್.ಟಿ ವಿಳಾಸಕ್ಕೆ ಪತ್ರ, ಇ ಮೇಲ್ ಮೂಲಕ ಸಂಪರ್ಕಿಸಿರಿ.
- ಖುಷಿಯಾಗಿ ಕಲಿಸಿರಿ. ಸಂತೋಷದಿಂದ ಸಂತೋಷ ಹಂಚಿರಿ....

## 1. ಕಲಿಕಾ ಚೇತರಿಕೆ – ಒಂದು ಉಪಕ್ರಮ

ಕಲಿಕಾ ಫಲಗಳ ಗಳಿಕೆಗೆ ಕಲಿಕಾಂಶ, ಪಠ್ಯಾಂಶಗಳು, ಪಠ್ಯಪುಸ್ತಕಗಳಲ್ಲಿ ಸಮ್ಮಿಳಿತಗೊಳಿಸಿದೆ. ಅಲ್ಲಿಗೆ ಕಲಿಕಾಫಲಗಳು ನಿರೀಕ್ಷಿಸಿದ್ದನ್ನು ಪಠ್ಯಪುಸ್ತಕ ಒಂದು ಕಲಿಕೋಪಕರಣವಾಗಿ ಒದಗಿಸುತ್ತದೆ. ಈ ಕಲಿಕಾಫಲಗಳ ಗಳಿಕೆಯನ್ನು ಮೂಲಭೂತ ಸಾಮರ್ಥ್ಯಗಳು ನಿರ್ಧರಿಸುತ್ತದೆ.

ಕಲಿಕೆ ಎನ್ನುವ ಪ್ರಕ್ರಿಯೆಗೆ ಭಾಷೆಯೇ ಮೂಲಬೇರು. ಈ ಭಾಷೆಯಲ್ಲಿನ ಅಂತರ್‌ಕ್ರಿಯಾತ್ಮಕತೆಯ ನಿರಂತರತೆಯ ಮೂಲಕ ಕಲಿಕೆ ಅನುಭವವಾಗಬೇಕಲ್ಲವೆ? ಈ ಕಲಿಕಾ ಅನುಭವ ವೇದ್ಯವಾಗುವ ತರಗತಿ ಪ್ರಕ್ರಿಯೆಯಿಂದ ಪ್ರತ್ಯಕ್ಷವಾಗಿ ವಂಚಿತವಾದ ಮಗು ತನ್ನ ಪೂರ್ವಕಲಿಕಾ ಸನ್ನಿವೇಶದಲ್ಲಿ ಕಳೆದುಕೊಂಡಿದ್ದೆಷ್ಟು? ಅವುಗಳನ್ನು ಮತ್ತೆ ಹೇಗೆ ಸರಿದೂಗಿಸಬೇಕೆಂಬ ಪ್ರಶ್ನೆ ಎದುರಾದಾಗ ನಾವು ನಮ್ಮ ತರಗತಿಯಲ್ಲಿ ನಮ್ಮ ವಿದ್ಯಾರ್ಥಿಗಳೊಂದಿಗೆ ನಾವೇ ರೂಪಿಸಿಕೊಳ್ಳಬಹುದಾದ ಪರಿಹಾರೋಪಾಯವೇ ಕಲಿಕಾ ಚೇತರಿಕೆ. ಇದು ಕೇವಲ ಒಂದು ಸಾಹಿತ್ಯವಲ್ಲ, ಸೇತುಬಂಧದಂತಹ ಯೋಜನೆಯಲ್ಲ. ಪುನರಾವಲೋಕನ ವಿಧಾನವೂ ಅಲ್ಲ. ಕಲಿಕೆಯನ್ನು ಅಮೂರ್ತದಿಂದ ಮೂರ್ತೀಕರಿಸುವ ಪ್ರಕ್ರಿಯೆಯಾಗಿದೆ.

ಈ ಪ್ರಕ್ರಿಯೆಗೆ ಮಗುವಿನಿಂದ ನಿರೀಕ್ಷಿಸುವ ಎಲ್ಲ ಮನಸ್ಸುಗಳು ಹೊಣೆಗಾರರು. ಈ ಕಾರ್ಯ ತರಗತಿ ಪ್ರಕ್ರಿಯೆಗೆ ಸೀಮಿತವಾಗದಂತೆ ನೋಡಿಕೊಳ್ಳಬೇಕಿದೆ. ಇದು ಪಠ್ಯಾಂತರ್ಗತ ತರಗತಿ ಸಮನ್ವಯೀಕರಣ ಹೊಂದಿದ 'ಕ್ರಿಯಾಶೀಲತೆ'. ಕಳೆದುಕೊಂಡಿದ್ದನ್ನು ಎಲ್ಲಿ ಕಳೆದುಕೊಂಡಿದ್ದೇವೋ ಅಲ್ಲಿಯೇ ಹುಡುಕುವ ಶೋಧನೆ. ಈ ಆಶಯಕ್ಕೆ ನಾವೆಲ್ಲರೂ ಭಾಗಿದಾರರಾಗೋಣ. ಇಲ್ಲಿ ನೀಡಿರುವ ಪ್ರಸ್ತುತ ಸಾಹಿತ್ಯದ ವಿಸ್ತೃತ ಉದ್ದೇಶಗಳು ಈ ಕೆಳಗಿವೆ.

1. ಸಮಾಜವಿಜ್ಞಾನ ವಿಷಯವನ್ನು ಆಸಕ್ತಿ, ಅಭಿರುಚಿ, ತಾದಾತ್ಮ್ಯದಿಂದ ಓದುವ ಪರಿಷ್ಕೃತ ವಿಧಾನಗಳನ್ನು ಅನ್ವೇಷಿಸುವುದು.
2. ಸಮಾಜವಿಜ್ಞಾನ ಕಲಿಕೆಯೊಂದಿಗೆ ಸಾಮಾಜೀಕರಣ, ಮನೋ–ಸಮಾಜಿಕ ಮೌಲ್ಯ, ಸಾಂವಿಧಾನಿಕ ಮೌಲ್ಯ, ನೆಲಮೂಲ ಸಂಸ್ಕೃತಿಯ ಶೋಧದಿಂದ ಇತಿಹಾಸ, ಭೌಗೋಳಿಕತೆಯನ್ನು ಅರಿಯುವುದು.
3. ನಮ್ಮ ಸುತ್ತಮುತ್ತಲಿನ ಸಂಗತಿಗಳು ನಾಳೆ ಇತಿಹಾಸದಲ್ಲಿ ಗರ್ಭೀಕರಿಸುವುದರಿಂದ ವರ್ತಮಾನವನ್ನು ನಿರಂತರವಾಗಿಸುವುದರ ಮೂಲಕ ನಾವು ನಮ್ಮ ಮಕ್ಕಳು ಮೊದಲು ತನ್ನೂರಿನ ಭೌಗೋಳಿಕತೆ, ಇತಿಹಾಸ, ಸಾಮಾಜಿಕ ಸಂರಚನೆ, ಮೌಲ್ಯ, ಸಂಸ್ಕೃತಿ, ಜನಪದೀಯ ನೆಲೆಗಳು, ಪ್ರಜಾಪ್ರಭುತ್ವದ ಮೌಲ್ಯ, ಆಚಾರ– ವಿಚಾರ, ರೂಢಿ ಸಂಪ್ರದಾಯ ತನ್ನ ಕುಟುಂಬದ ಆರ್ಥಿಕತೆ, ವ್ಯಾವಹಾರಿಕತೆಯನ್ನು ಅರ್ಥೈಸಿಕೊಳ್ಳುವುದರ ಮೂಲಕ ಸಮಾಜ ವಿಜ್ಞಾನವನ್ನು ಆಪ್ತಗೊಳಿಸುವುದು.
4. ಸಮಾಜವಿಜ್ಞಾನ ವಿಷಯದ ಪರಿಕಲ್ಪನೆಗಳು ನೈಜ ಬದುಕಿನ ವಾಸ್ತವಿಕ ಸಂಗತಿಗಳ ಸಮನ್ವಯೀಕರಣದಿಂದ ಆಧಾರಗಳು, ನಿಜಜೀವನದ ವಿದ್ಯಾಮಾನಗಳಿಂದ ಭೌಗೋಳಿಕ ಪರಿಕಲ್ಪನೆಗಳು ಸರಳವಾಗಿ ಕಲಿಕೆಯಾಗುವುದನ್ನು ಚಟುವಟಿಕೆಯ ಮೂಲಕ ಪ್ರಾಯೋಗಿಕ ಬೋಧನಾ ವಿಧಾನವನ್ನು ಉಜ್ಜೀವನಗೊಳಿಸುವುದು.
5. ವಯೋಮಾನಕ್ಕೆ ತಕ್ಕಂತೆ ಕಲಿಕಾನುಭವ ಹೊಂದಬೇಕಾದ ಮಗು ಹಲವು ಕಾರಣಗಳಿಂದ ಪೂರ್ವಜ್ಞಾನ, ಮೂಲಸಾಮರ್ಥ್ಯ, ಕಲಿಕಾ ನಿರಂತರತೆಗಳ ಪೂರ್ವಾನುಭವಗಳ ಕೊರತೆಯನ್ನು ಕಂಡುಕೊಂಡು ಮಗುವನ್ನು ಜ್ಞಾನ ಸಮಕಾಲೀನನನ್ನಾಗಿಸುವುದು.
6. ಸಮಾಜವಿಜ್ಞಾನದ ಕಲಿಕೆಯಿಂದ ನೆಲಮೂಲದ ಸಂಸ್ಕೃತಿ ಪರಂಪರೆ; ರೂಢಿ ಸಂಪ್ರದಾಯ ಆಚಾರ ವಿಚಾರಗಳನ್ನು ಅರ್ಥೈಸಿಕೊಂಡು ಭಾರತದ ವೈವಿಧ್ಯತೆಯ ಕುರಿತು ಹೆಮ್ಮೆಪಡುವುದು.
7. ಕಲಿಕೆಯನ್ನು ಕೃತಕ ಪ್ರಕ್ರಿಯೆಯಾಗಿಸುವ ಬದಲು ವಿವಿಧ ಚಟುವಟಿಕೆಗಳು, ನಾಟಕ, ಹಾಡು, ನೃತ್ಯ, ಪ್ರಾದೇಶಿಕ ಕಲೆ, ಹತ್ತು ಹಲವು ಚಟುವಟಿಕೆಗಳ ಮೂಲಕ ಸಮಾಜವಿಜ್ಞಾನ ಕಲಿಕೆಯನ್ನು ಆಸಕ್ತಿದಾಯಕವಾಗಿಸುವುದು.
8. ಭಾರತದ ಇತಿಹಾಸ, ಭೌಗೋಳಿಕತೆ, ಸಾಮಾಜಿಕತೆ, ಆರ್ಥಿಕತೆ, ವ್ಯವಹಾರಿಕ ಪ್ರಜ್ಞೆಗಳನ್ನು ಸಮೂಲವಾಗಿ ಅರ್ಥೈಸಿಕೊಂಡು ಗೌರವಾದರ, ಹೆಮ್ಮೆಯನ್ನು ಹೊಂದುವುದು.

**ನಿಖರ ಉದ್ದೇಶಗಳು:**

- ಕೋವಿಡ್–19ರ ಸನ್ನಿವೇಶದಲ್ಲಿ ಉಂಟಾದ ಕಲಿಕಾ ಅಂತರವನ್ನು ಸುಗಮಗೊಳಿಸಲು ಬುನಾದಿ ಕಲಿಕಾ ಸಾಮರ್ಥ್ಯ ಮತ್ತು ಹಿಂದಿನ ಎರಡು ವರ್ಷಗಳಲ್ಲಿ ಮಗು ಕಲಿಯಲೇಬೇಕಾದ ಪರಿಕಲ್ಪನೆಗಳನ್ನು ಸಮನ್ವಯಗೊಳಿಸಿ ಪ್ರಸ್ತುತ ಕಲಿಕಾ ವರ್ಷದ ಕಲಿಕಾ ಫಲಗಳನ್ನು ಮಗು ಸರಳವಾಗಿ ಕಲಿಯಲು ಅನುಕೂಲಿಸುವುದು.
- ಕಲಿಕಾ ಚೇತರಿಕೆಯನ್ನು ಕೇವಲ ವಿದ್ಯಾರ್ಥಿ ಚಟುವಟಿಕೆಗೆ ಸೀಮಿತಗೊಳಿಸದೆ ಮಗುವಿನ ಕಲಿಕಾ ನಿರಂತರತೆಗೆ, ಅನ್ವೇಷಣೆ, ಚೈತನ್ಯದಾಯಕ ಕಲಿಕೆ ಮತ್ತು ಕಲಿಕೆಯ ಹೊಸ ಮಾರ್ಗದ ಅನ್ವೇಷಣೆಗೆ ಪ್ರೇರಕವಾಗಿಸುವುದು.

**2. ಕಲಿಕಾ ಚೇತರಿಕೆ ಹೀಗಾಗಬೇಕು**

ಯಾವುದೇ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಹಲವು ಇತಿಮಿತಿಗಳಿರುವುದು ಸಹಜ. ಅಲ್ಲಿನ ಮಿತಿಗಳನ್ನೇ ಮುಂದಿರಿಸಿಕೊಂಡು ಟೀಕಿಸುವ ಪ್ರವೃತ್ತಿಯನ್ನೂ ನಾವು ಕಂಡಿರುತ್ತೇವೆ. ಸಮಸ್ಯೆಗಳ ಸುಳಿಯಿಂದ ಹೊರಬರಲು ರೂಪಿಸಿದ ಯೋಜನೆಗೆ ಧನಾತ್ಮಕ ಮನಸುಗಳು ಬೇಕು. ಅದು ತಾವೇ ಆಗಿರುತ್ತೀರಿ.

**"ಕಲಿಕಾ ಚೇತರಿಕೆ" ಹೀಗಾಗಬಾರದು!**

1. ಇದು ಕೇವಲ ಕಾರ್ಯಕ್ರಮವಲ್ಲ, ದಾಖಲೆ ಮಾಡುವ ದಾಖಲೆಗಳಲ್ಲ, ಈ ಪ್ರಕ್ರಿಯೆಯ ಬಗ್ಗೆ ವಿವರಣೆ ನೀಡಿ ಮಕ್ಕಳೇ ನಿರ್ವಹಿಸುತ್ತಾರೆ ಎಂದು ಭ್ರಮಿಸುವಂತಿಲ್ಲ.
2. ಕಲಿಕಾ ಹಾಳೆ ಮಗುವಿನ ಮನೆಗೆಲಸವಲ್ಲ. ಮಗು ಅವುಗಳನ್ನು ಬರೆದು ಮುಗಿಸುವಷ್ಟಕ್ಕೆ ಸೀಮಿತವಲ್ಲ.
3. 'ಕಲಿಕಾ ಚೇತರಿಕೆ'ಯು ಯಾವ ಸಾಂಪ್ರದಾಯಿಕ ಬೋಧನಾ ವಿಧಾನದಿಂದಲೂ ನಿರೀಕ್ಷಿತ ಫಲ ನೀಡುವುದಿಲ್ಲ.
4. ಈ ಪ್ರಕ್ರಿಯೆಗೆ ಮಗು ಮಾತ್ರ ಹೊಣೆಗಾರನಲ್ಲ.
5. ಮಗುವಿನ ಕಲಿಕೆಯ ಪರೀಕೆಗಷ್ಟೆ ಕಲಿಕಾ ಹಾಳೆಗಳನ್ನು ಬಳಸುವಂತಿಲ್ಲ.

**ಹೀಗಾದರೆ ಉತ್ತಮ**

1. ಕಲಿಕೆಯ ಸಾಧನ ತಂತ್ರಗಳನ್ನು ಉತ್ತೇಜಿಸೋಣ.
2. ಓದು, ಬರಹ, ಮೌಖಿಕ ಅಭಿವ್ಯಕ್ತಿ ಸುಲಲಿತವಾಗಿರುವಂತೆ ಯೋಜಿಸೋಣ.
3. ಕಲಿಕಾ ಹಾಳೆಗಳನ್ನು ನೀಡುವ ಮೊದಲು ಪರಿಕಲ್ಪನೆಗಳನ್ನು ಮಗುವಿನ ಸ್ವ–ಅನುಭವ, ಪೂರ್ವಾನುಭವ, ಸ್ಥಳೀಯ ಸನ್ನಿವೇಶ, ಆಕರಗಳಿಂದ ವಿವರಿಸೋಣ
4. ಕಲಿಕೆ ಪೂರ್ವಜ್ಞಾನ ಮತ್ತು ವರ್ತಮಾನದ ಅನುಭವಗಳನ್ನು ಸಮನ್ವಯಿಸೋಣ.
5. ಆಟ–ಸ್ಪರ್ಧೆ, ಮೌಖಿಕಾಭಿವ್ಯಕ್ತಿ, ಸ್ಥಳ ಭೇಟಿ, ಸನ್ನಿವೇಶ ನಿರ್ಮಾಣ, ನಿರೂಪಣೆ, ಕಿರುನಾಟಕ ಪಾತ್ರಾಭಿನಯ, ಸಂದರ್ಶನ, ಮೊದಲಾದ ವಿಧಾನಗಳನ್ನು ಬಳಸಿ ಪರಿಕಲ್ಪನೆಯ ಪ್ರತ್ಯಕ್ಷಾನುಭವ ಒದಗುವಂತೆ ಅವಕಾಶ ಕಲ್ಪಿಸೋಣ.

**ತರಗತಿ ಸಮನ್ವಯೀಕರಣ**

* ಮಗು ಈ ವರ್ಷ ಕಲಿಯುತ್ತಿರುವ ಕಲಿಕಾಂಶಗಳು ಹಿಂದಿನ ವರ್ಷಗಳ ಕಲಿಕಾನುಭವವನ್ನು ಆಧರಿಸಿದ್ದು, ಬುನಾದಿ ಸಾಮರ್ಥ್ಯಗಳ ಆಧಾರದ ಮೇಲೆ ಪ್ರತಿವರ್ಷದ ಕಲಿಕಾಫಲ ರೂಪಿಸಲ್ಪಟ್ಟಿದೆ. ಈ ಸರಣಿ ಸ್ವರೂಪದ ಕಲಿಕಾಪ್ರಕ್ರಿಯೆ ಸುಗಮಗೊಳ್ಳಲು ಪರಿಕಲ್ಪನೆಯ ಹಿನ್ನೆಲೆ ಮುನ್ನೆಲೆಗಳನ್ನು ಅರ್ಥೈಸಿಕೊಳ್ಳಬೇಕು. ಈ ಪ್ರಕ್ರಿಯೆಯು ಎರಡು ರೀತಿಗಳಲ್ಲಿ ತರಗತಿಯಲ್ಲಿ ಸಮನ್ವಯೀಕರಣಗೊಳ್ಳುವ ಸಾಧ್ಯತೆಯಿದೆ.

1. **ಪ್ರಧಾನ ಪ್ರಾಶಸ್ತ್ಯ ವಿಧಾನ:** ಕಲಿಕಾ ಚೇತರಿಕೆ ಕಾರ್ಯಯೋಜನೆಯ ನಿಗದಿತ ಅವಧಿಗಳಲ್ಲಿ ಬುನಾದಿ ಸಾಮರ್ಥ್ಯಗಳನ್ನಾಧರಿಸಿದ ಆಯ್ದ ಕಲಿಕಾಂಶಗಳಿಗೆ ಪ್ರಧಾನ ಪ್ರಾಶಸ್ತ್ಯ ನೀಡಿ ಕಲಿಸುವುದು ಮತ್ತು ಮೌಲ್ಯಾಂಕನ ಮಾಡುವುದು.
2. **ಪರೋಕ್ಷ ಪ್ರಾಶಸ್ತ್ಯ ವಿಧಾನ:** ಪಠ್ಯಕಲಿಕೆಯ ಸಂದರ್ಭದಲ್ಲಿ ಒಂದು ಅವಧಿಯನ್ನು ಬುನಾಧಿ ಸಾಮರ್ಥ್ಯ ಕಲಿಕೆಯ ನಂತರ ಪಾಠ ನಿರ್ವಹಿಸಿ ಪ್ರಸ್ತುತ ವರ್ಷದ ಕಲಿಕಾ ಫಲಗಳಿಗೆ ಅಗತ್ಯ ಪಾಠಗಳನ್ನು ನಿರ್ವಹಿಸಿ ಘಟಕ ಪರೀಕ್ಷೆಯ ಮೂಲಕ ಮೌಲ್ಯಮಾಪನ ನಡೆಸುವುದು.

**ಸುಗಮಕಾರರ ಸಿದ್ಧತೆ**

- ಆಯೋಜಿಸುವ ಕಲಿಕಾ ಚಟುವಟಿಕೆ. ಮತ್ತು ಅದರ ಯೋಜನೆ.
- ಆಕರಗಳು, ಕಲಿಕೋಪಕರಣಗಳ ಸಿದ್ಧತೆ.
- ಚಟುವಟಿಕೆಯ ಮೂಲಕ ಪರಿಕಲ್ಪನೆಯ ದೃಷ್ಟಾಂತೀಕರಣ. ಪ್ರತ್ಯಕ್ಷಾನುಭವಕ್ಕೆ ಮಕ್ಕಳಿಗೆ ಪ್ರೇರಣೆ
- ಪರಿಕಲ್ಪನೆಯ ವಿಸ್ತರಣೆ, ವರ್ತಮಾನ ಕಲಿಕಾಂಶದ ಸಮನ್ವೀಕರಣ.
- ಕಲಿಕಾ ಹಾಳೆಗಳನ್ನು ಪೂರ್ಣಗೊಳಿಸಲು ಅನುಕೂಲಿಸುವುದು.

- ವಿದ್ಯಾರ್ಥಿ ಕಲಿಕಾ ಪ್ರಗತಿ ಅವಲೋಕನ. ನಾಲ್ಕನೆಯ ಸ್ತರ ತಲುಪಲು ಸಹಾಯ.
- ಶಿಕ್ಷಕರ ಹಿಮ್ಮಾಹಿತಿ ನಮೂದಿಸುವುದು.
- ಕಲಿಕಾ ಹಾಳೆಯ ಪ್ರಗತಿಯಿಂದ ಮೌಲ್ಯಾಂಕನ-ಪುನರಾವಲೋಕನ ಚಟುವಟಿಕೆ.

**ಕಲಿಕಾ ಅವಧಿ ನಿರ್ಧಾರ**

ತಾವು ಕಲಿಕಾರ್ಥಿಗಳ ವೈಯಕ್ತಿಕ ಭಿನ್ನತೆಗಳನ್ನು ಗಮನದಲ್ಲಿಟ್ಟುಕೊಂಡು ಕಲಿಕಾವಧಿ ನಿರ್ಧರಿಸಿರಿ. ಪ್ರಾದೇಶಿಕ ಭಿನ್ನತೆ, ಕಲಿಕಾಮಟ್ಟ ವಿದ್ಯಾರ್ಥಿಗಳ ಕಲಿಕಾ ಪರಿಸರ ಮೊದಲಾದ ಅಂಶಗಳು ಅವಧಿ ನಿರ್ಧಾರದ ಮಾನಕಗಳಾಗಿರುತ್ತವೆ.

**ಮೌಲ್ಯಾಂಕನ**

ಮೌಲ್ಯಾಂಕನ ವಿಷಯಕ್ಕಾಗಿ ಪ್ರತ್ಯೇಕವಾದ ಸುತ್ತೋಲೆ ಇಲಾಖೆಯಿಂದ ನೀಡಲಾಗಿದೆ. ಅದಾಗ್ಯೂ ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಮಾಡುತ್ತಾ ತೆರಳುವಾಗ ಅವಲೋಕಿಸಿದ ದತ್ತಾಂಶಗಳನ್ನು ತಾವು ಸಂಗ್ರಹಿಸಬಹುದಾಗಿರುತ್ತದೆ.

ನಾಲ್ಕು ಸ್ತರಗಳಲ್ಲಿ ವಿದ್ಯಾರ್ಥಿಯ ಪ್ರಗತಿ ನಿರೀಕ್ಷಿಸಲಾಗಿದೆ. ಅದಕ್ಕಾಗಿ ವಿದ್ಯಾರ್ಥಿ ಸ್ವ-ಅವಲೋಕನ ನಮೂನೆಯನ್ನು ಕಲಿಕಾ ಹಾಳೆಯ ಪುಸ್ತಕದಲ್ಲಿ ನೀಡಲಾಗಿದೆ. ನಾಲ್ಕು ಸ್ತರಗಳು ಹೀಗಿವೆ.

**ಅಪೇಕ್ಷಿತ ಕಲಿಕಾ ಫಲ:**

| ಮುಖ್ಯವಾದ ಕಲಿಕಾಂಶ (ವಿದ್ಯಾರ್ಥಿಗಳು ಬರೆಯುತ್ತಾರೆ) | ತಿಳಿದಿರುತ್ತಾರೆ. (ಶೇ 30 – 49) | ಅರ್ಥೈಸಿಕೊಂಡಿರುತ್ತಾರೆ (ಶೇ 50 – 60) | ಅರ್ಥೈಸಿಕೊಂಡ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಂಡು ಕಲಿಯುತ್ತಾರೆ (ಶೇ 61 – 90) | ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತೇನೆ (ಶೇ 91 –100) |
|---|---|---|---|---|
| | | | | |
| | | | | |

| ಸಾಮರ್ಥ್ಯದ ಹಂತ | ವಿವರಣೆ |
|---|---|
| 1. ತಿಳಿದಿರುತ್ತೇನೆ | ಕಲಿಕಾಫಲ ಒಳಗೊಳ್ಳುವ ಅಂಶಗಳು ಸಾಧಿಸಿಲ್ಲ/ ಸೀಮಿತವಾದ ಅಂಶಗಳು ಮಾತ್ರ ಪರಿಚಯವಿದೆ/ ಶಿಕ್ಷಕರ ಸಂಪೂರ್ಣ, ನಿರಂತರ ಬೆಂಬಲದ ಅವಶ್ಯಕತೆ ಇದೆ. |
| 2. ಅರ್ಥೈಸಿಕೊಂಡಿರುತ್ತೇನೆ | ಕಲಿಕಾಫಲದ ಕೆಲವು ಅಂಶಗಳ ಸ್ಪಷ್ಟತೆ ಇದೆ/ ಕೆಲವುದರಲ್ಲಿ ಸ್ಪಷ್ಟತೆಯ ಅವಕಾಶವಿದೆ/<br>ಶಿಕ್ಷಕರ, ಸ್ನೇಹಿತರ ಭಾಗಶಃ ಬೆಂಬಲದ ಅವಶ್ಯಕತೆ ಇದೆ |
| 3. ಅರ್ಥೈಸಿಕೊಂಡಿರುವ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳುತೇನೆ | ಕಲಿಕಾಫಲದ ಎಲ್ಲಾ ಅಂಶಗಳ ನಿರೀಕ್ಷಿತ ಸ್ಪಷ್ಟತೆ ಇದೆ/ ಕಲಿತದ್ದನ್ನು ತನ್ನ ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತಾರೆ/<br>ಶಿಕ್ಷಕರು ಮಗುವಿಗೆ ಕಲಿಕಾಂಶಗಳಾಧಾರಿತ ಸವಾಲಿನ ಕಾರ್ಯಗಳನ್ನು ನೀಡುವ ಅವಶ್ಯಕತೆಯಿದೆ. |
| 4. ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತೇನೆ | ಕಲಿಕಾಫಲದ ಅಂಶಗಳ ಸ್ಥಿರವಾದ ಸ್ಪಷ್ಟತೆ ಇದೆ/ಮೀರಿದ ಸ್ಪಷ್ಟತೆಯಿದೆ<br>ಶಿಕ್ಷಕರು ಮಗುವಿನ ಮೂಲಕ ಧನಾತ್ಮಕತೆಯನ್ನು ತರಗತಿಯಿಂದ ಹೊರಗೆ ವಿಸ್ತರಿಸುವ ಸಂಪೂರ್ಣ ಅವಕಾಶವಿದೆ. ಮಗುವಿನ ಸ್ವತಃ ಸೃಜನೆಯನ್ನೂ ಅವಲೋಕಿಸಿರಿ |

**ಉದಾಹರಣೆ:**

**ಕಲಿಕಾಫಲ: ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿಯುವರು**

- ಇತಿಹಾಸದ ರಚನೆಗೆ ಅಗತ್ಯವಾದ ಮೂಲಾಧಾರಗಳನ್ನು ಮತ್ತು ಬಗೆಗಳನ್ನು ತಿಳಿಯುತ್ತಾರೆ
- ಇತಿಹಾಸದ ಮೂಲಾಧಾರಗಳ ಸಂರಕ್ಷಣೆಯ ಮನೋಭಾವವನ್ನು ಬೆಳೆಸಿಕೊಳ್ಳುವರು

ಮೇಲಿನ ಎರಡು ಮುಖ್ಯ ಉದ್ದೇಶಗಳನ್ನು ಪೂರೈಸಲು ಮಗುವು ಚಟುವಟಿಕೆಯನ್ನು ಅರ್ಥಬದ್ಧವಾಗಿ ಪೂರ್ಣಗೊಳಿಸುವುದು ಅಗತ್ಯವಾಗಿದೆ. ಇಲ್ಲಿ ನೀಡಿರುವ ಕಲಿಕಾಹಾಳೆಗಳಲ್ಲಿ ನೀಡಿರುವ ಚಟುವಟಿಕೆಗಳ ಅಂಶಗಳೇ ಅಂತಿಮವಲ್ಲ. ಮಗುವನ್ನು ಕಲಿಕಾಫಲದ ಹಿನ್ನೆಲೆಯಲ್ಲಿ ಸಮಗ್ರವಾಗಿ ನೋಡಿಕೊಂಡು ಮಗುವಿನ ಕಲಿಕಾ ಮಟ್ಟ ಗುರುತಿಸಿಕೊಳ್ಳುವುದಾಗಿದೆ.

| ಮುಕ್ತಾಯವಾದ ಕಲಿಕಾಂಶ | ಸಾಮರ್ಥ್ಯದ ಹಂತ | ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿಯುವರು. |
|---|---|---|
| ತಿಳಿದಿರುತ್ತೇನೆ | L1 | ಮಗುವು ಕೆಲವೇ ಕೆಲವು ಆಧಾರಗಳ ಬಗೆಗಳನ್ನು ಗುರುತಿಸಿದರೆ/ ಯಾವುದೇ ಆಧಾರಗಳನ್ನು ತಿಳಿಯದಿದ್ದರೆ, ಗುರುತಿಸದಿದ್ದರೆ. ಚಿತ್ರಗಳನ್ನು ಕಲ್ಲು, ದೇವಸ್ಥಾನ ಎಂದು ಮಾತ್ರ ಗುರುತಿಸಿ ಹೇಳುತ್ತದೆ. |
| ಅರ್ಥೈಸಿಕೊಂಡಿರುತ್ತೇನೆ | L2 | ಮಗುವು ಮೂಲಾಧಾರಗಳನ್ನು ಗುರುತಿಸುತ್ತದೆ, ಕೆಲವೊಮ್ಮೆ ಗೊಂದಲಗಳಿರುವಂತೆ ಕಾಣುವುದು. ಸಂರಕ್ಷಣೆಯ ಕುರಿತು ಲಘುವಾದ ಅಭಿಪ್ರಾಯ ವ್ಯಕ್ತಪಡಿಸುತ್ತದೆ. |
| ಅರ್ಥೈಸಿಕೊಂಡಿರುವ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳುತೇನೆ | L3 | ಮಗುವು ಮೂಲಾಧಾರಗಳನ್ನು ಗುರುತಿಸಿ, ಇತಿಹಾಸದ ರಚನೆಯಲ್ಲಿ ಮೂಲಾಧಾರಗಳ ಮಹತ್ವವನ್ನು ತಿಳಿಯುತ್ತದೆ. ಸಂರಕ್ಷಣೆಗೆ ಸಂಬಂಧಿಸಿದ ಸಮಂಜಸ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ತನ್ನ ಸಹಪಾಠಿಗಳೊಂದಿಗೆ ಕಲಿಕಾಂಶಗಳನ್ನು ಹಂಚಿಕೊಳ್ಳುತ್ತದೆ. |
| ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತೇನೆ | L4 | ಮಗುವು ಇತಿಹಾಸದ ರಚನೆಯಲ್ಲಿ ಮೂಲಾಧಾರಗಳ ಮಹತ್ವವನ್ನು ತಿಳಿಯುತ್ತದೆ. ಮೂಲಾಧಾರಗಳನ್ನು ಉಳಿಸುವ ವಿಶಾಲ ಮನೋಭಾವವನ್ನು ತಳೆಯುತ್ತದೆ. ಅದರ ಸಂರಕ್ಷಣೆಗೆ ತಾನು ಮಾಡಬಹುದಾದ ಸಣ್ಣ ಕಾರ್ಯಗಳನ್ನು ವ್ಯಕ್ತಪಡಿಸುತ್ತದೆ. ಅವಕಾಶ ಸಿಕ್ಕಾಗ ತನ್ನ ಸುತ್ತಲಿನವರಿಗೆ ಸಂರಕ್ಷಣೆಯ ಮಹತ್ವವನ್ನು ತಿಳಿಸಿ ಅವರನ್ನು ಪ್ರೇರೇಪಿಸುತ್ತದೆ. |

**ಸುಗಮಕಾರರಿಗೆ ಸೂಚನೆ:**

ಕಲಿಕಾ ಫಲಗಳನ್ನು ಸಂಪೂರ್ಣವಾಗಿ ಸಾಧಿಸಲು, ನೀಡಿರುವ ಕಲಿಕಾ ಹಾಳೆಗಳು ಒಂದು ಚಿಕ್ಕ ಸಾಧನ ಅಷ್ಟೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಕೆಲವೊಮ್ಮೆ ಈ ಕಲಿಕಾ ಹಾಳೆಗಳು ಕಲಿಕಾಫಲದ ಕೆಲವು ಅಂಶಗಳನ್ನು ಮಾತ್ರ ಸಾಧಿಸಲು ನೆರವಾಗಬಹುದು. ಸುಗಮಕಾರರು ಸಮಗ್ರವಾಗಿ ಕಲಿಕಾ ಫಲಗಳನ್ನು ಮಕ್ಕಳು ಸಾಧಿಸಲು ಇನ್ನೂ ಹೆಚ್ಚಿನ, ವಿಭಿನ್ನವಾದ ಚಟುವಟಿಕೆಗಳನ್ನು ಸ್ವತಂತ್ರವಾಗಿ ಕೈಗೊಳ್ಳುವುದು ಅತಿ ಮುಖ್ಯ. ಅಲ್ಲದೇ ತರಗತಿಯಾಚೆಗೂ ಕೂಡ ಮಕ್ಕಳಿಗೆ ಕಲಿಕಾಫಲದ ಈಡೇರಿಕೆಗೆ ಅವಕಾಶವಿರುವುದು ಸುಗಮಕಾರರ ಚಿಂತನೆಯಲ್ಲಿರುವುದು ಅಗತ್ಯ.

ಈ ಮೌಲ್ಯಮಾಪನವು ಖಡಾಖಂಡಿತವಾಗಿ ಮಕ್ಕಳನ್ನು ಗ್ರೇಡ್ ಮಾಡಲು ಅಥವಾ ಅವರನ್ನು ವಿಭಾಗಿಸಲು ಅಲ್ಲ. ಬದಲಾಗಿ ಸುಗಮಕಾರರು **ಮಕ್ಕಳ ಕಲಿಕಾ ಮಟ್ಟವನ್ನು ನಿರ್ದಿಷ್ಟವಾಗಿ ಗುರುತಿಸಿಕೊಳ್ಳುವ** ಉದ್ದೇಶವನ್ನು ಹೊಂದಿದೆ. ಬಹಳ ಮುಖ್ಯವಾಗಿ ಮಕ್ಕಳ ಕಲಿಕಾಮಟ್ಟವನ್ನು ತಿಳಿದ ನಂತರ ಸುಗಮಕಾರರು ಮಕ್ಕಳನ್ನು **ಮುಂದಿನ ಕಲಿಕಾ ಹಂತಕ್ಕೆ ತೆಗೆದುಕೊಂಡು ಹೋಗಲು** ನೆರವಾಗುವ ಮೂಲ ಉದ್ದೇಶದೊಂದಿಗೆ ರಚಿಸಲಾಗಿದೆ.

## ಕಲಿಕಾಂಶ 1

## ಕುಟುಂಬ

**ಕಲಿಕಾ ಫಲ 1: ಕುಟುಂಬ ಹಾಗೂ ಅದರ ಜವಬ್ದಾರಿಗಳನ್ನು ಅರ್ಥಮಾಡಿಕೊಳ್ಳುತ್ತಾರೆ**

**ಉದ್ದೇಶ:**

- ಕುಟುಂಬ ಮತ್ತು ಸದಸ್ಯರ ನಡುವಿನ ಅಂತರ್ ಸಂಬಂಧವನ್ನು ಅರ್ಥೈಸಿಕೊಳ್ಳುವರು
- ವಂಶವೃಕ್ಷದ ಮೂಲಕ ತಮ್ಮ ಕುಟುಂಬವನ್ನು ಪರಿಚಯಿಸಿಕೊಳ್ಳುವರು.
- ಕುಟುಂಬದ ಸ್ವರೂಪದಲ್ಲಾಗುವ ಬದಲಾವಣೆಗಳನ್ನು ಗುರುತಿಸುವರು ಮತ್ತು ಅವುಗಳ ಲಕ್ಷಣಗಳನ್ನು ಅರ್ಥೈಸಿಕೊಳ್ಳುವರು.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಕುಟುಂಬದ ಬಗ್ಗೆ ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ನಂತರ ಮಕ್ಕಳಿಗೆ ಮಾರ್ಗದರ್ಶನ ನೀಡುತ್ತ ಕಲಿಕಾ ಹಾಳೆಗಳ ಚಟುವಟಿಕೆಗಳನ್ನ ಸ್ವತಃ ಮಕ್ಕಳೇ ಮಾಡಲು ಅವಕಾಶ ನೀಡಬೇಕು. ಈ ವೇಳೆ ಅಗತ್ಯವಿರುವ ಕಡೆ ಕುಟುಂಬದ ಸದಸ್ಯರ ಜೊತೆ ಚರ್ಚೆ ಮಾಡಲು ಅವಕಾಶ ನೀಡಬೇಕು ಮತ್ತು ಸುಗಮಕಾರರು ಅಗತ್ಯ ಮಾರ್ಗದರ್ಶನ ನೀಡಬೇಕು. ಮಕ್ಕಳು ತಮ್ಮ ಕುಟುಂಬದ ಬಗ್ಗೆ ಪರಿಚಯಿಸಿಕೊಳ್ಳಲು ಅವಕಾಶ ನೀಡುವುದರ ಜೊತೆಗೆ ಕುಟುಂಬದ ಸದಸ್ಯರ ನಡುವೆ ಮತ್ತು ಕುಟುಂಬ ಕುಟುಂಬಗಳ ನಡುವೆ ಇರುವ ಅಂತರ್ ಸಂಬಂಧವನ್ನು ಅರ್ಥೈಸುವ ಮೂಲಕ ಕುಟುಂಬದ ಮಹತ್ವವನ್ನು ಅರಿಯುವಂತೆ ಮಾಡುವುದು ಬಹಳ ಮುಖ್ಯ. ಜೊತೆಗೆ ಕುಟುಂಬದ ಸ್ವರೂಪದಲ್ಲಿ ಏಕೆ ಬದಲಾವಣೆಗಳಾಗುತ್ತಿವೆ ಎಂಬುದನ್ನು ಮಕ್ಕಳಿಗೆ ಅರ್ಥೈಸಲು ಚರ್ಚೆ ನಡೆಸಬೇಕು.

### ಕಲಿಕಾ ಹಾಳೆ–1

**ಚಟುವಟಿಕೆ: 1** ನಿಮ್ಮ ಮನೆಯ ಸದಸ್ಯರ ಹೆಸರನ್ನು ಬರೆದು, ಅವರ ಜೊತೆ ನಿಮಗಿರುವ ಸಂಬಂಧವನ್ನು ತಿಳಿಸುತ್ತೀರಾ? ಇಲ್ಲಿ ಮಕ್ಕಳೇ ಅವರ ಕುಟುಂಬದ ಸದಸ್ಯರ ಬಗ್ಗೆ ಪರಿಚಯಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು ಅಗತ್ಯವಿರುವ ಕಡೆ ಮಾರ್ಗದರ್ಶನವನ್ನು ನೀಡಬಹುದು.

**ಚಟುವಟಿಕೆ: 2** ಮಕ್ಕಳೇ, ನೀವು ಹಿಂದಿನ ತರಗತಿಗಳಲ್ಲಿ ವಂಶವೃಕ್ಷ ಬರೆಯುವುದನ್ನ ಕಲ್ತಿದ್ರೀ ಅಲ್ವಾ? ಹಾಗಾದರೆ ನಿಮ್ಮ ಕುಟುಂಬದ ವಂಶವೃಕ್ಷ (ಫ್ಯಾಮಿಲಿ ಟ್ರೀ) ಅನ್ನು ಬರೆಯುತ್ತೀರಾ?

ಸುಗಮಕಾರರು ಮಕ್ಕಳಿಗೆ ವಂಶವೃಕ್ಷ ಪರಿಕಲ್ಪನೆಯನ್ನು ಕಟ್ಟಿಕೊಡಲು ನಿಮ್ಮ ತಂದೆ ತಾಯಿ ಹೆಸರೇನು? ನಿಮ್ಮ ತಂದೆ, ತಾಯಿಗಳ ತಂದೆ ತಾಯಿ ಹೆಸರೇನು? ಎಂದು ಮಕ್ಕಳ ಜೊತೆ ಚರ್ಚಿಸಬೇಕು. ನಂತರ ಮಕ್ಕಳು ಅವರ ಕುಟುಂಬದ ಸದಸ್ಯರ ಜೊತೆ ಚರ್ಚೆಮಾಡಿ ಅವರ ವಂಶವೃಕ್ಷವನ್ನು ರಚಿಸಲು ಅವಕಾಶ ನೀಡಬೇಕು. ನಂತರ ಎಲ್ಲರೂ ರಚಿಸಿದ ವಂಶವೃಕ್ಷಗಳ ಮೇಲೆ ಚರ್ಚಿಸಬೇಕು.

**ಚಟುವಟಿಕೆ: 3** ನೀವು ನಿಮ್ಮ ಕುಟುಂಬ ಸದಸ್ಯರಿಗೆ ಏನೇನು ಸಹಾಯ ಮಾಡುತಿದ್ದೀರಿ ಪಟ್ಟಿ ಮಾಡಿ.

**ಚಟುವಟಿಕೆ: 4** ನೀವು ನಿಮ್ಮ ಕುಟುಂಬ ಸದಸ್ಯರಿಂದ ಏನೆಲ್ಲಾ ಸಹಾಯವನ್ನು ಪಡೆಯುತಿದ್ದೀರಿ ಪಟ್ಟಿ ಮಾಡಿರಿ.

**ಚಟುವಟಿಕೆ: 5** ನಿಮ್ಮ ಕುಟುಂಬದ ಸದಸ್ಯರಲ್ಲಿ ನೀವು ಮೆಚ್ಚುವ ಗುಣ ಯಾವುದು? ತಿಳಿಸುವಿರಾ?

ಈ ಮೇಲಿನ ಮೂರು ಚಟುವಟಿಕೆಗಳಲ್ಲಿ ಮಕ್ಕಳೇ ಅವರ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ನೀಡಬೇಕು ಮತ್ತು ಈ ಚಟುವಟಿಕೆಗಳ ಮೂಲಕ ಕುಟುಂಬದ ಸದಸ್ಯರ ನಡುವೆ ಇರುವ ಅಂತರ್ ಸಂಬಂಧವನ್ನು ಅರ್ಥೈಸಿ ಕುಟುಂಬದ ಮಹತ್ವವನ್ನು ತಿಳಿಯುವಂತೆ ಮಾಡಬೇಕು.

**ಚಟುವಟಿಕೆ: 6** ನಿಮ್ಮ ಅಕ್ಕಪಕ್ಕದ ಯಾವುದಾದರೂ ಮೂರು ಮನೆಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿ.

ಇಲ್ಲಿ ಸುಗಮಕಾರರು ಮಕ್ಕಳೇ ತಮ್ಮ ಊರಿನ ಮೂರು ಮನೆಗಳಿಗೆ ಭೇಟಿ ನೀಡಿ ಆ ಕುಟುಂಬದ ಬಗ್ಗೆ ಮಾಹಿತಿ ಸಂಗ್ರಹಿಸಿ ತರಲು ಅವಕಾಶ ನೀಡಬೇಕು. ನಂತರ ತಂದಿರುವ ಮಾಹಿತಿಯನ್ನು ತರಗತಿಯಲ್ಲಿ ಪ್ರಸ್ತುತಪಡಿಸಲು ಅವಕಾಶ ನೀಡಿ ಅದರ ಮೇಲೆ ಚರ್ಚಿಸುತ್ತಾ ಕುಟುಂಬದ ಸ್ವರೂಪಗಳಲ್ಲಿರುವ ಭಿನ್ನತೆಯನ್ನು ಅರ್ಥೈಸಬೇಕು ಮತ್ತು ಕುಟುಂಬದ ಸ್ವರೂಪಗಳಲ್ಲಿ ಏಕೆ ಬದಲಾವಣೆಗಳಾಗುತ್ತಿದೆ ಎಂಬುದನ್ನು ಚರ್ಚಿಸಬೇಕು.

**ಚಟುವಟಿಕೆ: 7** ವಿಭಕ್ತ ಹಾಗೂ ಅವಿಭಕ್ತ ಕುಟುಂಬಗಳ ಪ್ರಮುಖ ಲಕ್ಷಣಗಳನ್ನು ಪಟ್ಟಿ ಮಾಡಿ.

ಈ ಚಟುವಟಿಕೆಯಲ್ಲಿ ವಿಭಕ್ತ ಹಾಗೂ ಅವಿಭಕ್ತ ಕುಟುಂಬಗಳ ಪ್ರಮುಖ ಲಕ್ಷಣಗಳ ಪಟ್ಟಿಮಾಡಿಸುವುದರ ಜೊತೆಗೆ ಪ್ರಸ್ತುತ ನಾವು ಯಾವ ತರಹದ ಕುಟುಂಬಗಳನ್ನು ಹೆಚ್ಚಾಗಿ ಕಾಣುತ್ತೇವೆ? ಮತ್ತು ಏಕೆ? ನಿಮಗೆ ಯಾವ ತರಹದ ಕುಟುಂಬ ಇಷ್ಟ? ಮತ್ತು ಏಕೆ? ಎಂಬ ಪ್ರಶ್ನೆಗಳನ್ನ ಮಕ್ಕಳಿಗೆ ಹಾಕಿ ಅವರ ಪ್ರತಿಕ್ರಿಯೆ ಪಡೆಯಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 1 ರ ಚಟುವಟಿಕೆ 7 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ 2 – ಇತಿಹಾಸದ ಮೂಲಾಧಾರಗಳು

**ಕಲಿಕಾಫಲ 2: ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿಯುವರು.**

**ಉದ್ದೇಶ:**

- ಇತಿಹಾಸದ ರಚನೆಗೆ ಅಗತ್ಯವಾದ ಮೂಲಾಧಾರಗಳು ಮತ್ತು ಅವುಗಳ ಮಹತ್ವವನ್ನು ಅರಿಯುವರು
- ಇತಿಹಾಸದ ಮೂಲಾಧಾರಗಳ ಸಂರಕ್ಷಣೆಯ ಮನೋಭಾವವನ್ನು ಬೆಳೆಸಿಕೊಳ್ಳುವರು.

**ಕಲಿಕಾ ಸಾಮಗ್ರಿಗಳು:** ಶಾಲೆಯ ಮೂಲ ದಾಖಲೆಗಳು, ಇತಿಹಾಸದ ಆಧಾರಗಳ ಚಿತ್ರಗಳು.

**ಪ್ರಕ್ರಿಯೆ:** ಸುಗಮಕಾರರು ಮಕ್ಕಳಿಗೆ ಇತಿಹಾಸದ ಮೂಲಾಧಾರ ಬಗ್ಗೆ ಪರಿಚಯಿಸಲು ಶಾಲೆಯ ಮೂಲ ಇತಿಹಾಸವನ್ನು ತೆಗೆದುಕೊಂಡು ಅರ್ಥೈಸುವುದು. ಮೊದಲಿಗೆ ಮಕ್ಕಳಿಂದ ತಮ್ಮ ಶಾಲೆಯ ಚಿತ್ರವನ್ನು ಬರೆಸುವುದು. ನಂತರ ಶಾಲೆಯ ಇಂದಿನ ಸ್ಥಿತಿ ಹೇಗಿದೆ ಎಂಬುದನ್ನು ಮಕ್ಕಳಿಂದಲೇ ಹೇಳಿಸುವುದು. ತದನಂತರ ಶಾಲೆಯ ಆರಂಭದ ಬಗ್ಗೆ ಅರಿಯಲು ಮುಖ್ಯಶಿಕ್ಷಕರು ಅಥವಾ ಊರಿನ ಹಿರಿಯರಿಂದ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲು ಅವಕಾಶ ನೀಡಬೇಕು. ಸಂಗ್ರಹಿಸಿದ ಮಾಹಿತಿ ಮೇಲೆ ಚರ್ಚಿಸುತ್ತಾ ಶಾಲೆಯ ಇತಿಹಾಸ ತಿಳಿಯಲು ಯಾವೆಲ್ಲಾ ನಮಗೆ ಆಧಾರಗಳಿವೆ ಎಂಬುದನ್ನು ಅರ್ಥೈಸುವುದು. ನಂತರ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಾ ಇತಿಹಾಸ ರಚನೆಗೆ ಯಾವೆಲ್ಲಾ ಆಧಾರಗಳಿವೆ ಮತ್ತು ಅವು ಇತಿಹಾಸ ರಚನೆಗೆ ಹೇಗೆ ಸಹಕಾರಿಯಾಗಿವೆ ಎಂಬುದನ್ನು ಅರ್ಥೈಸುವುದು ಮತ್ತು ಅವುಗಳ ಸಂರಕ್ಷಣೆಯ ಮಹತ್ವವನ್ನು ಮಕ್ಕಳೇ ಅರಿಯುವಂತೆ ಮಾಡುವುದು. ಕಲಿಕಾ ಹಾಳೆಯ ಚಟುವಟಿಕೆಗಳನ್ನು ಸ್ವತಃ ಮಕ್ಕಳಿಂದಲೇ ಮಾಡಿಸುವುದು ಅಗತ್ಯವಿರುವ ಕಡೆ ಸುಗಮಕಾರರು ಮಾರ್ಗದರ್ಶನವನ್ನು ನೀಡುವುದು.

### ಕಲಿಕಾ ಹಾಳೆ: 2

**ಚಟುವಟಿಕೆ: 1** ನನ್ನ ಶಾಲೆಯ ಬಗ್ಗೆ ನನಗೆಷ್ಟು ಗೊತ್ತು?

**ಚಟುವಟಿಕೆ: 2** ಶಾಲೆಯ ಇತಿಹಾಸದ ಮೂಲಗಳನ್ನು ಹುಡುಕೋಣ.

**ಚಟುವಟಿಕೆ: 3** ಶಾಲೆಯ ಇತಿಹಾಸದ ಮೇಲೆ ಚರ್ಚಿಸೋಣ.

ಈ ಮೇಲಿನ ಮೂರು ಚಟುವಟಿಕೆಗಳು ಶಾಲೆಯ ಮೂಲ ಇತಿಹಾಸವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದವುಗಳಾಗಿದ್ದು ಇಲ್ಲಿ ಮಕ್ಕಳೇ ಊರಿನ ಹಿರಿಯರು ಮತ್ತು ಮುಖ್ಯ ಶಿಕ್ಷಕರ ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಲು ಅವಕಾಶ ನೀಡುವುದು. ಸಂಗ್ರಹಿಸಿದ ಮಹಿತಿಯನ್ನು ತರಗತಿಯಲ್ಲಿ ಮಂಡಿಸಲು ಅವಕಾಶ ನೀಡುವುದು. ಯಾರಿಂದ? ಹೇಗೆ? ಮಾಹಿತಿ ಸಂಗ್ರಹಿಸಿದಿರಿ ಎಂದು ಗುಂಪು ಚರ್ಚೆ ಮಾಡಿಸಿ ಚರ್ಚೆಯಲ್ಲಿನ ಅಂಶಗಳನ್ನು ಕ್ರೋಢೀಕರಿಸಿ ಶಾಲೆಯ ಇತಿಹಾಸ ತಿಳಿಯಲು ಯಾವೆಲ್ಲಾ ದಾಖಲೆಗಳಿವೆ ಎಂಬುದನ್ನು ಅರ್ಥೈಸುವುದು. ಇತಿಹಾಸ ರಚನೆಯಲ್ಲಿ ದಾಖಲೆಗಳು ಹೇಗೆ ಮಹತ್ವದ ಪಾತ್ರವಹಿಸುತ್ತವೆ ಎಂಬುದನ್ನು ಮನದಟ್ಟು ಮಾಡಿಸುವುದು. ಮುಂದುವರಿದು ಕಲಿಕಾ ಹಾಳೆ 3 ರಲ್ಲಿ ಇತಿಹಾಸದ ಆಧಾರಗಳನ್ನು ಅರ್ಥಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದು.

### ಕಲಿಕಾ ಹಾಳೆ: 3

**ಚಟುವಟಿಕೆ: 1** ಚಿತ್ರ ನೋಡಿ ಗುರುತಿಸೋಣ ಮತ್ತು ಹೆಸರಿಸೋಣ.

ಈ ಚಟುವಟಿಕೆಯಲ್ಲಿ ನೀಡಿರುವ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ಗುರುತಿಸಲು ಹೇಳುವುದು. ಇಲ್ಲಿ ಕೆಲವೇ ಮೂಲಾಧಾರಗಳ ಚಿತ್ರಗಳನ್ನು ನೀಡಲಾಗಿದ್ದು ಇತರ ಆಧಾರಗಳ ಚಿತ್ರಗಳನ್ನು ಬಳಸಿಕೊಳ್ಳುವುದು. ಆಧಾರಗಳನ್ನು

ಪರಿಚಯಿಸುವಾಗ ಪ್ರಸ್ತುತಕ್ಕೆ ಹೊಲಿಸಿ ಅರ್ಥೈಸುವುದು ಉದಾ: ಶಾಸನಗಳನ್ನು ಪರಿಚಯಿಸುವಾಗ ಇಂದಿನ ಶಿಲಾವಿನ್ಯಾಸಗಳನ್ನು (ಶಾಲೆ/ಕಟಡಗಳ ಶಿಲಾನ್ಯಾಸಗಳು) ಹೋಲಿಸುವುದು. ಜೊತೆಗೆ ಇವುಗಳು ಹೇಗೆ ಇತಿಹಾಸ ರಚನೆಗೆ ಸಹಕಾರಿಯಾಗಿವೆ ಎಂಬುದನ್ನು ಅರ್ಥೈಸುವುದು.

**ಚಟುವಟಿಕೆ: 2** ಇತಿಹಾಸ ರಚನೆಗೆ ಸಹಕಾರಿಯಾಗಿರುವ ನಿಮ್ಮ ಸುತ್ತಮುತ್ತಲಿನ ಸ್ಮಾರಕಗಳನ್ನು ಪಟ್ಟಿಮಾಡಿ.

ಸ್ಥಳೀಯ ಸ್ಮಾರಕಗಳನ್ನು ಮಕ್ಕಳೇ ಗುರುತಿಸಿ ಪಟ್ಟಿಮಾಡಲು ಅವಕಾಶ ಮಾಡಿಕೊಡುವುದು ಇದಕ್ಕೆ ಅಗತ್ಯ ಮಾರ್ಗದರ್ಶನ ನೀಡುವುದು. ನಂತರ ಪ್ರಸ್ತುತಪಡಿಸಲು ಅವಕಾಶ ನೀಡಿ ಅವುಗಳ ಮೇಲೆ ಗುಂಪು ಚರ್ಚೆಮಾಡಿಸಿ ಇವುಗಳು ಇತಿಹಾಸ ರಚನೆಗೆ ಏನು ಕೊಡುಗೆ ನೀಡಿವೆ ಎಂಬುದನ್ನು ಅರ್ಥೈಸುವುದು. ಈ ಮೂಲಕ ಮಕ್ಕಳು ಇತಿಹಾಸದ ಆಧಾರಗಳನ್ನು ಸಂರಕ್ಷಣೆಯ ಮಹತ್ವನ್ನು ಅರಿಯುವಂತೆ ಮಾಡುವುದು.

**ಚಟುವಟಿಕೆ: 3** ನಮ್ಮ ಸುತ್ತಮುತ್ತಲು ಹಲವಾರು ಸ್ಮಾರಕಗಳು (ಕೋಟೆ/ ಪುರಾತನ ಕಟ್ಟಡ), ಶಾಸನಗಳು ಹಾಗೂ ಇತರೆ ಅವಶೇಷಗಳನ್ನು ಕಾಣುತ್ತೇವೆ. ಇವುಗಳನ್ನು ನಾವೇಕೆ ರಕ್ಷಿಸಬೇಕು? ಯೋಚಿಸಿ, ಚರ್ಚಿಸಿ.

ಸ್ಮಾರಕಗಳ ಸಂರಕ್ಷಣೆಗೆ ನಾವೇನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ಮಕ್ಕಳೇ ಪಟ್ಟಿ ಮಾಡಲು ಅವಕಾಶ ಮಾಡಿಕೊಡುವುದು. ನಂತರ ಎಲ್ಲರೂ ಪ್ರಸ್ತುತಪಡಿಸಲು ಅವಕಾಶ ನೀಡಿ. ಸಂರಕ್ಷಣೆಯನ್ನು ಹೇಗೆ ಮಾಡಬಹುದು ಮತ್ತು ಅದರ ಮಹತ್ವ ಏನು ಎಂಬುದನ್ನು ಅರಿಯುವಂತೆ ಮಾಡುವುದು.

**ಮೌಲ್ಯಮಾಪನ:** ಕಲಿಕಾಹಾಳೆ 3 ರ ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು

### ಕಲಿಕಾಂಶ 3 – ಕಾಲಗಣನೆ

**ಕಲಿಕಾಫಲ 3: ಇತಿಹಾಸದ ಕಾಲಗಣನೆಯ ವಿಶೇಷತೆಯನ್ನು ಗುರುತಿಸುವರು (ದಶಕ, ಶತಮಾನ, ಸಹಸ್ರಮಾನ, ಸಾಮಾನ್ಯ ಶಕ ಪೂರ್ವ ಮತ್ತು ಸಾಮಾನ್ಯ ಶಕ)**

**ಉದ್ದೇಶ:**

- ಇತಿಹಾಸದ ಕಾಲಗಣನೆಯ ವಿಶೇಷತೆಯನ್ನು ಮತ್ತು ಅದರ ಮಹತ್ವವನ್ನು ಅರಿಯುವರು.
- ಘಟನೆಗಳನ್ನು ಅರ್ಥಮಾಡಿಕೊಂಡು ಕಾಲಾನುಕ್ರಮದಲ್ಲಿ ವಿವರಿಸುವರು.

**ಪ್ರಕ್ರಿಯೆ:** ಸುಗಮಕಾರರು ಮಕ್ಕಳಿಗೆ ಕಾಲಗಣನೆಯ ಬಗ್ಗೆ ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ಮಕ್ಕಳನ್ನ ಪ್ರಶ್ನಿಸುತ್ತಾ ಕಾಲಗಣನೆಯ ವಿಶೇಷತೆಯ ಬಗ್ಗೆ ಅರ್ಥೈಸುವುದು. ದಶಕ, ಶತಕ, ಶತಮಾನ, ಸಾಮಾನ್ಯ ಶಕ ಪೂರ್ವ, ಸಾಮಾನ್ಯ ಶಕ ಇವುಗಳ ಬಗ್ಗೆ ಅರ್ಥೈಸುವುದು. ನಂತರ ಮಕ್ಕಳಿಗೆ ತಿಳಿದಿರುವ ಇತ್ತೀಚಿನ ಘಟನೆಗಳನ್ನ ಉದಾಹರಣೆ ತೆಗೆದುಕೊಂಡು ಘಟನೆಗಳನ್ನು ಕಾಲಾನುಕ್ರಮದಲ್ಲಿ ವಿವರಿಸಲು ಅವಕಾಶ ನೀಡುವುದು. ಜೊತೆಗೆ ಇತಿಹಾಸದಲ್ಲಿ ಕಾಲಗಣನೆಯ ಮಹತ್ತ್ವವನ್ನು ಅರಿಯುವಂತೆ ಮಾಡುವುದು. ಕಾಲಾನುಕ್ರಮಣಿಕೆಯಲ್ಲಿ ಸುಗಮಕಾರರು ಮಗು ಎಲ್ಲಾ ಮಹತ್ವದ ವರ್ಷಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂಬ ಗೋಜಿಗೆ ಹೋಗದೆ, ಪ್ರಮುಖ ಘಟನಾವಳಿಗಳ ಕೆಲವು ವರ್ಷಗಳನ್ನು ಪರಿಕಲ್ಪನೆಗಳ ಆಧಾರದಲ್ಲಿ ಗಟ್ಟಿಮಾಡಿಕೊಂಡು, ಆ ವರ್ಷದ ಆಧಾರದಿಂದ ಹಿಂದಿನ ಘಟನೆಗಳು ಮತ್ತು ಮುಂದಿನ ಘಟನೆಗಳ ಕಾಲದ ಅಂದಾಜು ಮಾಡಲು ತಿಳಿಸಬೇಕು.

### ಕಲಿಕಾ ಹಾಳೆ: 4

**ಚಟುವಟಿಕೆ: 1** ಶತಮಾನವನ್ನು ಅರ್ಥ ಮಾಡಿಕೊಳ್ಳೋಣ

ಈ ಚಟುವಟಿಕೆಯ ಮೂಲಕ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತಾ ಶತಮಾನದ ಪರಿಕಲ್ಪನೆಯನ್ನು ಅರ್ಥೈಸುವುದು ಮತ್ತು ನೀಡಿರುವ ಕೋಷ್ಠಕವನ್ನು ಮಕ್ಕಳೇ ಭರ್ತಿಮಾಡಲು ಅವಕಾಶ ಮಾಡಿಕೊಡುವುದು. ಬಹುಮುಖ್ಯವಾಗಿ ಮಕ್ಕಳು ಸಾಮಾನ್ಯ ಶಕಪೂರ್ವ ಮತ್ತು ಸಾಮಾನ್ಯ ಶಕವರ್ಷದ ವ್ಯತ್ಯಾಸಗಳನ್ನು ತಿಳಿಯುವಂತಾಗಬೇಕು.

### ಕಲಿಕಾ ಹಾಳೆ: 5

**ಚಟುವಟಿಕೆ: 1** ಕಾಲಾನುಕ್ರಮದಲ್ಲಿ ಬರೆಯೋಣ

ನೀಡಿರುವ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಲು ಸೂಚಿಸುವುದು ಮತ್ತು ಅವುಗಳ ಮೇಲೆ ಚರ್ಚಿಸುವುದು.

**ಚಟುವಟಿಕೆ: 2** ಈ ಕೆಳಗಿನ ಘಟನೆಗಳನ್ನು ಕಾಲಾರೇಖೆಯಲ್ಲಿ ಗುರುತಿಸಿ

ನೀಡಿರುವ ಘಟನೆಗಳನ್ನು ಕಾಲಾರೇಖೆಯಲ್ಲಿ ಗುರುತಿಸಿ ಹೇಳಲು ಮತ್ತು ಬರೆಯಲು ಅವಕಾಶ ಮಾಡಿಕೊಡುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 5 ರ ಚಟುವಟಿಕೆ 1 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

## ಕಲಿಕಾಂಶ 4 – ಆರಂಭಿಕ ಸಮಾಜ

**ಕಲಿಕಾಫಲ 4: ಬೇಟೆಗಾರಿಕೆ ಮತ್ತು ಸಂಗ್ರಾಹಕ ಸಮಾಜದಲ್ಲಿ ಆಹಾರದ ಸಂಗ್ರಹಣೆ ಮಾಡುತ್ತಿದ್ದ ವಿಧ ಮತ್ತು ಅದಕ್ಕಾಗಿ ಬಳಸುತ್ತಿದ್ದ ಆಯುಧಗಳು ಕುರಿತು ಹೇಳುವರು.**

**ಉದ್ದೇಶ:**

- ಬೇಟೆಗಾರಿಕೆ ಮತ್ತು ಸಂಗ್ರಾಹಕ ಸಮಾಜದಲ್ಲಿ ಮಾನವನ ಜೀವನ ಶೈಲಿಯನ್ನು ಅರಿಯುವರು ಮತ್ತು ಪ್ರಸ್ತುತ ಜೀವನ ಶೈಲಿಗೆ ಹೋಲಿಸುವರು.
- ಬೇಟೆಗಾರ ಮತ್ತು ಸಂಗ್ರಹಗಾರ ಜನರು ವಿಕಾಸ ಹೊಂದಲು ಕಾರಣವಾದ ಅಂಶಗಳನ್ನು ಗುರುತಿಸಿ ಇಂದಿನ ಸಮಾಜಕ್ಕೆ ಅವುಗಳ ಪ್ರಸ್ತುತತೆಯನ್ನು ಅರಿಯುವುದು.

**ಕಲಿಕಾ ಸಾಮಗ್ರಿಗಳು: ಚಿತ್ರ ಪಟಗಳು**

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಮಕ್ಕಳ ಪೂರ್ವಜ್ಞಾನವನ್ನು ಅರಿಯುವರು. ನಂತರ ಸನ್ನಿವೇಶ ಚಿತ್ರಗಳನ್ನು ನೀಡಿ ಮಕ್ಕಳಿಗೆ ಸೂಕ್ಷ್ಮವಾಗಿ ಗಮನಿಸಲು ಹೇಳುವುದು. ನಂತರ ಈ ಚಿತ್ರಪಟಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಪ್ರತಿಕ್ರಿಯೆ ಪಡೆಯುವರು. ತರುವಾಯ ಸುಗಮಕಾರರು ಮಕ್ಕಳ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಬೇಟೆಗಾರ ಮತ್ತು ಸಂಗ್ರಹಕಾರ ಜನರ ಜೀವನ ಶೈಲಿಯನ್ನು ಅರ್ಥೈಸುವುದು. ಪ್ರಸ್ತುತದ ಜೀವನ ಶೈಲಿಗೆ ಹೋಲಿಕೆ ಮಾಡಿ ಇರುವ ಸಾಮ್ಯತೆ ಮತ್ತು ವ್ಯತ್ಯಾಸಗಳ ಬಗ್ಗೆ ಗುಂಪು ಚರ್ಚೆ ಮಾಡಲು ಅವಕಾಶ ನೀಡುವುದು. ಒಂದು ಕಥೆಯ ಮೂಲಕ ಹಿಂದೆ ಜನರು ಏಕೆ ವಲಸೆ ಹೋಗುತ್ತಿದ್ದರು ಎಂಬುದನ್ನು ಅರ್ಥೈಸುವುದು ಹಾಗೂ ಪ್ರಸ್ತುತ ದಿನಗಳಲ್ಲಿ ಜನ ಏಕೆ ವಲಸೆ ಹೋಗುತ್ತಿದ್ದಾರೆ? ಎಂಬುದರ ಬಗ್ಗೆ ಮಕ್ಕಳ ಜೊತೆ ಚರ್ಚಿಸುವುದು. ಜೊತೆಗೆ ಪ್ರಸ್ತುತ ಅಸ್ತಿತ್ವದಲ್ಲಿರುವ ಬೇಟೆಗಾರ ಸಮುದಾಯಗಳ ಉದಾಹರಣೆ ನೀಡಿ ಅದರ ಮೇಲೆ ಚರ್ಚಿಸುವುದು.

### ಕಲಿಕಾ ಹಾಳೆ: 6

**ಚಟುವಟಿಕೆ: 1** ಚಿತ್ರ ನೋಡಿ ಮಾತನಾಡೋಣ

ಸನ್ನಿವೇಶ ಚಿತ್ರಗಳನ್ನು ನೀಡಿ ಮಕ್ಕಳಿಗೆ ಸೂಕ್ಷ್ಮವಾಗಿ ಗಮನಿಸಲು ಹೇಳುವುದು. ಚಿತ್ರಪಟಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಪ್ರತಿಕ್ರಿಯೆ ಪಡೆಯುವರು. ತರುವಾಯ ಸುಗಮಕಾರರು ಮಕ್ಕಳ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಬೇಟೆಗಾರ ಮತ್ತು ಸಂಗ್ರಹಕಾರ ಜನರ ಜೀವನ ಶೈಲಿಯನ್ನ ಅರ್ಥೈಸುವುದು.

**ಚಟುವಟಿಕೆ: 2** ಜೀವನ ಶೈಲಿ ಪಟ್ಟಿ ಮಾಡಿ ಚರ್ಚಿಸೋಣ

ಬೇಟೆಗಾರ ಮತ್ತು ಸಂಗ್ರಹಕಾರ ಜನರ ಜೀವನ ಶೈಲಿ ಹಾಗೂ ಪ್ರಸ್ತುತ ಜನರ ಜೀವನ ಶೈಲಿ ಪಟ್ಟಿ ಮಾಡಲು ಹೇಳುವುದು. ನಂತರ ಅವೆರಡನ್ನು ಹೋಲಿಸಿ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಅರ್ಥೈಸಿಕೊಳ್ಳಲು ಅವಕಾಶ ನೀಡುವುದು.

**ಕಲಿಕಾ ಹಾಳೆ: 7**

**ಚಟುವಟಿಕೆ: 1** ಜಾಜಿಯ ಕಥೆಯನ್ನು ಓದಿ ಚರ್ಚಿಸೋಣ

ಮಕ್ಕಳಿಗೆ ಮೊದಲು ಕಥೆ ಓದಲು ಸೂಚನೆ ನೀಡುವುದು. ತರುವಾಯ ಸುಗಮಕಾರರು ತಾವೊಮ್ಮೆ ಕಥೆಯನ್ನು ಓದುವುದು. ನಂತರ ಕಥೆಯನ್ನಾಧರಿಸಿ ಪ್ರಶ್ನೆಗಳನ್ನು ಕೇಳುತ್ತಾ ಕಥೆಯ ಮುಖ್ಯ ವಿಷಯಾಂಶಗಳನ್ನು ಮಕ್ಕಳೊಂದಿಗೆ ಚರ್ಚಿಸುವುದು. ಈ ಒಂದು ಕಥೆಯ ಮೂಲಕ ಆದಿವಾಸಿಗಳ ಜೀವನ ಶೈಲಿಯನ್ನು ಮತ್ತು ಅವರು ವಲಸೆ ಹೋಗಲು ಕಾರಣಗಳನ್ನು ಅರ್ಥೈಸುವುದು ಚಟುವಟಿಕೆಯ ಉದ್ದೇಶವಾಗಿದೆ.

**ಕಲಿಕಾ ಹಾಳೆ: 8**

**ಚಟುವಟಿಕೆ: 1** ಈ ಕೆಳಗಿನ ಚಿತ್ರದಲ್ಲಿರುವ ಆಯುಧಗಳನ್ನು ಹೆಸರಿಸಿ. ಇವುಗಳನ್ನು ಯಾವುದಕ್ಕೆ ಬಳಸುತ್ತಿದ್ದರು ಬರೆಯೋಣ.

ಚಿತ್ರಗಳಲ್ಲಿರುವ ಆಯುಧಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ಹೆಸರಿಸಲು ಮತ್ತು ಇವುಗಳನ್ನು ಏಕೆ ಬಳಸುತ್ತಿದ್ದರು? ತಿಳಿಸಲು ಹೇಳುವುದು ನಂತರ ಪ್ರಸ್ತುತ ಬಳಸುತ್ತಿರುವ ಆಯುಧಗಳಿಗೂ ಹಿಂದೆ ಬಳಸುತ್ತಿದ್ದ ಆಯುಧಗಳಿಗೂ ಏನಾದರೂ ವ್ಯತ್ಯಾಸಗಳಿವೆಯೆ? ಎಂಬುದನ್ನು ಗುಂಪು ಚರ್ಚೆ ಮಾಡಲು ಅವಕಾಶ ನೀಡುವುದು.

**ಚಟುವಟಿಕೆ: 2** ಪ್ರಸ್ತುತ ಇಂತಹ ಬೇಟೆಗಾರ ಸಮುದಾಯಗಳಿವೆಯೇ? ಇರುವುದಾದರೆ ಎಲ್ಲಿ ಇವೆ? ನಿಮ್ಮ ಮನೆಯ ಸದಸ್ಯರು ಮತ್ತು ಶಿಕ್ಷಕರ ಜೊತೆ ಚರ್ಚಿಸಿ ತಿಳಿದುಕೊಳ್ಳಿ.

ಈ ಹಿಂದೆ ಇದ್ದಂತಹ ಬೇಟೆಗಾರರ ಸಮುದಾಯಗಳು ಪ್ರಸ್ತುತದಲ್ಲೂ ಇರುವವೇ? ಇರುವುದಾದರೆ ಅವು ಪ್ರಸ್ತುತ ದಿನಗಳಲ್ಲಿ ಎಲ್ಲಿವೆ? ಯಾವ ತರಹದ ಜೀವನ ನಡೆಸುತ್ತಿವೆ? ಎಂಬುದನ್ನು ಮಕ್ಕಳೊಂದಿಗೆ ಚರ್ಚಿಸುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 6 ರಲ್ಲಿ ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

## ಕಲಿಕಾಂಶ 5 – ಮಾನವ ನೆಲೆಯೂರುವಿಕೆ

**ಕಲಿಕಾಫಲ 5: ಮಾನವ ನೆಲೆಯೂರುವಿಕೆ, ಕೃಷಿ ಮತ್ತು ಪ್ರಾಣಿಗಳ ಸಾಕಣಿಕೆಯ ಕುರಿತು ಹೇಳುವರು**

**ಉದ್ದೇಶ:**

- ಮನುಷ್ಯನು ಕೃಷಿ ಚಟುವಟಿಕೆಯನ್ನು ಪ್ರಾರಂಭಿಸಿದ ಬಗೆಯನ್ನು ತಿಳಿಯುವರು.
- ಬೇಟೆಗಾರ ಮತ್ತು ಸಂಗ್ರಹಕಾರ ಜನರು ಒಂದೆಡೆ ನೆಲೆಯೂರುವುದಕ್ಕೆ ಕಾರಣವಾದ ಅಂಶಗಳನ್ನು ಅರಿಯುವರು.
- ಆಧುನಿಕ ಕೃಷಿಗೂ ಮತ್ತು ಅಂದಿನ ಕೃಷಿಗೂ ಇರುವ ಭಿನ್ನತೆಯನ್ನು ಗುರುತಿಸುವರು.

**ಕಲಿಕಾ ಸಾಮಗ್ರಿಗಳು:** ಚಿತ್ರಪಟಗಳು, ಕಥೆ.

**ಪ್ರಕ್ರಿಯೆ:** ಸುಗಮಕಾರರು ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ನಂತರ ಕೆಲವು ಪ್ರಶ್ನೆಗಳನ್ನು ಕೇಳಿ ನಾವು ಬಳಸುವ ಕಾಳು, ತರಕಾರಿ, ಹಣ್ಣು, ಸೊಪ್ಪು ಎಲ್ಲಿಂದ ನಮಗೆ ದೊರೆಯುತ್ತವೆ? ಎಂದು ಪ್ರಶ್ನಿಸಿ ಮಕ್ಕಳ ಪ್ರತಿಕ್ರಿಯೆ ಪಡೆದು ಕೃಷಿ ಹೇಗೆ ಪ್ರಾರಂಭವಾಯಿತು ಮತ್ತು ಹೇಗೆ ಮಾಡುತ್ತೇವೆ? ಎಂಬುದನ್ನ ಚರ್ಚಿಸುವುದು. ನಂತರ ಒಂದು ಕಥೆಯ ಮೂಲಕ ಇದನ್ನು ಅರ್ಥೈಸಿಕೊಳ್ಳಲು ಅವಕಾಶ ನೀಡುವುದು.

**ಕಲಿಕಾ ಹಾಳೆ: 9**

**ಚಟುವಟಿಕೆ: 1** ಮಕ್ಕಳೇ, ಬೆಳಗ್ಗೆ ತಿಂಡಿ ತಿಂದಿದ್ದೀರಿ. ಮಧ್ಯಾಹ್ನ ಊಟ ಮಾಡಿದ್ದೀರಿ. ಹಸಿವಾದಾಗ ನಾವು ಊಟ ಮಾಡುತ್ತೇವೆ. ನಾವು ಯಾವೆಲ್ಲಾ ತರಕಾರಿ, ಕಾಳು, ಹಣ್ಣು ತಿನ್ನುತ್ತೇವೆ ಇಲ್ಲಿ ಬರೆಯಿರಿ.

ಮಕ್ಕಳೇ ಪಟ್ಟಿ ಮಾಡಲು ಅವಕಾಶ ನೀಡಿ ಅದನ್ನು ಅವರು ಪ್ರಸ್ತುತಪಡಿಸಿದ ನಂತರ ಗುಂಪು ಚರ್ಚೆ ನಡೆಸಬೇಕು.

**ಕಲಿಕಾ ಹಾಳೆ: 10**

**ಕಲಿಕಾ ಹಾಳೆಯ ಚಟುವಟಿಕೆಗಳನ್ನು ಒಮ್ಮೆ ಅವಲೋಕಿಸಿರಿ.**

**ಚಟುವಟಿಕೆ: 1** ಮೊದಲ ಬೆಳೆಯ ಬಗ್ಗೆ ಅವರೇನು ಚರ್ಚಿಸಿಕೊಳ್ಳುತ್ತಿದ್ದರು. ನೀವು ಅವರ ಸ್ಥಳದಲ್ಲಿ ಮೊದಲು ಹೀಗೆ ಬೀಜ ಮೊಳಕೆಯಾಗುವುದನ್ನು ನೋಡಿದ್ದರೆ ಏನು ಮಾಡುತ್ತಿದ್ದಿರಿ? ತಮ್ಮ ತಮ್ಮಲ್ಲಿ ಚರ್ಚಿಸಿ ಎರಡು ವಾಕ್ಯಗಳನ್ನು ಈ ಕೆಳಗೆ ಬರೆಯಿರಿ.

**ಚಟುವಟಿಕೆ: 2** ಅಲ್ಲಿ ನೆರೆದಿದ್ದ ತಾಯಂದಿರು, ಅಜ್ಜಿಯಂದಿರು ಏನೇನು ಮಾತಾಡಿಕೊಂಡಿರಬಹುದು? (ಗೆಳೆಯರ ಜೊತೆ ಮಾತಾಡಿ ಉತ್ತರಿಸಿ) ಮುಂದೆ ಅವರೇನು ಮಾಡಿರಬಹುದು?

ಮೇಲಿನ ಎರಡು ಚಟುವಟಿಕೆಗಳಲ್ಲೂ ಮಕ್ಕಳೇ ಯೋಚಿಸಿ ಪ್ರತಿಕ್ರಿಯಿಸಲು ಅವಕಾಶ ನೀಡುವುದು ಮತ್ತು ಅದರ ಮೇಲೆ ಚರ್ಚಿಸುವುದು.

**ಚಟುವಟಿಕೆ: 3** ಕೃಷಿ ಕಥೆಯಲ್ಲಿದ್ದಂತೆ ತಾವೇ ಬೆಳೆದದ್ದು ಒಂದು ಸಣ್ಣ ಆಕಸ್ಮಿಕ ಎಂಬಂತೆ ಸಂಭವಿಸಿದರೂ ಮಾನವರು ಬೇಟೆಗಾರರಿಂದ ಬೇಸಾಯಗಾರರಾಗಲು ನೂರಾರು ವರ್ಷಗಳು ಸಂದಿವೆ. ಇಷ್ಟೂ ವರ್ಷಗಳಲ್ಲಿ ಅವರು ಹಂತ ಹಂತವಾಗಿ ಬೇಸಾಯ ಮಾಡಲು ಏನೆಲ್ಲಾ ಕಲಿತು ಕೊಳ್ಳಬೇಕಾಯಿತು ಎಂಬ ಅಂಶಗಳನ್ನು ಚರ್ಚಿಸಿರಿ.

ಮಕ್ಕಳ ಪ್ರತಿಕ್ರಿಯೆಯನ್ನು ಪಡೆದು ಅವುಗಳನ್ನು ಕ್ರೂಢೀಕರಿಸಿ ಕೃಷಿ ಬೆಳೆದು ಬಂದ ದಾರಿಯನ್ನು ಅರ್ಥೈಸಿರಿ.

**ಚಟುವಟಿಕೆ: 4** ಬೇಸಾಯ ಮಾಡಲು ಇರುವ ಅಗತ್ಯತೆಗಳ ಪಟ್ಟಿಮಾಡಿ. ಬೇಸಾಯ ಮಾಡಲು ಶುರು ಮಾಡಿದ ಮೇಲೆ ಮಾನವರ ಜೀವನದಲ್ಲಾದ ಬದಲಾವಣೆಗಳು ಏನಿರಬಹುದು? ಯೋಚಿಸಿ.

ಮಕ್ಕಳ ಪ್ರತಿಕ್ರಿಯೆನ್ನು ಪಡೆದು ಅವುಗಳನ್ನು ಕ್ರೂಢೀಕರಿಸಿ ಮನುಷ್ಯ ಇತಿಹಾಸದ ವಲಸೆಯ ಕಾಲಘಟ್ಟವನ್ನು ದಾಟಿ ಅವನು ಒಂದೆಡೆ ನೆಲಸಲು ಶುರುಮಾಡಿದ ಔಚಿತ್ಯವನ್ನು ಚರ್ಚಿಸುವುದು.

**ಚಟುವಟಿಕೆ: 5** ಕೃಷಿಗೆ ಬೇಕಾಗುವ ಉಪಕರಣಗಳು

ಮಕ್ಕಳಿಂದ ಹಿಂದೆ ಮತ್ತು ಇಂದು ಬಳಸುತ್ತಿರುವ ಕೃಷಿ ಉಪಕರಣಗಳ ಪಟ್ಟಿ ಮಾಡಿಸಿ. ಅವುಗಳಲ್ಲಿರುವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಮಕ್ಕಳೇ ಗುರುತಿಸಲು ಅವಕಾಶ ನೀಡುವುದು.

**ಶಿಕ್ಷಕರಿಗೆ ಸೂಚನೆ:** ಕಥೆಯನ್ನು ನೀವೇ ಮುಂದುವರಿಸಿ ಮಾನವರಿಗೆ ಲೋಹದ ಪರಿಚಯ ಹೇಗಾಯಿತು? ಯಾವೆಲ್ಲಾ ಲೋಹಗಳು ಪರಿಚಯವಾಯಿತು? ಇದರಿಂದ ಏನೆಲ್ಲಾ ಬದಲಾವಣೆಯಾಯಿತು ಎಂಬುದನ್ನ ಮಕ್ಕಳಿಗೆ ಅರ್ಥೈಸುವುದು.

**ಕಲಿಕಾ ಹಾಳೆ: 11**

**ಚಟುವಟಿಕೆ: 1** ಗೆಡ್ಡೆ-ಗೆಣಸು ತಿನುತ್ತ ಬೇಟೆಯಾಡುತ್ತ ಜೀವನ ನಡೆಸುತ್ತಿದ್ದ ಕಾಲದಿಂದ ಒಂದೆಡೆ ನೆಲೆನಿಂತು ನಗರ/ಗ್ರಾಮಗಳಲ್ಲಿ ವಾಸಿಸುವವರೆಗೆ ಮನುಷ್ಯರು ಬೆಳೆದು ಬಂದ ದಾರಿಯನ್ನು ವಿವರಿಸಿ.

ಮಕ್ಕಳೆ ಉತ್ತರಿಸಲು ಅವಕಾಶ ನೀಡುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 11 ರ ಈ ಚಟುವಟಿಕೆ 1 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

**ಕಲಿಕಾಂಶ 6 – ನಾಗರಿಕತೆ**

**ಕಲಿಕಾಫಲ 6: ಜಗತ್ತಿನಲ್ಲಿ ವಿವಿಧ ನದಿಗಳ ದಡದ ಮೇಲೆ ಉದಯವಾದ ಪ್ರಾಚೀನ ನಾಗರೀಕತೆಗಳನ್ನು ಹೆಸರಿಸುವರು. ಸಿಂಧೂನಾಗರೀಕತೆಯನ್ನು ಕುರಿತು ವಿವರಣೆ ನೀಡುವರು.**

**ಉದ್ದೇಶ:**

- ಜಗತ್ತಿನ ಪ್ರಮುಖ ನಾಗರೀಕತೆಗಳು ಮತ್ತು ಅವು ಏಳಿಗೆಗೆ ಕಾರಣವಾದ ನದಿ ಬಯಲುಗಳನ್ನು ಗುರುತಿಸುವರು.
- ಸಿಂಧೂ ನಾಗರಿಕತೆ ಮತ್ತು ನಗರ ಯೋಜನೆಯ ಕೊಡುಗೆಗಳನ್ನು ಅರಿಯುವರು.
- ಪ್ರಸ್ತುತ ಜನಜೀವನಕ್ಕೂ ನಾಗರೀಕತೆಗಳ ಕಾಲಕ್ಕೂ ಇರುವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವರು.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಮಕ್ಕಳ ಪೂರ್ವಜ್ಞಾನವನ್ನು ಚರ್ಚೆಯಿಂದ ಅರಿಯುವುದು. ಚಟುವಟಿಕೆ ಮೂಲಕ ಭೂಪಟದಲ್ಲಿ ಪ್ರಪಂಚದ ಪ್ರಮುಖ ನಾಗರಿಕತೆಗಳು ಉಗಮವಾದ ಸ್ಥಳ ಮತ್ತು ನದಿ ಬಯಲು ಪ್ರದೇಶಗಳನ್ನು ಗುರುತಿಸಲು ಮಕ್ಕಳಿಗೆ ಅವಕಾಶ ನೀಡುವುದು. ನಂತರ ಬಹುಪಾಲು ನಾಗರೀಕತೆಗಳು ನದಿ ತೀರದಲ್ಲೇ ಏಕೆ ಹುಟ್ಟಿವೆ ಎಂಬುದರ ಮೇಲೆ ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಅಭಿಪ್ರಾಯ ಸೂಚಿಸುವರು. ಮಕ್ಕಳ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಅರ್ಥೈಸುವುದು. ಸಿಂಧೂ ಬಯಲಿನ ನಾಗರಿಕತೆ ಮತ್ತು ಅದರ ಕೊಡುಗೆಗಳ ಬಗ್ಗೆ ಮತ್ತು ಪ್ರಸ್ತುತ ನಗರ ಸಮಸ್ಯೆಗಳಿಗೆ ಅಂದಿನ ನಗರ ಯೋಜನೆ ಹೇಗೆ ಮಾದರಿಯಾಗಿತ್ತು ಎಂಬುದನ್ನು ಚಟುವಟಿಕೆಗಳ ಮೂಲಕ ಅರ್ಥೈಸುವುದು.

**ಕಲಿಕಾ ಹಾಳೆ: 12**

**ಚಟುವಟಿಕೆ: 1** ಈ ಮೇಲಿನ ಭೂಪಟದ ಸಹಾಯದೊಂದಿಗೆ ಹೊಂದಿಸಿ ಬರೆಯಿರಿ

ಭೂಪಟವನ್ನು ಮಕ್ಕಳು ಗಮನಿಸಲು ಹೇಳುವುದು ಯಾವ ನಾಗರೀಕತೆಗಳು ಯಾವ ನದಿ ದಂಡೆಯ ಮೇಲೆ ಇದೆ ಎಂಬುದನ್ನು ಗುರುತಿಸಿ ಹೊಂದಿಸಿ ಬರೆಯಲು ತಿಳಿಸುವುದು. ಸುಗಮಕಾರರು ಪ್ರಪಂಚದ ಭೂಪಟವನ್ನು ಬಳಸಿ ನಾಗರಿಕತೆಗಳು ಅಸ್ತಿತ್ವದಲ್ಲಿದ್ದ ಪ್ರದೇಶಗಳನ್ನು ತಿಳಿಸಬಹುದು.

**ಚಟುವಟಿಕೆ: 2** ಈ ಮೇಲಿನ ಭೂಪಟವನ್ನು ಗಮನಿಸಿದಾಗ ನಾಗರೀಕತೆಗಳೆಲ್ಲವೂ ನದಿ ದಂಡೆಯ ತೀರದಲ್ಲೇ ಇವೆ. ನದಿ ತೀರದಲ್ಲೇ ಏಕೆ ಹುಟ್ಟಿರಬಹುದು?

ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಅಭಿಪ್ರಾಯ ಸೂಚಿಸಲು ಅವಕಾಶ ನೀಡುವುದು. ನಂತರ ಮಕ್ಕಳ ಅಭಿಪ್ರಾಯಗಳ ಕ್ರೂಢೀಕರಿಸಿ ಏಕೆ ಬಹುಪಾಲು ನಾಗರೀಕತೆಗಳು ನದಿ ದಂಡೆಯ ತೀರದಲ್ಲೇ ಇದ್ದವು ಎಂಬುದನ್ನು ಅರ್ಥೈಸುವುದು.

**ಕಲಿಕಾ ಹಾಳೆ: 13**

**ಚಟುವಟಿಕೆ: 1** ಕೆಳಗಿನ ಚಿತ್ರವನ್ನು ಗಮನಿಸಿ ಸಿಂಧೂ ಬಯಲಿನ ನಾಗರಿಕತೆಯ ನದಿಗಳು ಮತ್ತು ನಗರಗಳನ್ನು ಪಟ್ಟಿಮಾಡಿ

ಮಕ್ಕಳು ನೀಡಿರುವ ಭೂಪಟ ಚಿತ್ರವನ್ನು ಗಮನಿಸಲು ಹೇಳುವುದು. ಸಿಂಧೂ ನಾಗರೀಕತೆ ನದಿ ಮತ್ತು ನಗರಗಳನ್ನು ಗುರುತಿಸಿ ಪಟ್ಟಿಮಾಡಲು ತಿಳಿಸುವುದು. ಸುಗಮಕಾರರು ಭಾರತದ ಭೂಪಟವನ್ನು ಬಳಸಿ ಸಿಂಧೂ ನಾಗರೀಕತೆ ನದಿ ಮತ್ತು ನಗರಗಳನ್ನು ಗುರುತಿಸಲು ಹೇಳಬಹುದು. ನಂತರ ಸಿಂಧೂ ನಾಗರೀಕತೆಯ ಬಗ್ಗೆ ಅರ್ಥೈಸುವುದು.

**ಕಲಿಕಾ ಹಾಳೆ: 14**

**ಚಟುವಟಿಕೆ: 1** ಮಕ್ಕಳೇ, ನಿಮ್ಮ ಸುತ್ತಮುತ್ತಲಿನ ಪಟ್ಟಣದಲ್ಲಿರುವ ಪ್ರಮುಖ ಸಮಸ್ಯೆಗಳನ್ನು ಮತ್ತು ನೀವು ಭೇಟಿ ನೀಡಿರುವ ನಗರ ಅಥವಾ ಪಟ್ಟಣಗಳ ಪ್ರಮುಖ ಸಮಸ್ಯೆಗಳ ಕುರಿತು ಚರ್ಚಿಸಿ.

ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಮತ್ತು ಅವರು ನೋಡಿರುವ ನಗರ ಅಥವಾ ಪಟ್ಟಣಗಳಲ್ಲಿರುವ ಸಮಸ್ಯೆಗಳ ಹೇಳಲು ತಿಳಿಸುವುದು. ಈ ಸಮಸ್ಯೆಗಳಿಗೆ ಏನು ಕಾರಣವಿರಬಹುದು ಎಂಬುದರ ಬಗ್ಗೆ ಮಕ್ಕಳು ಗುಂಪು ಚರ್ಚೆ ಮಾಡಿ ಉತ್ತರಿಸಲು ಅವಕಾಶ ನೀಡುವುದು. ಮಕ್ಕಳು ನೀಡಿದ ಉತ್ತರಗಳನ್ನು ಕ್ರೂಢೀಕರಿಸುವುದು.

**ಚಟುವಟಿಕೆ:2** ಕೆಳಗಿನ ಚಿತ್ರಗಳನ್ನು ನೋಡಿ ಹರಪ್ಪ ಮತ್ತು ಮಹೆಂಜೊದಾರೊ ನಗರ ಯೋಜನೆ ಬಗ್ಗೆ ಚರ್ಚಿಸೋಣ.

ಮಕ್ಕಳು ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಲು ಹೇಳುವುದು. ನಂತರ ಆ ಚಿತ್ರಗಳು ಯಾವುದಕ್ಕೆ ಸಂಬಂಧಿಸಿವೆ ಚರ್ಚಿಸಿ ಹರಪ್ಪ ಮತ್ತು ಮಹೆಂಜೊದಾರೊ ನಗರ ಯೋಜನೆಗಳು ಪ್ರಸ್ತುತ ನಗರದ ಸಮಸ್ಯೆಗಳಿಗೆ ಹೇಗೆ ಪರಿಹಾರವಾಗಬಲ್ಲವು ಮತ್ತು ಹೇಗೆ ಇಂದಿಗೂ ಮಾದರಿಯಾಗಿವೆ ಎಂಬುದನ್ನು ಮಕ್ಕಳು ಮನಗಾಣುವಂತೆ ಮಾಡುವುದು.

**ಕಲಿಕಾ ಹಾಳೆ: 15**

**ಚಟುವಟಿಕೆ: 1** ಚಿತ್ರಗಳನ್ನು ನೋಡಿ ಮಾತನಾಡೋಣ.

ಚಿತ್ರಗಳನ್ನು ಮಕ್ಕಳು ಗಮನಿಸಲು ಹೇಳುವುದು. ಚಿತ್ರಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಮಕ್ಕಳ ಪ್ರತಿಕ್ರಿಯೆಯನ್ನು ಪಡೆದು ಅವುಗಳನ್ನು ಕ್ರೂಢೀಕರಿಸಿ ಹೇಳುವುದು.

**ಕಲಿಕಾ ಹಾಳೆ: 16**

**ಚಟುವಟಿಕೆ: 1** ಮಕ್ಕಳೇ, ಕಾಲಕ್ರಮೇಣ ಈ ನಾಗರಿಕತೆಗಳ ನಗರಗಳು ಅವನತಿ ಹೊಂದಲು ಆರಂಭಿಸುತ್ತವೆ ಇದಕ್ಕೆ ಕಾರಣ ಏನಿರಬಹುದು ಯೋಚಿಸಿ? ಚರ್ಚಿಸಿ.

ಮಕ್ಕಳ ಪ್ರತಿಕ್ರಿಯೆ ಪಡೆದು ನಾಗರಿಕತೆಗಳು ಯಾವೆಲ್ಲಾ ಕಾರಣಗಳಿಂದ ಅವನತಿ ಹೊಂದಿರಬಹುದು ಎಂಬುದನ್ನು ಚರ್ಚಿಸಿ ಅರ್ಥೈಸುವುದು.

**ಚಟುವಟಿಕೆ: 2** ಸಿಂಧೂ ನಾಗರಿಕತೆಯಿಂದ ನಾವು ಏನನ್ನು ತಿಳಿಯಬಹುದು.

**ಮೌಲ್ಯಮಾಪನ:** ಕಲಿಕಾಹಾಳೆ 16 ರ ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

ಈ ಚಟುವಟಿಕೆಯಲ್ಲಿ ಪರಿಸರಪೂರಕ ಜೀವನ, ಸುಸ್ಥಿರ ಅಭಿವೃದ್ಧಿ ಅಂಶಗಳನ್ನು ಸಮನ್ವಯಗೊಳಿಸುತ್ತಾ ಚರ್ಚಿಸಿರಿ.

## ಕಲಿಕಾಂಶ 7– ವೇದಗಳ ಕಾಲ

**ಕಲಿಕಾ ಫಲ 7: ದನಗಾಯಿ ಸಮಾಜದ ಉದಯ ಮತ್ತು ವೇದಗಳ ಕಾಲದ ಕುರಿತು ವಿವರಿಸುವರು.**

**ಉದ್ದೇಶ:**

- ವೇದಗಳ ಕಾಲದಲ್ಲಿಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವರು ಮತ್ತು ಪ್ರಸ್ತುತಕ್ಕೆ ಹೋಲಿಸುವರು.
- ಕೃಷಿ ಮತ್ತು (ದನಗಾಯಿ) ಪಶುಸಂಗೋಪನ ಸಮುದಾಯದ ಜೀವನ ಶೈಲಿಯನ್ನು ಅರಿಯುವರು.

**ಪ್ರಕ್ರಿಯೆ:** ಸುಗಮಕಾರರು ಮಕ್ಕಳನ್ನು ಕಲಿಕೆಗೆ ಅಣಿಗೊಳಿಸಿ ಪೂವ–ಋಗ್ವೇದ ಹಾಗೂ ಉತ್ತರ ಋಗ್ವೇದ ಕಾಲದಲ್ಲಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸುವುದು. ಇದರ ಮೇಲೆ ಚರ್ಚಿಸುವುದು. ಈ ವೇಳೆ ಪೂರ್ವ ಮತ್ತು ಉತ್ತರ ವೇದಗಳ ಕಾಲದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿನ ವ್ಯತ್ಯಾಸಗಳನ್ನು ಅರ್ಥೈಸಿ ಪ್ರಸ್ತುತಕ್ಕೆ ಪೂರ್ವ ವೈದಿಕಕಾಲ ಹೇಗೆ ಮಾದರಿಯಾಗಿದೆ ಎಂಬುದನ್ನು ಅರ್ಥೈಸುವುದು. ನಂತರ ವೇದಗಳ ಕಾಲಕ್ಕೆ ಸಂಬಂಧಿಸಿದಂತೆ ನೀಡಿರುವ ಹೇಳಿಕೆಗಳಲ್ಲಿ ಸರಿ ತಪ್ಪು ಗುರುತಿಸಲು ಹೇಳುವುದು. ವೇದಗಳ ಕಾಲದ ಜೀವನ ಶೈಲಿಗೂ ಇಂದಿನ ಜೀವನ ಶೈಲಿಗೂ ಇರುವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಮಕ್ಕಳು ಗುರುತಿಸುವಂತೆ ಚರ್ಚಿಸುವುದು ಬಹುಮುಖ್ಯವಾದ ಅಂಶವಾಗಿದೆ.

**ಕಲಿಕಾ ಹಾಳೆ: 17**

**ಚಟುವಟಿಕೆ: 1** ಮಕ್ಕಳೇ, ಪೂರ್ವ ಋಗ್ವೇದ ವೇದ ಹಾಗೂ ಉತ್ತರ ಋಗ್ವೇದ ವೇದಗಳ ಕಾಲದಲ್ಲಿನ ಪ್ರಮುಖ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

ಮಕ್ಕಳು ವೇದಗಳ ಕಾಲದ ಬಗ್ಗೆ ಚಟುವಟಿಕೆ ಹಾಳೆಯಲ್ಲಿ ನೀಡಿರುವ ಮಾಹಿತಿಯನ್ನು ಮಕ್ಕಳು ಓದಲು ಹೇಳುವುದು. ನಂತರ ಸುಗಮಕಾರರು ಒಮ್ಮೆ ಓದಿ ಪೂರ್ವ ವೇದ ಹಾಗೂ ಉತ್ತರ ವೇದಗಳ ಕಾಲದಲ್ಲಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಲು ಮಕ್ಕಳಿಗೆ ಹೇಳುವುದು. ನಂತರ ಮಕ್ಕಳ ಮಾಹಿತಿ ಮೇಲೆ ಚರ್ಚಿಸುವಾಗ ಪೂರ್ವವೇದ ಕಾಲದಲ್ಲಿದ್ದ ಸಮಾನತೆಯ ವಿಚಾರಗಳಿಗೆ ಒತ್ತು ನೀಡುವುದು. ಬಹುಮುಖ್ಯವಾಗಿ ಸ್ತ್ರೀ–ಪುರುಷರು ಸಮಾನವಾದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇಲ್ಲಿ ಯಾವುದೇ ನಿರ್ದಿಷ್ಟವಾದ ಕೆಲಸಗಳ ಹಂಚಿಕೆ ಇರಲಿಲ್ಲ, ತಾರತಮ್ಯಗಳಿಲ್ಲದೆ ತಮಗಿಷ್ಟವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ನಾವಿಂದು ಸಂವಿಧಾನದ ಆಶಯದಲ್ಲಿ ಹೇಳುತ್ತಿರುವ ಸಮಾಜ ಇದೆ ಎಂಬುದನ್ನು ಮಕ್ಕಳಿಗೆ ತಲುಪಿಸಲೇಬೇಕಾದ ಅಗತ್ಯತೆಯಿದೆ. ಈ ಸಾಮರಸ್ಯ, ತಾರತಮ್ಯ ರಹಿತ ಸಮಾಜವು ನಾವು ಭವಿಷ್ಯದಲ್ಲಿ ನೋಡುತ್ತಿರುವ ಭಾರತದ ಆಶಯವಾಗಿದೆ. ಮುಂದೆ ಉತ್ತರ ವೇದಕಾಲದಲ್ಲಿ ಸ್ತ್ರೀಯರ ಸ್ಥಾನಮಾನ ಹೇಗೆ ಕ್ಷೀಣಿಸುತ್ತಾ ಹೋಯಿತು, ಹೇಗೆ ಅಸಮಾನತೆಯ ಸಮಾಜ ಸೃಷ್ಟಿಯಾಯಿತು ಎಂಬ ಸ್ಪಷ್ಟತೆಯನ್ನು ಮಕ್ಕಳಲ್ಲಿ ತರಬೇಕು. ಜೊತೆಗೆ ಅಂದಿನ ಶಿಕ್ಷಣ ವ್ಯವಸ್ಥೆ ಬಗ್ಗೆ ತಿಳಿಸಬೇಕು.

**ಚಟುವಟಿಕೆ: 2** ಉತ್ತರ ವೇದಗಳ ಕಾಲದಲ್ಲಿ ಆಹಾರದ ಕೊರತೆ ಉಂಟಾಗಲು ಕಾರಣವೇನು ತಿಳಿಸಿ.

**ಚಟುವಟಿಕೆ: 3** ಕೆಳಗೆ ನೀಡಲಾದ ಹೇಳಿಕೆಗಳನ್ನು ಸರಿ ಅಥವಾ ತಪ್ಪು ಎಂದು ಗುರುತಿಸಿ ಬರೆಯಿರಿ.

**ಚಟುವಟಿಕೆ: 4 ಈ** ಕೆಳಗೆ ವೇದಗಳ ಕಾಲದ ಕೆಲವು ದೇವತೆಗಳ ಕಾಲ್ಪನಿಕ ಚಿತ್ರಗಳನ್ನು ನೀಡಲಾಗಿದೆ. ಅವುಗಳಿಗೆ ಬಣ್ಣ ಹಚ್ಚಿ ಅವುಗಳ ಹೆಸರನ್ನು ಬರೆಯಿರಿ.

ಮೇಲಿನ ಮೂರು ಚಟುವಟಿಕೆಗಳನ್ನು ನೀಡಿರುವ ಸೂಚನೆಯಂತೆ ಮಾಡಲು ಹೇಳುವುದು ಮತ್ತು ಅದರ ಮೇಲೆ ಚರ್ಚಿಸುವುದು.

**ಚಟುವಟಿಕೆ: 5** ಚಿತ್ರಕ್ಕೆ ಬಣ್ಣ ಹಚ್ಚು ಮತ್ತು ನಿನ್ನ ಶಾಲೆಯ ಶಿಕ್ಷಣಕ್ಕೂ ಅಂದಿನ ಶಿಕ್ಷಣ ವ್ಯವಸ್ಥೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. ಸುಗಮಕಾರರು, ವೈದಿಕ ಕಾಲದ ಶಿಕ್ಷಣ ಪದ್ಧತಿ ಮತ್ತು ಇಂದು ನಾವು ಶಾಲೆಯ ಪರಿಸರದಲ್ಲಿ ಕಲಿಯುವ ಶಿಕ್ಷಣ ಪದ್ಧತಿಯಲ್ಲಿನ ಭಿನ್ನತೆ ಮತ್ತು ಸಾಮ್ಯತೆಯನ್ನು ಗುರುತಿಸಬೇಕು.

**ಮೌಲ್ಯಮಾಪನ:** ಕಲಿಕಾಹಾಳೆ 17 ರ ಚಟುವಟಿಕೆ 3 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

## ಕಲಿಕಾಂಶ 8– ಹೊಸ ಮತಗಳ ಉದಯ

**ಕಲಿಕಾಫಲ : 8 ಹೊಸ ಮತಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ಮತ್ತು ಬೌದ್ಧ, ಜೈನ ಧರ್ಮದ ಬಗ್ಗೆ ತಿಳಿದುಕೊಳ್ಳುವರು.**

**ಉದ್ದೇಶ:**

- ಮತಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ಅರಿಯುವರು.
- ಗೌತಮ ಬುದ್ಧ ಮತ್ತು ಮಹಾವೀರರ ಉಪದೇಶಗಳನ್ನು ಅರ್ಥೈಸಿಕೊಳ್ಳುವುದು.
- ಬೌದ್ಧ ಮತ್ತು ಜೈನ ಮತಗಳ ತತ್ವಗಳು ಎಷ್ಟರ ಮಟ್ಟಿಗೆ ಇಂದಿಗೂ ಪ್ರಸ್ತುತವಾಗಿವೆ ಎಂದು ಗ್ರಹಿಸುವುದು.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ನಂತರ ಮತಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ಮಕ್ಕಳು ತಿಳಿಯುವಂತೆ ಮಾಡುವುದು. ಗೌತಮ ಬುದ್ದನ ಚಿತ್ರಸರಣಿಯ ಮೇಲೆ ಚರ್ಚಿಸಿ ಮತ್ತು ಕಿಸಾಗೋತಮಿ ನಾಟಕವನ್ನು ಮಾಡಿಸಿ ಅವನ ಜೀವನ ಚರಿತ್ರೆಯನ್ನು ಮತ್ತು ಉಪದೇಶಗಳನ್ನು ಅರ್ಥೈಸುವುದು. ಚಿತ್ರಪಟಗಳನ್ನು ಬಳಸಿ ಬೌದ್ದ ಧರ್ಮದ ವಾಸ್ತುಶಿಲ್ಪಗಳನ್ನು ಪರಿಚಯಿಸುವುದು. ನಂತರ ಜೈನ ಧರ್ಮ ಮತ್ತು ಮಹಾವೀರನ ಬೋಧನೆಗಳನ್ನು ಅರ್ಥೈಸುವುದು. ಮತಗಳು ಮನುಷ್ಯನ ಜೀವನದ ಆಚರಣೆಗಳಿಗೆ ಸಂಬಂಧಿಸಿರುವುದು. ಧರ್ಮಗಳ ಸಾಮರಸ್ಯವೇ ಈ ವಿಶ್ವದ ಶಾಂತಿಯ ಮಂತ್ರ ಎನ್ನುವುದನ್ನು ಮಕ್ಕಳಿಗೆ ಸಾರಿ ಹೇಳುವುದು. ಸಚ್ಚಾರಿತ್ರ್ಯ ಎಲ್ಲಾ ಧರ್ಮಗಳಲ್ಲಿಯೂ ಮೂಲಾಂಶವಾಗಿದೆ. ಇವು ನಮ್ಮ ಜೀವನವನ್ನು ಸರಳ ಹಾಗೂ ಸಾರ್ಥಕತೆಗೆ ಕೊಂಡೊಯ್ಯುತ್ತದೆ ಎಂಬುದನ್ನು ಮಕ್ಕಳಿಗೆ ಅರ್ಥೈಸುವುದು ಮುಖ್ಯ.

### ಕಲಿಕಾ ಹಾಳೆ: 18

**ಚಟುವಟಿಕೆ: 1** ನಿಮ್ಮ ಊರು ಅಥವಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಲಸೆ ಬಂದಂತಹ ಜನರ ಕುರಿತು ಮಾಹಿತಿ ಸಂಗ್ರಹಿಸಿ ತರಗತಿಯಲ್ಲಿ ಚರ್ಚಿಸಿ.

ಸುಗಮಕಾರರು ಮನುಷ್ಯರ ಇತಿಹಾಸದ ವಲಸೆಯ ಕಾಲಘಟ್ಟವನ್ನು ದಾಟಿ ಅವರು ಒಂದೆಡೆ ನೆಲಸಲು ಶುರುಮಾಡಿದ ಔಚಿತ್ಯವನ್ನು ಚರ್ಚಿಸುವುದು. ಇಂದು ಜನರು ವಲಸೆ ಹೋಗುವ ಉದ್ದೇಶದೊಂದಿಗೆ ಈ ನಾಗರಿಕತೆಯ ವಿಷಯವನ್ನು ಪ್ರಸ್ತುತಕ್ಕೆ ತರುವುದೇ ಕಲಿಕಾಂಶದ ಉದ್ದೇಶವಾಗಿದೆ.

**ಚಟುವಟಿಕೆ: 2** ಜಾನುವಾರುಗಳು ದಿನನಿತ್ಯದ ಕೃಷಿ ಹಾಗೂ ಹೈನುಗಾರಿಕೆಯಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತದೆ ಎಂಬುದನ್ನು ಬರೆಯಿರಿ.

ಸುಗಮಕಾರರು ಜಾನುವಾರುಗಳ ಆರ್ಥಿಕ ಅನುಕೂಲಗಳನ್ನು ಹಾಗೂ ಕೃಷಿಯಲ್ಲಿ ಅವುಗಳ ಪಾತ್ರವನ್ನು ಚರ್ಚಿಸುವುದು. ಇಂದು ಕೃಷಿಯಲ್ಲಿ ಜಾನುವಾರು ಪಾತ್ರವನ್ನು ವಿಶ್ಲೇಷಿಸುವುದು. ಜಾನುವಾರುಗಳ ಅವಲಂಬನೆ ಈ ಯಂತ್ರಗಳ ಯುಗದಲ್ಲಿ ಹೇಗಿದೆ? ಎಂಬುದನ್ನು ಮಕ್ಕಳು ಅರಿಯುವಂತಾಗಬೇಕು.

### ಕಲಿಕಾ ಹಾಳೆ: 19

**ಚಟುವಟಿಕೆ: 1** ಚಿತ್ರಸರಣಿಯನ್ನು ಗಮನಿಸಿ, ಯೋಚಿಸಿ, ಚರ್ಚಿಸಿ.

ಚಿತ್ರಸರಣಿಯನ್ನು ಮಕ್ಕಳು ಓದಲು ಹೇಳುವುದು. ಸುಗಮಕಾರರು ಒಮ್ಮೆ ಓದುವುದು. ಈ ಚಟುವಟಿಕೆಯ ಮೂಲಕ ಗೌತಮಬುದ್ಧನ ಜೀವನ ಚರಿತ್ರೆಯನ್ನು ಪರಿಚಯಿಸಬಹುದು.

**ಚಟುವಟಿಕೆ: 2** ವೃದ್ಧರಿಗೆ ಅಥವಾ ಹಿರಿಯ ವಯಸ್ಕರಿಗೆ ದಿನನಿತ್ಯ ಜೀವನದಲ್ಲಿ ನೀವು ಮಕ್ಕಳಾಗಿ ಮಾಡಬಹುದಾದ ಸಹಾಯವನ್ನು ಗುರುತಿಸಿ ಬರೆಯಿರಿ.

ಮಕ್ಕಳೇ ಉತ್ತರಿಸುವಂತೆ ಅನುಕೂಲಿಸಬೇಕು ಮತ್ತು ಮಕ್ಕಳು ನೀಡಿದ ಉತ್ತರಗಳ ಮೇಲೆ ಚರ್ಚೆ ನಡೆಸುವುದು.

**ಚಟುವಟಿಕೆ: 3** ಕಿಸಾಗೋತಮಿ ನಾಟಕವನ್ನು ನಿಮ್ಮ ತರಗತಿಯಲ್ಲಿ ಅಭಿನಯಿಸಿ, ಚರ್ಚಿಸಿ

ಮಕ್ಕಳಿಂದ ನಾಟಕವನ್ನು ಮಾಡಿಸಿ ಮತ್ತು ನಾಟಕದ ಮೇಲೆ ಚರ್ಚಿಸಿ. ಬುದ್ಧನ ಬೋಧನೆಗಳನ್ನು ತಿಳಿಸಿ.

### ಕಲಿಕಾ ಹಾಳೆ: 20

**ಚಟುವಟಿಕೆ: 1** ಈ ಕೆಳಗೆ ಬೌದ್ಧ ಮತದ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ನೀಡಲಾಗಿದೆ. ಶಿಕ್ಷಕರ ಸಹಾಯವನ್ನು ಪಡೆದು ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ತಿಳಿದುಕೊಳ್ಳಿ ಹಾಗೂ ಚಿತ್ರಗಳ ಮೇಲೆ ಚರ್ಚಿಸಿ.

### ಕಲಿಕಾ ಹಾಳೆ: 21

**ಚಟುವಟಿಕೆ: 1** ಇಲ್ಲಿ ಕೆಲವು ಅಭ್ಯಾಸಗಳನ್ನು ಕೊಡಲಾಗಿದೆ. ಅವುಗಳಿಗೆ ಮಾಡುತ್ತೇನೆ ಅಥವಾ ಮಾಡುವುದಿಲ್ಲ ಎಂದು ಬರೆದು ಕಾರಣವನ್ನು ಬರೆಯಿರಿ.

ಸುಗಮಕಾರರು ಮಹಾವೀರರ ಬೋಧನೆಗಳನ್ನು ಅರ್ಥೈಸಿ ಮತ್ತು ಈ ಚಟುವಟಿಕೆಯ ಕೋಷ್ಟಕವನ್ನು ಮಕ್ಕಳಿಂದಲೇ ಭರ್ತಿಮಾಡಿಸಿ ಅದರ ಮೇಲೆ ಚರ್ಚಿಸಿ.

**ಚಟುವಟಿಕೆ: 2** ಮಹಾವೀರರ ಬೋಧನೆಗಳಿಂದ ನೀವು ಏನನ್ನು ತಿಳಿದುಕೊಂಡಿರಿ ತಿಳಿಸುವಿರಾ.

ಮಕ್ಕಳು ತಮ್ಮಗನಿಸಿದನ್ನು ಬರೆಯಲು ಅವಕಾಶವನ್ನು ನೀಡಿ. ಮೌಖಿಕವಾಗಿಯೂ ಪ್ರತಿಕ್ರಿಯೆ ಪಡೆಯಬಹುದು.

**ಚಟುವಟಿಕೆ: 3** ನೀವೇನಾದರೂ ನಾಯಿಗಳಿಗೆ ಕಲ್ಲನ್ನು ಹೊಡೆದು ಹಿಂಸೆ ಮಾಡಿದ್ದೀರಾ? ಅದು ಸರಿಯೇ? ತರಗತಿಯಲ್ಲಿ ನಿಮ್ಮ ಸ್ನೇಹಿತರೊಂದಿಗೆ ಚರ್ಚೆ ಮಾಡಿ.

ಮಕ್ಕಳ ಜೊತೆ ಗುಂಪು ಚರ್ಚೆಮಾಡಿ.

### ಕಲಿಕಾ ಹಾಳೆ: 22

**ಚಟುವಟಿಕೆ: 1** ಕರ್ನಾಟಕದ ಪ್ರಸಿದ್ಧ ಜೈನ ಹಾಗೂ ಬೌದ್ಧ ಮತದ  ಐತಿಹಾಸಿಕ ಸ್ಥಳಗಳು ಮತ್ತು ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಸಿ ಅವುಗಳ ಬಗ್ಗೆ ತಿಳಿದುಕೊಳ್ಳಿ.

ಮಕ್ಕಳಿಂದ ಚಿತ್ರಗಳನ್ನು ಸಂಗ್ರಹಿಸಿ ಅದರ ಮೇಲೆ ಚರ್ಚೆ ಮಾಡಿ.

**ಚಟುವಟಿಕೆ: 2** ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿಯ ಬಗ್ಗೆ ನಿಮಗೇನು ತಿಳಿದಿದೆ ಬರೆಯಿರಿ.

**ಚಟುವಟಿಕೆ: 3** ಬುದ್ಧ ಮತ್ತು ಮಹಾವೀರರ ಬೋಧನೆಗಳನ್ನು ಪಟ್ಟಿ ಮಾಡಿ.

ಮಕ್ಕಳು ಬರೆಯಲು ಹೇಳುವುದು.

**ಮೌಲ್ಯಮಾಪನ:** ಕಲಿಕಾಹಾಳೆ 22ರ ಚಟುವಟಿಕೆ 3ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ: 9 ಕ್ರೈಸ್ತ ಮತ್ತು ಇಸ್ಲಾಂ ಮತಗಳು

**ಕಲಿಕಾಫಲ 9: ಕ್ರೈಸ್ತ ಮತ್ತು ಇಸ್ಲಾಂ ಮತಗಳ ಬಗ್ಗೆ ಅರಿಯುವರು**

**ಉದ್ದೇಶ:**

- ಕ್ರೈಸ್ತ ಮತ್ತು ಇಸ್ಲಾಂ ಮತಗಳ ಬಗ್ಗೆ ತಿಳಿಯುವರು.
- ಯೇಸುಕ್ರಿಸ್ತ ಮತ್ತು ಪ್ರವಾದಿ ಮಹಮ್ಮದರ ಬೋಧನೆಗಳನ್ನು ಅರ್ಥಮಾಡಿಕೊಳ್ಳುವರು.

**ಕಲಿಕಾ ಸಾಮಗ್ರಿಗಳು: ಚಿತ್ರಪಟಗಳು**

**ಪ್ರಕ್ರಿಯೆ:** ಸುಗಮಕಾರರು ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ಯೇಸುಕ್ರಿಸ್ತರ ಜೀವನ ಮತ್ತು ಬೋಧನೆಗಳನ್ನು ಪರಿಚಯಿಸುವುದು. ಮಕ್ಕಳ ಜೊತೆ ಯೇಸುಕ್ರಿಸ್ತರ ಬೋಧನೆಗಳ ಮೇಲೆ ಗುಂಪು ಚರ್ಚೆ ಮಾಡಿಸುವುದು. ಗೋಲ್ಗೋಥ ನಾಟಕವನ್ನು ಮಾಡಿಸಿ ಚರ್ಚಿಸುವುದು. ಯೇಸುಕ್ರಿಸ್ತರ ಜೀವನದ ಮುಖ್ಯ ಸನ್ನಿವೇಶ ಚಿತ್ರಗಳ ನೀಡಿ ಅದರ ಮೇಲೆ ಬರೆಯಲು ಹೇಳುವುದು. ಇಸ್ಲಾಂ ಧರ್ಮ ಮತ್ತು ಇಸ್ಲಾಂ ಮತಗಳ ಬೋಧನೆಗಳನ್ನು ಪರಿಚಯಿಸುವುದು. ಅವುಗಳ ಮೇಲೆ ಚರ್ಚೆ ನಡೆಸುವುದು. ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮದ ಪ್ರವಾಸಿ ಸ್ಥಳಗಳ ಮಾಹಿತಿ ಸಂಗ್ರಹಿಸಲು ಹೇಳಿ ಅವುಗಳನ್ನು ಪರಿಚಯಿಸುವುದು. ಅಹಿಂಸೆ ಮತ್ತು ಸರಳ, ಶಾಂತಿಯುತ ಜೀವನವನ್ನು ನಡೆಸುವುದೆ ಎಲ್ಲಾ ಧರ್ಮಗಳ ಸಾರವೆಂಬುದನ್ನು ತಿಳಿಸಿ ಕೋಮು ಸೌಹಾರ್ದ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸುವುದು.

### ಕಲಿಕಾ ಹಾಳೆ: 23

**ಚಟುವಟಿಕೆ: 1** ತಪ್ಪು ಮಾಡಿದವನನ್ನು ಕ್ಷಮಿಸಿ ತಿದ್ದುವುದು ಸರಿಯಾದ ಕ್ರಮವೇ? ಹೇಗೆ? ತರಗತಿಯಲ್ಲಿ ಗೆಳೆಯರೊಂದಿಗೆ ಚರ್ಚಿಸಿ.

ಮಕ್ಕಳಿಂದ ಗುಂಪು ಚರ್ಚೆ ಮಾಡಿಸಿ.

**ಚಟುವಟಿಕೆ: 2** ನೀವು ತಪ್ಪು ಮಾಡಿದಾಗ ನಿಮ್ಮ ಮನೆಯ ಹಿರಿಯರು ನಿಮ್ಮನ್ನು ಕ್ಷಮಿಸಿದುದರ ಬಗ್ಗೆ ಬರೆಯಿರಿ.

ಮಕ್ಕಳೇ ಅವರ ಅನುಭವವನ್ನು ತಿಳಿಸುವ ಅವಕಾಶ ಮಾಡಿಕೊಡಿ.

**ಚಟುವಟಿಕೆ: 3** 'ಗೋಲ್ಗೋಥ' ನಾಟಕವನ್ನು ನಿಮ್ಮ ತರಗತಿಯಲ್ಲಿ ಅಭಿನಯಿಸಿ, ಚರ್ಚಿಸಿ.

ಮಕ್ಕಳಿಂದ ನಾಟಕ ಮಾಡಿಸಿ ಚರ್ಚಿಸಿ.

### ಕಲಿಕಾ ಹಾಳೆ: 24

**ಚಟುವಟಿಕೆ: 1** ಈ ಕೆಳಗೆ ಕ್ರೈಸ್ತ ಮತ ಹಾಗೂ ಇಸ್ಲಾಂ ಮತದ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಚಿತ್ರಗಳನ್ನು ನೀಡಲಾಗಿದೆ. ಶಿಕ್ಷಕರ ಸಹಾಯವನ್ನು ಪಡೆದು ಅವುಗಳಿಗೆ ಸಂಬಂದಿಸಿದ ಮಾಹಿತಿಯನ್ನು ಸಂಗ್ರಹಿಸಿ ತಿಳಿದುಕೊಳ್ಳಿ.

**ಚಟುವಟಿಕೆ: 2** ಈ ಕೆಳಗಿನ ಚಿತ್ರವನ್ನು ಕುರಿತು ನಾಲ್ಕೈದು ವಾಕ್ಯಗಳಲ್ಲಿ ಬರೆಯಿರಿ.

ಮಕ್ಕಳಿಗನಿಸಿದನ್ನು ಬರೆಯಲು ಅವಕಾಶ ಮಾಡಿಕೊಡಿ

### ಕಲಿಕಾ ಹಾಳೆ: 25

**ಚಟುವಟಿಕೆ: 1** ಮಹಮ್ಮದ್ ಪೈಗಂಬರರ ಕುರಿ ಕಾಯುವಾಗಿನ ಅನುಭವ ಏನಾಗಿರಬಹುದು? ಬರೆಯಿರಿ

**ಚಟುವಟಿಕೆ: 2** ಇಸ್ಲಾಮಿನ ತತ್ವಗಳನ್ನು ನಿತ್ಯಜೀವನದಲ್ಲಿ ಯಾವ ರೀತಿ ಕಾಣಬಹುದು? ತರಗತಿಯಲ್ಲಿ ಚರ್ಚಿಸಿ.

ಮಕ್ಕಳನ್ನು ಗುಂಪುಗಳಾಗಿ ಮಾಡಿ ಚರ್ಚಿಸಲು, ಮಂಡಿಸಲು ಅವಕಾಶ ಮಾಡಿಕೊಡಿ.

**ಚಟುವಟಿಕೆ: 3** ಈ ಮೇಲಿನ ಚಿತ್ರ ಏನಿರಬಹುದು? ಇದನ್ನು ಕುರಿತು ಬರೆಯಿರಿ.

**ಚಟುವಟಿಕೆ: 4** ಕ್ರೈಸ್ತ ಮತ್ತು ಇಸ್ಲಾಂ ಮತಗಳ ಪವಿತ್ರ ಗ್ರಂಥಗಳು ಯಾವುವು?

ಮಕ್ಕಳು ಉತ್ತರಿಸಲು ಅವಕಾಶನೀಡಿ.

**ಕಲಿಕಾ ಹಾಳೆ: 26**

**ಚಟುವಟಿಕೆ: 1** ಎಲ್ಲಾ ಮತಗಳಿಂದ ಕಲಿಯಬೇಕಾದ ಕೆಲವು ಅಭ್ಯಾಸಗಳನ್ನು ಇಲ್ಲಿ ಕೊಡಲಾಗಿದೆ. ಅವುಗಳಿಗೆ ಮಾಡುತ್ತೇನೆ ಅಥವಾ ಮಾಡುವುದಿಲ್ಲ ಎಂದು ಬರೆದು ಸಕಾರಣವನ್ನು ನೀಡಿ.

ಮಕ್ಕಳೇ ಉತ್ತರಿಸಲು ಅವಕಾಶ ಮಾಡಿಕೊಡಿ. ಮಕ್ಕಳ ಉತ್ತರಗಳ ಮೇಲೆ ಚರ್ಚಿಸಿ.

**ಕಲಿಕಾ ಹಾಳೆ: 27**

**ಚಟುವಟಿಕೆ; 1** ಪ್ರಶ್ನೆಗಳಿಗೆ ಉತ್ತರಿಸೋಣ.

ಕೇಳಿರುವ ಪ್ರಶ್ನೆಗಳಿಗೆ ಮಕ್ಕಳೇ ಉತ್ತರಿಸಲು ಅವಕಾಶ ಮಾಡಿಕೊಡಿ.

**ಚಟುವಟಿಕೆ: 2** ಕರ್ನಾಟಕದ ಪ್ರಸಿದ್ಧ ಕ್ರೈಸ್ತ ಹಾಗೂ ಇಸ್ಲಾಂ ಮತಗಳ ಪ್ರವಾಸಿ ಸ್ಥಳಗಳ ಚಿತ್ರಗಳನ್ನು ಸಂಗ್ರಹಸಿ ಅವುಗಳ ಬಗ್ಗೆ ತಿಳಿದುಕೊಳ್ಳಿ.

ಮಕ್ಕಳಿಂದ ಸಂಗ್ರಹಿಸಿ, ಪರಿಚಯಿಸಿ ಮತ್ತು ಅವುಗಳ ಮೇಲೆ ಚರ್ಚಿಸಿ.

**ಮೌಲ್ಯಮಾಪನ:** ಕಲಿಕಾ ಹಾಳೆ 27ರ ಚಟುವಟಿಕೆ 1ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ: 10 ಭಾರತದ ಪ್ರಮುಖ ರಾಜಮನೆತನಗಳು

| **ಕಲಿಕಾಫಲ 10: ಭಾರತದ ಪ್ರಮುಖ ರಾಜಮನೆತನಗಳ ಬಗ್ಗೆ ತಿಳಿಯುವರು.** |
|---|

**ಉದ್ದೇಶ:**

- ಅಶೋಕನ ಜೀವನ ಮತ್ತು ಸಾಧನೆಗಳನ್ನು ಅರಿಯುವುದು.
- ಮೌರ್ಯರ ಆಡಳಿತ ಪದ್ಧತಿಯನ್ನು ಅರ್ಥೈಸಿಕೊಳ್ಳುವುದು.
- ಮೌರ್ಯರು, ಕುಶಾನರು, ಗುಪ್ತ ಮತ್ತು ವರ್ಧನರ ಕಾಲದ ಕಲೆ, ಸಾಹಿತ್ಯ, ವಿಜ್ಞಾನ, ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಅರಿಯುವುದು.
- ಈ ರಾಜಮನೆತನಗಳು ವಿವಿಧ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆಗಳು ಆಧುನಿಕ ವ್ಯವಸ್ಥೆಯಲ್ಲಿ ಮಾದರಿಯಾಗಿರುವುದನ್ನು ಗುರುತಿಸುವರು.

**ಕಲಿಕಾ ಸಾಮಗ್ರಿಗಳು:** ಭೂಪಟ, ಪಠ್ಯಪುಸ್ತಕ, ಚಿತ್ರಪಟಗಳು

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಚಿತ್ರಗಳ ಮೇಲೆ ಚರ್ಚಿಸಿ ಅಶೋಕ ಮತ್ತು ಆತನ ಕಳಿಂಗ ಯುದ್ಧವನ್ನು ಪರಿಚಯಿಸುವುದು. ಯುದ್ಧದಿಂದ ಸಾಮಾನ್ಯ ಜನರ ಮೇಲಾಗುವ ದುಷ್ಪರಿಣಾಮದ ಬಗ್ಗೆ ಚರ್ಚಿಸುವುದು. ಇಂದು ನಡೆಯುತ್ತಿರುವ ರಷ್ಯ ಮತ್ತು ಉಕ್ರೇನ್ ಯುದ್ದವನ್ನು ಉದಾಹರಣೆ ನೀಡಬಹುದು. ನಂತರ ಅಶೋಕನ ಆಡಳಿತ ತತ್ವಗಳನ್ನು ಪರಿಚಯಿಸಿ ಇಂದಿಗೆ ಅವು ಮಾದರಿಯಾಗಿರುವುದನ್ನು ಅರ್ಥೈಸುವುದು. ನಾಣ್ಯಗಳ ಮೂಲಕ ಗುಪ್ತರ ಇತಿಹಾಸವನ್ನು ಪರಿಚಯಿಸುವುದು. ಮಕ್ಕಳನ್ನು ಗುಂಪುಗಳಾಗಿ ಮಾಡಿ ವಿವಿಧ ಕ್ಷೇತ್ರಗಳಲ್ಲಿ ಮೌರ್ಯರು, ಕುಶಾನರು, ಗುಪ್ತರು, ವರ್ಧನರು ನೀಡಿರುವ ಕೊಡುಗೆಗಳನ್ನು ಪಟ್ಟಿಮಾಡಲು ಹೇಳಿ ಅದರ ಮೇಲೆ ಚರ್ಚಿಸಿ ಅವರ ಕೊಡುಗೆಗಳ ಸ್ಮರಿಸುವುದು ಮತ್ತು ಅವು ಇಂದಿಗೂ ಮಾದರಿಯಾಗಿರುವುದನ್ನು ಸ್ಮರಿಸುವುದು. ಜೊತೆಗೆ ಪ್ರಮುಖ ರಾಜರನ್ನು ಪರಿಚಯಿಸುವುದು.

**ಕಲಿಕಾ ಹಾಳೆ: 28**

**ಚಟುವಟಿಕೆ: 1** ಜಗಳ, ಕೋಮುಗಲಭೆ ಮತ್ತು ಯುದ್ಧಗಳಂತಹ ಘಟನೆಗಳಿಂದ ಸಾಮಾನ್ಯ ಜನರ ಮೇಲಾಗುವ ಪರಿಣಾಮಗಳನ್ನು ಪಟ್ಟಿ ಮಾಡಿರಿ.

ಮಕ್ಕಳೇ ಪಟ್ಟಿಮಾಡಲು ಅವಕಾಶ ನೀಡಿ. ಅದರ ಮೇಲೆ ಚರ್ಚೆ ನಡೆಸಿ ಯುದ್ಧ ಯಾವತ್ತಿಗೂ ವಿನಾಶವೇ ಹೊರತು ಒಳಿತಲ್ಲ ಎಂಬುದನ್ನು ಮಕ್ಕಳೇ ಅರ್ಥೈಸಿಕೊಳ್ಳುವಂತೆ ಮಾಡುವುದು ಬಹಳ ಮುಖ್ಯ. ರಷ್ಯ ಮತ್ತು ಉಕ್ರೇನ್ ಯುದ್ಧ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

**ಚಟುವಟಿಕೆ: 2** ಆಶೋಕನ ಧರ್ಮದಲ್ಲಿನ ಆಡಳಿತದ ತತ್ವಗಳು ಇಂದಿನ ಆಡಳಿತ ಪದ್ಧತಿಯಲ್ಲಿ ಇದ್ದರೆ ಒಳ್ಳೆಯದೇ?

ಮಕ್ಕಳ ಅಭಿಪ್ರಾಯ ಪಡೆದು ಚರ್ಚಿಸಿ.

**ಚಟುವಟಿಕೆ: 3** ಬುದ್ಧನ ತತ್ವಗಳಿಗೂ ಹಾಗೂ ಅಶೋಕನ ಧರ್ಮಕ್ಕೂ ಇರುವ ಸಾಮ್ಯತೆಗಳನ್ನು ಪಟ್ಟಿ ಮಾಡಿರಿ.

ಮಕ್ಕಳಿಂದ ಪಟ್ಟಿ ಮಾಡಿಸಿ ಚರ್ಚಿಸಿ.

**ಕಲಿಕಾ ಹಾಳೆ : 29**

**ಚಟುವಟಿಕೆ: 1** ಕೆಳಗಿನ ಗುಪ್ತರ ಕಾಲದ ಚಿತ್ರವನ್ನು ನೋಡಿ ಗುಪ್ತರ ಇತಿಹಾಸವನ್ನು ತಿಳಿಯೋಣ ಬನ್ನಿ.

ನಾಣ್ಯಗಳನ್ನು ನೋಡಿ ಇತಿಹಾಸವನ್ನು ರಚಿಸುವುದಾದರೆ ಈ ಕೆಳಗೆ ನೀಡಿರುವ ಗುಪ್ತರ ಕಾಲದ ನಾಣ್ಯಗಳನ್ನು ನೋಡಿ ನೀವು ಗುಪ್ತರಕಾಲದ ಯಾವ ಅಂಶಗಳನ್ನು ಗುರುತಿಸುತ್ತೀರಿ ಪಟ್ಟಿಮಾಡಿ.

ಈ ಚಟುವಟಿಕೆಯ ಮೂಲಕ ಗುಪ್ತರ ಮನೆತನವನ್ನು ಪರಿಚಯಿಸಿ. ಒಂದು ನಾಣ್ಯದಿಂದ ಯಾವೆಲ್ಲಾ ಅಂಶಗಳನ್ನು ಇತಿಹಾಸ ರಚನೆಯಲ್ಲಿ ತಿಳಿಯಬಹುದು ಅರ್ಥೈಸಿ.

**ಕಲಿಕಾ ಹಾಳೆ: 30**

**ಚಟುವಟಿಕೆ: 1** ಮೌರ್ಯರು ಮತ್ತು ಗುಪ್ತರು ವಿವಿಧ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆಗಳ ಬಗ್ಗೆ ಚರ್ಚೆ ಮಾಡಿ ಪಟ್ಟಿ ಮಾಡೋಣ. ಮೌರ್ಯರು ಮತ್ತು ಗುಪ್ತರ ಕಾಲಕ್ಕೂ ಕಲೆ ಮತ್ತು ವಾಸ್ತುಶಿಲ್ಪಗಳಲ್ಲಾದ ಬದಲಾವಣೆಗಳನ್ನು ಗುರುತಿಸಿ.

ಮಕ್ಕಳನ್ನು ಗುಂಪುಗಳಾಗಿ ಮಾಡಿ ಪಠ್ಯಪುಸ್ತಕದ ಸಹಾಯ ಪಡೆದು ಪಟ್ಟಿಮಾಡಿಸಿ. ನಂತರ ಚರ್ಚೆಮಾಡಿ ವ್ಯತ್ಯಾಸಗಳನ್ನು ಗುರುತಿಸಲು ಹೇಳಿ.

**ಕಲಿಕಾ ಹಾಳೆ: 31**

**ಚಟುವಟಿಕೆ: 1** ಕುಶಾನರು ಮತ್ತು ವರ್ಧನರು ವಿವಿಧ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆಗಳ ಬಗ್ಗೆ ಚರ್ಚಿಸಿ ಪಟ್ಟಿ ಮಾಡೋಣ.

ಮಕ್ಕಳನ್ನು ಗುಂಪುಗಳಾಗಿ ಮಾಡಿ ಪಠ್ಯಪುಸ್ತಕದ ಸಹಾಯ ಪಡೆದು ಪಟ್ಟಿಮಾಡಲು ಹೇಳಿ ನಂತರ ಚರ್ಚೆಮಾಡಿ.

## ಕಲಿಕಾಂಶ 11 – ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳು

**ಕಲಿಕಾಫಲ 11: ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳ ಬಗ್ಗೆ ತಿಳಿಯುವರು.**

**ಉದ್ದೇಶ:**

- ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳ ಕೊಡುಗೆಗಳನ್ನು ಸ್ಮರಿಸುವರು.
- ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಸೌಂದರ್ಯವನ್ನು ಆಸ್ವಾದಿಸುವುದು.
- ಚೋಳರ ಕಾಲದ ಗ್ರಾಮಾಡಳಿತ ಪದ್ದತಿಯು ಇಂದಿಗೆ ಮಾದರಿಯಾಗಿರುವುದನ್ನು ಅರ್ಥೈಸಿಕೊಳ್ಳುವರು.
- ಸ್ಮಾರಕಗಳನ್ನು ಸಂರಕ್ಷಿಸುವ ಮನೋಭಾವವನ್ನು ಬೆಳಸಿಕೊಳ್ಳುವರು.

**ಕಲಿಕಾ ಸಾಮಗ್ರಿಗಳು:** ಭೂಪಟ, ಚಿತ್ರಪಟಗಳು.

**ಪ್ರಕ್ರಿಯೆ:** ಸುಗಮಕಾರರು ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳ ಬಗ್ಗೆ ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ಪ್ರಮುಖ ರಾಜಮನೆತನಗಳನ್ನು ಪರಿಚಯಿಸುವುದು. ಮತ್ತು ಅವರ ಕೊಡುಗೆಗಳನ್ನು ಸ್ಮರಿಸುವುದು. ಅವರು ನೀಡಿದ ಕೊಡುಗೆಗಳು ಇಂದಿಗೂ ಮಾದರಿಯಾಗಿರುವುದನ್ನು ಅರ್ಥೈಸುವುದು. ಅವರು ವಾಸ್ತುಶಿಲ್ಪ ಮತ್ತು ಕಲೆಗೆ ನೀಡಿದ ಕೊಡುಗೆಯನ್ನು ಪರಿಚಯಿಸುವುದು. ಜೊತೆಗೆ ಸ್ಮಾರಕಗಳ ಮಹತ್ವ ಅರಿತು ಅವುಗಳನ್ನು ಸಂರಕ್ಷಿಸುವ ಮನೋಭಾವವನ್ನು ಬೆಳೆಸುವುದು.

**ಕಲಿಕಾ ಹಾಳೆ: 32**

**ಚಟುವಟಿಕೆ: 1** ಕೆಳಗೆ ನೀಡಿರುವ ಭಾರತದ ಭೂಪಟದಲ್ಲಿ ಶಾತವಾಹನರ ಕಾಲದ ಪ್ರಮುಖ ವ್ಯಾಪಾರ ಕೇಂದ್ರಗಳನ್ನು ಗುರುತಿಸಿ ಮತ್ತು ಇವರ ಕಾಲದಲ್ಲಿ ಕೃಷಿ ಮತ್ತು ವ್ಯಾಪಾರ ಅಭಿವೃದ್ಧಿ ಹೊಂದಲು ಪ್ರಮುಖ ಕಾರಣಗಳೇನಿರಬಹುದು ಚರ್ಚಿಸಿ. ಮಕ್ಕಳನ್ನು ಗುಂಪು ಮಾಡಿ. ಚಟುವಟಿಕೆ ಮಾಡಿಸಿ ಮತ್ತು ಗುಂಪು ಚರ್ಚೆ ಮಾಡಿ.

**ಕಲಿಕಾ ಹಾಳೆ: 33**

**ಚಟುವಟಿಕೆ: 1** ಈ ಕೆಳಗಿನ ದೇವಾಲಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಇವುಗಳು ಯಾವ ಮನೆತನಕ್ಕೆ ಸೇರಿವೆ ತಿಳಿಸಿ. ಚಿತ್ರ ಅವಲೋಕನಕ್ಕೆ ಮಕ್ಕಳಿಗೆ ಅವಕಾಶ ನೀಡಿ.

ಪಠ್ಯಪುಸ್ತಕದ ಸಹಾಯ ಪಡೆದು ಕೋಷ್ಟಕವನ್ನು ಭರ್ತಿಮಾಡಲು ತಿಳಿಸಿ. ಇಲ್ಲಿ ಇತಿಹಾಸದ ಬಹುಮುಖ್ಯ ಉದ್ದೇಶ ಮಕ್ಕಳಲ್ಲಿ 'ಐತಿಹಾಸಿಕ ಪ್ರಜ್ಞೆಯನ್ನು' ಬೆಳೆಸುವುದಾಗಿದೆ. ಐತಿಹಾಸಿಕ ಪ್ರಜ್ಞೆ ಎಂದರೆ ತನ್ನ ಹಿಂದಿನವರಿಂದ ಬಂದ ವಸ್ತುಗಳು, ಅವರಿಂದ ರಚನೆಯಾದ ಕಲೆಗಳು, ದೇವಾಲಯಗಳು ಮತ್ತು ಸ್ಮಾರಕಗಳನ್ನು ಸಂರಕ್ಷಿಸುವ ಮನೋಭಾವವನ್ನು ಮಕ್ಕಳಲ್ಲಿ ತರುವುದೇ ಆಗಿದೆ. ಈ ಉದ್ದೇಶದಿಂದ ಕಲೆ–ಸಂಸ್ಕೃತಿಯ ಅಂಶಗಳಾದ ದೇವಾಲಯ, ಸ್ಮಾರಕಗಳನ್ನು ನೋಡಿದ ಕೂಡಲೇ ಮಕ್ಕಳು ಅಲ್ಲಿನ ಶ್ರಮ, ಅಲ್ಲಿನ ವಿಶೇಷತೆಗಳನ್ನು ಗೌರವಿಸುವುದಲ್ಲದೆ, ಯಾವುದೇ ಹಾನಿ ಮಾಡದೆ ಹೆಮ್ಮೆಯ ಭಾವ ತಾಳುವಂತೆ ಮಾಡಬೇಕಾಗಿದೆ.

**ಕಲಿಕಾ ಹಾಳೆ: 34**

**ಚಟುವಟಿಕೆ: 1** ಪ್ರಶ್ನೆಗಳಿಗೆ ಉತ್ತರಿಸಿ.

ಮಕ್ಕಳನ್ನು ಗುಂಪು ಮಾಡಿ ಚರ್ಚೆ ನಡೆಸಿ ಉತ್ತರಿಸಲು ಹೇಳಿ. ಮಕ್ಕಳ ಉತ್ತರಗಳ ಮೇಲೆ ಚರ್ಚಿಸಿ ನೀವೆ ಅರ್ಥೈಸಿ.

**ಚಟುವಟಿಕೆ: 2** ಕೆರೆಗಳನ್ನು ನಾವೇಕೆ ಸಂರಕ್ಷಣೆ ಮಾಡಬೇಕು ಎಂಬುದಕ್ಕೆ ಮಕ್ಕಳೇ ಉತ್ತರಿಸಲು ಅವಕಾಶ ನೀಡಿ. ನಂತರ ಚರ್ಚಿಸಿ ಕೆರೆಗಳ ಸಂರಕ್ಷಣೆಯ ಅವಶ್ಯಕತೆಯನ್ನು ಅರ್ಥೈಸಿ.

**ಚಟುವಟಿಕೆ: 3** ಸ್ಥಳಿಯ ದೇವಾಲಯಕ್ಕೆ ಮಕ್ಕಳನ್ನು ಕರೆದುಕೊಂಡುಹೋಗಿ ಈ ಚಟುವಟಿಕೆ ಮಾಡಿಸಿ. ಚಿತ್ರಪಟಗಳನ್ನು ಬಳಸಿಯೂ ಮಾಡಬಹುದು,

**ಚಟುವಟಿಕೆ: 4** (ದಕ್ಷಿಣ ಭಾರತದ ರಾಜಮನೆತನಗಳು ನಿರ್ಮಿಸಿದ ದೇವಾಲಯಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.)

ಮಕ್ಕಳು ಸಂಗ್ರಹಿಸಿದ ಚಿತ್ರಗಳ ಮೇಲೆ ಚರ್ಚಿಸಿ. ವಾಸ್ತುಶಿಲ್ಪ ಕಲೆಯಲ್ಲಿರುವ ಭಿನ್ನತೆಯನ್ನು ಅರ್ಥೈಸಿಕೊಳ್ಳಲು ಅವಕಾಶ ಮಾಡಿಕೊಡಿ.

**ಕಲಿಕಾ ಹಾಳೆ: 35**

**ಚಟುವಟಿಕೆ: 1** ದಕ್ಷಿಣ ಭಾರತದ ರಾಜಮನೆತನಗಳು ಅನೇಕ ಸ್ಮಾರಕಗಳನ್ನು ನಿರ್ಮಿಸಿದ್ದು ಇವುಗಳನ್ನು ನಾವೇಕೆ ಸಂರಕ್ಷಣೆ ಮಾಡಬೇಕು?

**ಚಟುವಟಿಕೆ: 2** ಮಕ್ಕಳೇ ಇತಿಹಾಸ ರಚನೆಗೆ ಸಹಕಾರಿಯಾಗಬಲ್ಲ ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಜವಬ್ದಾರಿಯಾಗಿದೆ. ಹಾಗಾದರೆ ನೀವು ಐತಿಹಾಸಿಕ ಸ್ಮಾರಕಗಳಿಗೆ ಭೇಟಿ ನೀಡಿದಾಗ ಅವುಗಳ ಸಂರಕ್ಷಣೆಗೆ ಯಾವುದನ್ನು ಮಾಡಬೇಕು? ಯಾವುದನ್ನು ಮಾಡಬಾರದು? ಬರೆಯಿರಿ.

**ಶಿಕ್ಷಕರಿಗೆ ಸೂಚನೆ:** ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳ ಬಗ್ಗೆ ಮತ್ತು ಅವರ ಪ್ರಮುಖ ಕೊಡುಗೆಗಳನ್ನು ಪಠ್ಯಪುಸ್ತಕದಲ್ಲಿ ನೋಡಿ ಅಗತ್ಯವಿರುವಷ್ಟನ್ನು ಮಕ್ಕಳಿಗೆ ಪರಿಚಯಿಸಿ.

**ಮೌಲ್ಯಮಾಪನ:** ಕಲಿಕಾಹಾಳೆ 34ರ ಚಟುವಟಿಕೆ 1 ನ್ನು ಮತ್ತು ಕಲಿಕಾಹಾಳೆ 35 ರ ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

**ಕಲಿಕಾಂಶ 12– ಮತ ಪ್ರವರ್ತಕರು ಮತ್ತು ಸಾಮಾಜಿಕ ಸುಧಾರಕರು**

**ಕಲಿಕಾ ಫಲ 12: ಮತ ಪ್ರವರ್ತಕರು ಮತ್ತು ಸಾಮಾಜಿಕ ಸುಧಾರಕರುಗಳ ಬಗ್ಗೆ ತಿಳಿದುಕೊಳ್ಳುವರು.**

**ಉದ್ದೇಶ:**

- ಧಾರ್ಮಿಕ ಸುಧಾರಕರ ಚಿಂತನೆಗಳನ್ನು ಮತ್ತು ಸುಧಾರಣೆಗಳನ್ನು ಅರ್ಥೈಸಿಕೊಳ್ಳುವುದು.
- ಅವರ ಚಿಂತನೆಗಳು ಎಷ್ಟರ ಮಟ್ಟಿಗೆ ಪ್ರಸ್ತುತವಾಗಿವೆ ಎಂಬುದನ್ನು ಅರಿತುಕೊಳ್ಳುವುದು

**ಕಲಿಕಾ ಸಾಮಗ್ರಿಗಳು:**

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ನಂತರ ಮತ ಪ್ರವರ್ತಕರು ಮತ್ತು ಸಾಮಾಜಿಕ ಸುಧಾರಕರುಗಳು ಮತ್ತು ಅವರ ಭೋದನೆಗಳನ್ನು ಪರಿಚಯಿಸುವುದು. ಇವರ ಚಿಂತನೆಗಳು ಇಂದಿಗೆ ಹೇಗೆ ಮಾದರಿಯಾಗಿವೆ ಎಂಬುದನ್ನು ಗುಂಪು ಚರ್ಚೆ ಮಾಡಿಸುವುದು. ಭೂಪಟವನ್ನು ಬಳಸಿ ಅವರು ಇದ್ದಂತಹ ಪ್ರದೇಶಗಳನ್ನು ಪರಿಚಯಿಸುವುದು.

**ಕಲಿಕಾ ಹಾಳೆ: 36**

**ಚಟುವಟಿಕೆ: 1** ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಗುರುತಿಸಿ ಹೆಸರನ್ನು ಬರೆಯಿರಿ.

ಮಕ್ಕಳು ಚಿತ್ರಗಳಲ್ಲಿರುವ ವ್ಯಕ್ತಿಗಳನ್ನು ಗುರುತಿಸಲು ಕಷ್ಟವಾದರೆ ಪಠ್ಯಪುಸ್ತಕದ ಸಹಾಯ ಪಡೆಯಲು ತಿಳಿಸಿ. ಹೆಸರಿಸಿದ ನಂತರ ಅವರನ್ನು ಅವರ ಬೋಧನೆಗಳನ್ನು ಪರಿಚಯಿಸಿ.

**ಚಟುವಟಿಕೆ: 2** ಮಕ್ಕಳೇ, ಕೆಳಗೆ ಕೊಟ್ಟಿರುವ ಸಾಮಾಜಿಕ ಸುಧಾರಕರು ಹಾಗೂ ಅವರ ತತ್ವಗಳನ್ನು ಕೊಡಲಾಗಿದೆ. ಅವುಗಳನ್ನು ಸರಿಯಾಗಿ ಗೆರೆ ಎಳೆದು ಹೊಂದಿಸಿ ಬರೆಯಲು ತಿಳಿಸಿ.

**ಚಟುವಟಿಕೆ: 3** ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿನ ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರ ಬೋಧನೆಗಳನ್ನು ಅಥವಾ ಸುಧಾರಣೆಗಳನ್ನು ಪಟ್ಟಿ ಮಾಡಿ. ಮಕ್ಕಳಿಂದಲೇ ಪಟ್ಟಿ ಮಾಡಿಸಿ ಚರ್ಚೆ ಮಾಡಿ ಅವರ ಬೋಧನೆಗಳನ್ನು ಗಟ್ಟಿಗೊಳಿಸುವುದು.

**ಚಟುವಟಿಕೆ: 4** ಕೆಳಗೆ ಸಾಮಾಜಿಕ ಸುಧಾರಕರಿಗೆ ಸಂಬಂಧಿಸಿದ ಸ್ಥಳಗಳನ್ನು ಕೊಡಲಾಗಿದೆ. ಅವುಗಳನ್ನು ಕೊಟ್ಟಿರುವ ಕರ್ನಾಟಕದ ನಕ್ಷೆಯಲ್ಲಿ ಆ ಸ್ಥಳಗಳಿರುವ ಜಿಲ್ಲೆಯನ್ನು ಗುರುತಿಸಿ. ಆ ಸ್ಥಳಗಳು ಯಾವ ಸಮಾಜ ಸುಧಾರಕರಿಗೆ ಸಂಬಂಧಿಸಿವೆ ಎಂಬುದನ್ನು ಬರೆಯಲು ಅಗತ್ಯ ಮಾರ್ಗದರ್ಶನ ನೀಡಿ.

**ಮೌಲ್ಯಮಾಪನ:** ಕಲಿಕಾಹಾಳೆ 36ರ ಚಟುವಟಿಕೆ 3ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

**ಭಾಗ 2 – ಪೌರನೀತಿ**

**ಕಲಿಕಾಂಶ 13 – ಪೌರತ್ವ ಮತ್ತು ರಾಷ್ಟ್ರೀಯ ಚಿಹ್ನೆಗಳು**

**ಕಲಿಕಾ ಫಲ 13: ಪೌರತ್ವ ಮತ್ತು ರಾಷ್ಟ್ರೀಯ ಲಾಂಛನಗಳ ಬಗ್ಗೆ ಅರಿಯುವರು.**

**ಉದ್ದೇಶ:**

- ಪೌರತ್ವದ ಅರ್ಥ ಮತ್ತು ಮಹತ್ವವನ್ನು ಅರಿಯುವರು
- ಪೌರತ್ವ ಪಡೆಯುವ ಮತ್ತು ಕಳೆದುಕೊಳ್ಳುವ ವಿಧಾನಗಳ ಬಗ್ಗೆ ತಿಳಿಯುವರು.

**ಕಲಿಕಾ ಸಾಮಗ್ರಿಗಳು :**

**ಪ್ರಕ್ರಿಯೆ:** ಸುಗಮಕಾರರು ಮೊದಲು ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ಪೌರತ್ವದ ಬಗ್ಗೆ ಇರುವ ಸಂಭಾಷಣೆಯನ್ನು ಮಕ್ಕಳು ಓದಲು ಹೇಳುವುದು. ನಂತರ ತಾವು ಸಹ ಒಮ್ಮೆ ಓದಿ ಹೇಳುವುದು ಮಧ್ಯೆ ಮಧ್ಯೆ ಪ್ರಶ್ನೆಗಳನ್ನು ಹಾಕಿ ಮಕ್ಕಳಿಂದ ಪ್ರತಿಕ್ರಿಯೆ ಪಡೆಯುವುದು. ನಂತರ ಪೌರತ್ವ ಪಡೆಯುವುದಕ್ಕೆ ಮತ್ತು ಕಳೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸನ್ನಿವೇಶಗಳನ್ನು ಮಕ್ಕಳು ಓದಿ ಪ್ರತಿಕ್ರಿಯಿಸಲು ಅವಕಾಶ ಮಾಡಿಕೊಡುವುದು. ಜೊತೆಗೆ ಪೌರತ್ವದ ಮಹತ್ವದ ಬಗ್ಗೆ ಚರ್ಚಿಸಿ ಅರ್ಥೈಸುವುದು. ತದನಂತರ ರಾಷ್ಟ್ರೀಯ ಚಿಹ್ನೆಗಳ ಮೇಲೆ ಚರ್ಚಿಸಿ, ರಾಷ್ಟ್ರೀಯ ಚಿಹ್ನೆಗಳ ಮಹತ್ವವನ್ನು ಅರ್ಥೈಸುವುದು.

**ಕಲಿಕಾ ಹಾಳೆ: 37**

**ಚಟುವಟಿಕೆ: 1** ಈ ಕೆಳಗೆ ನೀಡಿರುವ ಸನ್ನಿವೇಶಗಳನ್ನು ನೋಡಿ ಅವರು ಯಾವ ವಿಧಾನದ ಮೂಲಕ ಪೌರತ್ವವನ್ನು ಪಡೆಯಬಹುದು ಬರೆಯಿರಿ.

**ಚಟುವಟಿಕೆ: 2 ಹೊಂದಿಸಿ ಬರೆಯಿರಿ.**

ಮೇಲಿನ ಎರಡು ಚಟುವಟಿಕೆಗಳಲ್ಲಿ ಮಕ್ಕಳೇ ಸನ್ನಿವೇಶಗಳನ್ನು ಓದಿ ಪ್ರತಿಕ್ರಿಯಿಸಲು ಹೇಳುವುದು ಮತ್ತು ಅಗತ್ಯವಿದ್ದರೆ ಸುಗಮಕಾರರು ಒಮ್ಮೆ ಓದಿ ಹೇಳುವುದು. ಈ ಸನ್ನಿವೇಶಗಳ ಮೇಲೆ ಚರ್ಚೆ ನಡೆಸಿ ಪೌರತ್ವ ಪಡೆಯುವ ಮತ್ತು ಕಳೆದುಕೊಳ್ಳುವ ವಿಧಾನಗಳನ್ನು ಅರ್ಥೈಸಬೇಕು.

**ಚಟುವಟಿಕೆ: 3** ಈ ಕೆಳಗಿನ ಹೇಳಿಕೆಗಳಲ್ಲಿ ಸರಿ ತಪ್ಪು ಗುರುತಿಸಿ.

ಈ ಚಟುವಟಿಕೆಯ ಮೂಲಕ ವಿದೇಶಿಯರು ಮತ್ತು ಪೌರರಿಗೆ ಇರುವ ವ್ಯತ್ಯಾಸಗಳ ಚರ್ಚಿಸಿ ಪೌರತ್ವದ ಮಹತ್ವವನ್ನು ಮಕ್ಕಳಿಗೆ ಅರ್ಥೈಸುವುದು.

**ಚಟುವಟಿಕೆ: 4** ಪ್ರಶ್ನೆಗಳಿಗೆ ಉತ್ತರಿಸೋಣ. ಸೂಚನೆಯಂತೆ ಮಕ್ಕಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಅವಕಾಶ ನೀಡಬೇಕು.

**ಕಲಿಕಾ ಹಾಳೆ: 38**

**ಚಟುವಟಿಕೆ: 1 ಉತ್ತರಿಸೋಣ**

**ಚಟುವಟಿಕೆ: 2** ನಮ್ಮ ರಾಷ್ಟ್ರ ಧ್ವಜದ ಚಿತ್ರ ಬರೆದು ಬಣ್ಣ ಹಚ್ಚಿ ಮತ್ತು ಧ್ವಜದಲ್ಲಿರುವ ಬಣ್ಣಗಳು ಏನನ್ನು ಸೂಚಿಸುತ್ತವೆ ವಿವರಿಸಿ. ಈ ಮೇಲಿನ 2 ಚಟುವಟಿಕೆಗಳಲ್ಲಿ ಕೇಳಿದ ಪ್ರಶ್ನೆಗಳಿಗೆ ಮಕ್ಕಳು ಉತ್ತರಿಸಲು ಹೇಳುವುದು ಮತ್ತು ಈ ಪ್ರಶ್ನೆಗಳ ಮೇಲೆ ಗುಂಪಿನಲ್ಲಿ ಚರ್ಚಿಸಿ ರಾಷ್ಟ್ರಿಯ ಚಿಹ್ನೆಗಳ ಬಗ್ಗೆ ಅರ್ಥೈಸುವುದು ಮತ್ತು ದೈನಂದಿನ ಜೀವನದಲ್ಲಿ ಇವುಗಳ ಮಹತ್ವದ ಬಗ್ಗೆ ಅರಿಯಲು ಅವಕಾಶ ಮಾಡಿಕೊಡುವುದು.

**ಮೌಲ್ಯಮಾಪನ:** ಕಲಿಕಾಹಾಳೆ 37 ರಲ್ಲಿ ಚಟುವಟಿಕೆ 4ನ್ನು ಅಥವಾ ಎಲ್ಲಾ ಚಟುವಟಿಕೆಗಳನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ 14– ಪ್ರಭುತ್ವ

**ಕಲಿಕಾ ಫಲ 14: ವಿವಿಧ ರೀತಿಯ ಪ್ರಭುತ್ವಗಳನ್ನು ಅರ್ಥೈಸಿಕೊಳ್ಳುವರು.**

**ಉದ್ದೇಶ:**

- ಪ್ರಭುತ್ವ ಮತ್ತು ಅದರ ಮಹತ್ವದ ಬಗ್ಗೆ ಅರಿಯುವರು.
- ಪ್ರಭುತ್ವದ ವಿಧಗಳು ಮತ್ತು ಅವುಗಳ ನಡುವೆ ಇರುವ ವ್ಯತ್ಯಾಸಗಳನ್ನು ತಿಳಿಯವರು.

**ಕಲಿಕಾ ಸಾಮಗ್ರಿಗಳು: ಕಥೆ**

**ಪ್ರಕ್ರಿಯೆ:** ಸುಗಮಕಾರರು ಕಥೆಯನ್ನು ಮಕ್ಕಳಿಗೆ ಹೇಳಿ ಅದರ ಮೇಲೆ ಪ್ರಶ್ನೆಗಳನ್ನು ಕೇಳಿ ಪ್ರತಿ ಮಕ್ಕಳು ಪ್ರತಿಕ್ರಿಯೆ ನೀಡಲು ಅವಕಾಶ ನೀಡುವುದು. ನಂತರ ಮಕ್ಕಳ ಪ್ರತಿಕ್ರಿಯೆಗಳ ಮೇಲೆ ಚರ್ಚಿಸಿ ಪ್ರಭುತ್ವವನ್ನು ಮತ್ತು ಪ್ರಭುತ್ವದ ವಿಧಗಳನ್ನು ಅರ್ಥೈಸುವುದು. ನಂತರ ಪ್ರಜಾಪ್ರಭುತ್ವ ಮತ್ತು ನಿರಂಕುಶ ಪ್ರಭುತ್ವ ಜಾರಿಯಲ್ಲಿದ್ದ ಎರಡು ದೇಶಗಳನ್ನು ಉದಾಹರಣೆ ತೆಗೆದುಕೊಂಡು ಚರ್ಚಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮಹತ್ವ ಮತ್ತು ಅದರ ಅವಶ್ಯಕತೆಯನ್ನು ಅರ್ಥೈಸುವುದು.

**ಕಲಿಕಾ ಹಾಳೆ: 39**

**ಚಟುವಟಿಕೆ: 1** ಪ್ರಜಾಪ್ರಭುತ್ವ ಮತ್ತು ನಿರಂಕುಶ ಪ್ರಭುತ್ವಗಳಿಗಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

ಪ್ರಜಾಪ್ರಭುತ್ವ ಮತ್ತು ನಿರಂಕುಶ ಪ್ರಭುತ್ವಗಳಿಗಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸುವುದು. ನಂತರ ಇವುಗಳ ನಡುವೆ ಇರುವ ವ್ಯತ್ಯಾಸಗಳ ಮೇಲೆ ಚರ್ಚಿಸಿ ಅರ್ಥೈಸುವುದು.

**ಚಟುವಟಿಕೆ: 2**

1. ಪ್ರಜಾಪ್ರಭುತ್ವ ಮತ್ತು ನಿರಂಕುಶ ಪ್ರಭುತ್ವವನ್ನು ಹೊಂದಿರುವ ಎರಡು ರಾಷ್ಟ್ರಗಳನ್ನು ಉದಾಹರಣೆ ನೀಡಿ.
2. ನಿರಂಕುಶ ಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವುದು ನಿನಗೆ ಇಷ್ಟವಾಯಿತು? ಏಕೆ ಇಷ್ಟವಾಯಿತು ಬರೆಯಿರಿ.

ಈ ಮೇಲಿನ ಪ್ರಶ್ನೆಗಳಿಗೆ ಪ್ರತಿ ಮಗುವು ಪ್ರತಿಕ್ರಿಯಿಸಲು ಅವಕಾಶ ಮಾಡಿಕೊಡುವುದು. ನಂತರ ಮಕ್ಕಳ ಪ್ರತಿಕ್ರಿಯೆಗಳ ಮೇಲೆ ಚರ್ಚಿಸಿ ಪ್ರಸ್ತುತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮಹತ್ವವನ್ನು ಅರಿಯುವಂತೆ ಮಾಡುವುದು.

**ಮೌಲ್ಯಮಾಪನ:** ಚಟುವಟಿಕೆ 2ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ 15– ಸ್ಥಳೀಯ ಸರ್ಕಾರಗಳು

**ಕಲಿಕಾ ಫಲ 15: ಸ್ಥಳೀಯ ಸರ್ಕಾರಗಳ ಚುನಾವಣೆ ಮತ್ತು ಪ್ರಮುಖ ಜವಾಬ್ದಾರಿಗಳನ್ನು ಗುರುತಿಸುವರು**

**ಉದ್ದೇಶ:**

- ಗ್ರಾಮ ಸಭೆ/ ವಾರ್ಡ್ ಸಭೆ ಪಾತ್ರದ ಬಗ್ಗೆ ಅರಿಯುವರು.
- ಸ್ಥಳೀಯ ಸರ್ಕಾರಗಳ ರಚನೆ ಮತ್ತು ಅವುಗಳ ಜವಾಬ್ದಾರಿಯನ್ನು ತಿಳಿಯುವರು.
- ಸ್ಥಳೀಯ ಸರ್ಕಾರಗಳ ಮಹತ್ವವನ್ನು ಅರಿಯುವರು.

**ಕಲಿಕಾ ಸಾಮಗ್ರಿಗಳು:** ಚಿತ್ರಪಟಗಳು, ಮಾದರಿ ಪ್ರಶ್ನಾವಳಿ.

**ಪ್ರಕ್ರಿಯೆ:** ಸುಗಮಕಾರರು ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ವಾರ್ಡ್ ಸಭೆಗೆ ಸಂಬಂಧಿಸಿದ ಚಿತ್ರಗಳ ಮೇಲೆ ಚರ್ಚಿಸಿದ ನಂತರ ಕೆಲವು ಪ್ರಶ್ನೆಗಳನ್ನು ಕೇಳಿ ಪ್ರತಿಕ್ರಿಯೆ ಪಡೆಯುವುದು. ಪೋಷಕರ ಜೊತೆ ಚರ್ಚಿಸಿ ವಾರ್ಡ್ ಸಭೆ ಬಗ್ಗೆ ಮಾಹಿತಿ ತರಲು ಹೇಳಿ ಅದರ ಮೇಲೆ ಚರ್ಚಿಸುವುದು. ನಂತರ ಸ್ಥಳೀಯ ಸರ್ಕಾರಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. ತದನಂತರ ಸ್ಥಳೀಯ ಸರ್ಕಾರಗಳ ಚಾರ್ಟನ್ನು ಗಮನಿಸಲು ಹೇಳಿ ಸ್ಥಳೀಯ ಸರ್ಕಾರಗಳ ರಚನೆ ಮತ್ತು ವಿಧಗಳನ್ನು ಅರ್ಥೈಸುವುದು. ಸ್ಥಳೀಯ ಜನಪ್ರತಿನಿಧಿ ಸಂದರ್ಶನ, ಸ್ಥಳೀಯ ಪಂಚಾಯಿತಿಗೆ ಭೇಟಿ, ಅಧಿಕಾರಿಯ ಸಂದರ್ಶನ, ಗುಂಪು ಚರ್ಚೆ, ಸ್ಥಳೀಯ ಸರ್ಕಾರಗಳ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಗಳ ಸಂಗ್ರಹ ಮತ್ತು ಚರ್ಚೆ ಮೊದಲಾದ ಚಟುವಟಿಕೆಗಳ ಮೂಲಕ ಮಕ್ಕಳು ಸ್ವತಃ ತಾವೆ ಸ್ಥಳೀಯ ಸರ್ಕಾರಗಳ ರಚನೆ ಮತ್ತು ಅವುಗಳ ಜವಾಬ್ದಾರಿಯನ್ನು ಅರಿಯುವಂತೆ ಮಾಡುವುದು. ಅಗತ್ಯವಿರುವ ಕಡೆ ಮಾರ್ಗದರ್ಶನ ನೀಡುವುದು ಮತ್ತು ಮಕ್ಕಳ ಮಾಹಿತಿಯನ್ನ ಕ್ರೋಢೀಕರಿಸಿ ಅರ್ಥೈಸುವುದು.

**ಕಲಿಕಾ ಹಾಳೆ: 40**

**ಚಟುವಟಿಕೆ: 1** ಚಿತ್ರದ ಮೇಲೊಂದು ಚರ್ಚೆ.

ಇದು ಪೂರ್ವಭಾವಿ ಚಟುವಟಿಕೆಯಾಗಿದೆ. ಚಿತ್ರವನ್ನು ಗಮನಿಸಲು ಹೇಳಿ ಕೆಲವು ಪ್ರಶ್ನೆಗಳನ್ನು ಕೇಳಿ ಪ್ರತಿಕ್ರಿಯಿಸಲು ಹೇಳುವುದು. ಗ್ರಾಮ ಸಭೆಗೆ ಪೂರಕ ಚಿತ್ರಗಳನ್ನು ಬಳಸಬಹುದು.

**ಚಟುವಟಿಕೆ: 2** ನಮ್ಮೂರಿನ ಗ್ರಾಮ/ವಾರ್ಡ್ ಸಭೆ ಬಗ್ಗೆ ತಿಳಿಯೋಣ.

ಪೋಷಕರ ಜೊತೆ ಮಾತನಾಡಿ ಗ್ರಾಮಸಭೆ ಬಗ್ಗೆ ಮಾಹಿತಿ ಸಂಗ್ರಹಿಸಿ ತರಲು ಹೇಳುವುದು. ತಂದ ಮಾಹಿತಿ ಮೇಲೆ ಚರ್ಚಿಸುವುದು. ಗ್ರಾಮಸಭೆಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಸ್ವ ಅನುಭವವನ್ನು ಪಡೆಯಲು ಅವಕಾಶ ನೀಡುವುದು.

**ಚಟುವಟಿಕೆ: 3** ಶಿಕ್ಷಕರ ಸಹಕಾರದೊಂದಿಗೆ ಮಕ್ಕಳ ಸಭೆಯನ್ನು ನಿಮ್ಮ ಶಾಲೆಯಲ್ಲಿ ಆಯೋಜಿಸಿ ಪಂಚಾಯಿತಿ ಸದಸ್ಯರು ಮತ್ತು ಅಧಿಕಾರಿ ತಂಡದೊಂದಿಗೆ ಸಂವಾದ ನಡೆಸಿ.

ಸ್ಥಳೀಯ ಪಂಚಾಯಿತಿಯ ಸಹಕಾರ ಪಡೆದು ಮಕ್ಕಳ ಸಭೆಯನ್ನು ಅಯೋಜಿಸುವುದು.

**ಚಟುವಟಿಕೆ: 4** ನಿಮಗೆಷ್ಟು ಗೊತ್ತು ತಿಳಿಯೋಣ?

ಚಟುವಟಿಕೆ ಹಾಳೆಯಲ್ಲಿ ನೀಡಿರುವ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ ಸ್ಥಳೀಯ ಸರ್ಕಾರಗಳ ಬಗ್ಗೆ ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು.

**ಚಟುವಟಿಕೆ: 5** ಈ ಕೆಳಗಿನ ಚಾರ್ಟನ್ನು ಗಮನಿಸಿ ಸ್ಥಳೀಯ ಸರ್ಕಾರಗಳ ಬಗ್ಗೆ ಚರ್ಚಿಸಿ ಅರ್ಥೈಸಿಕೊಳ್ಳಿ.

ನೀಡಿರುವ ಚಾರ್ಟನ್ನು ಗಮನಿಸಲು ಹೇಳಿ ಅದರ ಮೇಲೆ ಚರ್ಚಿಸಿ ಸ್ಥಳೀಯ ಸರ್ಕಾರಗಳ ರಚನೆ ಮತ್ತು ವಿಧಗಳನ್ನು ಅರ್ಥೈಸುವುದು.

**ಕಲಿಕಾ ಹಾಳೆ: 41**

**ಚಟುವಟಿಕೆ: 1** ನಮ್ಮ ಸ್ಥಳೀಯ ಪ್ರತಿನಿಧಿಯನ್ನ ಒಮ್ಮೆ ಭೇಟಿಯಾಗೋಣ

ಸ್ಥಳೀಯ ಪಂಚಾಯಿತಿ/ ವಾರ್ಡ್ ಸದಸ್ಯರನ್ನು ಭೇಟಿ ಮಾಡಿ ಚಟುವಟಿಕೆ ಹಾಳೆಯಲ್ಲಿ ಕೇಳಿರುವ ಮಾಹಿತಿಯನ್ನು ಸಂಗ್ರಹಿಸಿ ತರಲು ಹೇಳುವುದು. ನಂತರ ಎಲ್ಲರೂ ಪ್ರಸ್ತುತಪಡಿಸಲು ಅವಕಾಶ ನೀಡುವುದು. ನಂತರ ಚರ್ಚೆ ನಡೆಸಿ ಸ್ಥಳೀಯ ಸಂಸ್ಥೆಯ ರಚನೆ ಮತ್ತು ಸದಸ್ಯನ ಜವಾಬ್ದಾರಿಗಳ ಬಗ್ಗೆ ಅರ್ಥೈಸುವುದು. ಸ್ಥಳೀಯ ಸದಸ್ಯರನ್ನು ಶಾಲೆಗೆ ಕರೆಸಿ ಮಕ್ಕಳ ಜೊತೆ ಸಂವಾದವನ್ನು ಏರ್ಪಡಿಸಬಹುದು.

**ಚಟುವಟಿಕೆ: 2** ನೀವು ಒಳಪಡುವ ಸ್ಥಳೀಯ ಸರ್ಕಾರದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಮತ್ತು ಸಿಬ್ಬಂದಿ ವರ್ಗ ಹೆಸರುಗಳನ್ನು ಪಟ್ಟಿ ಮಾಡಿರಿ.

ಪೋಷಕರ ಸಹಾಯ ಪಡೆದು ಈ ಮಾಹಿತಿಯನ್ನು ಸಂಗ್ರಹಿಸಲು ತಿಳಿಸುವುದು. ಇದರಿಂದ ಸ್ಥಳೀಯ ಸಂಸ್ಥೆಯ ಸಿಬ್ಬಂದಿ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ.

**ಚಟುವಟಿಕೆ: 3** ಹತ್ತಿರದ ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ ಅಧಿಕಾರಿಯೊಂದಿಗೆ ಸಂದರ್ಶನ ನಡೆಸಲು ಹೇಳುವುದು. ಅಥವಾ ಪಂಚಾಯಿತಿ ಅಧಿಕಾರಿಯನ್ನು ಶಾಲೆಗೆ ಕರೆಸಿ ಮಕ್ಕಳೊಂದಿಗೆ ಸಂವಾದ ಏರ್ಪಡಿಸುವುದು. ಪಂಚಾಯಿತಿ ಸವಲತ್ತುಗಳನ್ನು ಅರ್ಥೈಸಿಕೊಳ್ಳುವುದು ಈ ಚಟುವಟಿಕೆ ಉದ್ದೇಶವಾಗಿದೆ.

**ಚಟುವಟಿಕೆ: 4 ಪ್ರಶ್ನೆಗಳಿಗೆ ಉತ್ತರಿಸೋಣ.**

1. ಸ್ಥಳೀಯ ಸರ್ಕಾರದ ಸದಸ್ಯರನ್ನು ಯಾರು ಆಯ್ಕೆ ಮಾಡುತ್ತಾರೆ?
2. ಸ್ಥಳೀಯ ಸರ್ಕಾರದ ಸದಸ್ಯರಾಗಲು ಯಾವ ಅರ್ಹತೆಗಳನ್ನು ಹೊಂದಿರಬೇಕು?
3. ಸ್ಥಳೀಯ ಸರ್ಕಾರದ ಕಾರ್ಯಗಳು ಯಾವುವು ತಿಳಿಸಿ?
4. ಸ್ಥಳೀಯ ಸರ್ಕಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಸರಿ/ತಪ್ಪು ಗುರುತಿಸಿ ಬರೆಯಿರಿ.

**ಚಟುವಟಿಕೆ: 5** ಸ್ಥಳೀಯ ಸಂಸ್ಥೆಗಳು ಮಾಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ಸಂಗ್ರಹಿಸಿ ಶಿಕ್ಷಕರ ಸಹಕಾರ ಪಡೆದು ತರಗತಿಯಲ್ಲಿ ಚರ್ಚಿಸಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಕಾರ್ಯಗಳನ್ನು ತಿಳಿದುಕೊಳ್ಳೋಣ.

ಮಕ್ಕಳು ದಿನಪತ್ರಿಕೆಗಳನ್ನು ಓದಿ ಸ್ಥಳೀಯ ಸರ್ಕಾರಗಳಿಗೆ ಸಂಬಂಧಿಸಿದ ವರದಿಗಳ ಮಾಹಿತಿಗಳನ್ನು ಸಂಗ್ರಹಿಸಿ ತರಲು ಹೇಳುವುದು ಮತ್ತು ಅವುಗಳ ಮೇಲೆ ಚರ್ಚಿಸಿ ಸ್ಥಳೀಯ ಸರ್ಕಾರಗಳ ಕಾರ್ಯಗಳನ್ನು ಅರ್ಥೈಸುವುದು.

**ಮೌಲ್ಯಮಾಪನ:** ಕಲಿಕಾಹಾಳೆ 41 ರ ಚಟುವಟಿಕೆ 4 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

## ಕಲಿಕಾಂಶ 16– ಭಾರತದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ

**ಕಲಿವಿನ ಫಲ 16: ಭಾರತದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳನ್ನು ತಿಳಿಯುವರು**

**ಉದ್ದೇಶ:**

- ಸಂಸತ್ತಿನ ರಚನೆ ಮತ್ತು ಕಾರ್ಯಗಳನ್ನು ಅರ್ಥೈಸಿಕೊಳ್ಳುವರು.
- ಕಾರ್ಯಾಂಗದ ರಚನೆ ಮತ್ತು ಅಧಿಕಾರಗಳನ್ನು ತಿಳಿಯುವರು.
- ಭಾರತದ ನ್ಯಾಯಾಂಗದ ವ್ಯವಸ್ಥೆಯ ಬಗ್ಗೆ ತಿಳಿಯುವರು.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಮಕ್ಕಳಿಗೆ ಆಟದ ನಿಯಮಗಳ ಬಗ್ಗೆ ಚರ್ಚಿಸುವುದು. ನಂತರ ಶಾಲೆಯ ನಿಯಮಗಳ ಬಗ್ಗೆ ಮಕ್ಕಳಿಗೆ ಪ್ರಶ್ನೆ ಕೇಳಿ ಚರ್ಚಿಸುವುದು. ನಂತರ ಶಾಲಾ ಮಂತ್ರಿಮಂಡಲವನ್ನು ರಚಿಸುವುದು. ರಾಷ್ಟ್ರದ ನಿಯಮಗಳ ಬಗ್ಗೆ ಚರ್ಚಿಸಿ ಮಕ್ಕಳನ್ನು ಗುಂಪುಗಳಾಗಿ ಮಾಡಿ ಒಂದೊಂದು ವಿಷಯಗಳನ್ನು ನೀಡಿ ಚರ್ಚಿಸಲು ಅನುಕೂಲಿಸಿ. ಭಾರತದ ಶಾಸಕಾಂಗ ಮತ್ತು ಕಾರ್ಯಾಂಗದ ಬಗ್ಗೆ ಅರ್ಥೈಸಿಕೊಳ್ಳುವ ಅವಕಾಶ ನೀಡುವುದು. ನೀಡಿರುವ ಸಂಭಾಷಣೆಯನ್ನು ಓದಿ ಅದರ ಮೇಲೆ ಮಕ್ಕಳೇ ಪ್ರಶ್ನೆ ಕೇಳುತ್ತಾ ಭಾರತದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ರಚನೆ ಮತ್ತು ಕಾರ್ಯಗಳನ್ನು ಅರ್ಥೈಸಿಕೊಳ್ಳುವುದು. ಇವುಗಳ ಅವಶ್ಯಕತೆ ಬಗ್ಗೆ ಚರ್ಚಿಸುವುದು.

**ಕಲಿಕಾ ಹಾಳೆ: 42**

**ಚಟುವಟಿಕೆ: 1** ಆಟದ ನಿಯಮ

ಮಕ್ಕಳಿಂದ ಒಂದು ಆಟದ ಮೇಲೆ ಪ್ರಶ್ನೆಗಳನ್ನು ಕೇಳಿ ಚರ್ಚಿಸಿ ಆಟದಲ್ಲಿ ನಿಯಮಗಳು ಎಷ್ಟು ಮುಖ್ಯ ಎಂಬುದನ್ನು ಅರ್ಥೈಸುವುದು.

**ಚಟುವಟಿಕೆ: 2** ಶಾಲೆಯಲ್ಲಿ ಯಾವೆಲ್ಲಾ ನಿಯಮಗಳಿವೆ?

ಮಕ್ಕಳಿಗೆ ಶಾಲಾ ನಿಯಮಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಚರ್ಚಿಸಿ ಶಾಲೆಯಲ್ಲಿ ನಿಯಮಗಳನ್ನು ಯಾರು, ಏಕೆ ಮಾಡುತ್ತಾರೆ ಎಂಬ ಅಂಶಗಳನ್ನು ಚರ್ಚಿಸಿ ನಿಯಮಗಳ ಮಹತ್ವವನ್ನು ಅರ್ಥೈಸುವುದು.

**ಚಟುವಟಿಕೆ: 3** ಶಾಲೆಯಲ್ಲಿ ಚುನಾವಣೆ : ಶಾಲೆಯಲ್ಲಿ ವಿದ್ಯಾರ್ಥಿಗಳ ಚುನಾವಣೆ ನಡೆಸಿರಿ.

ಶಾಲಾ ಮಂತ್ರಿಮಂಡಲವನ್ನು ರಚಿಸುವುದು ಮತ್ತು ಚರ್ಚಿಸುವುದು.

**ಚಟುವಟಿಕೆ 4**

ನೀಡಿರುವ ಪ್ರಶ್ನೆಗಳನ್ನು ಮಕ್ಕಳೊಂದಿಗೆ ಚರ್ಚಿಸಿ ರಾಷ್ಟ್ರದ ನಿಯಮಗಳ ಬಗ್ಗೆ ಅರ್ಥೈಸುವುದು.

**ಕಲಿಕಾ ಹಾಳೆ: 43**

**ಚಟುವಟಿಕೆ: 1**

ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ವಿಷಯ ನೀಡಿ ಮಂಡಿಸಲು ಅವಕಾಶ ಮಾಡಿಕೊಟ್ಟು ಚರ್ಚಿಸುವುದು. ಅಗತ್ಯ ಮಾರ್ಗದರ್ಶನ ನೀಡುವುದು.

**ಚಟುವಟಿಕೆ: 2** ಹೆಚ್ಚಿನ ಮಾಹಿತಿಗಾಗಿ ನಾಟಕ

ನಾಟಕದ ಸಂಭಾಷಣೆಯನ್ನು ಮಕ್ಕಳಿಗೆ ಹೇಳುತ್ತಾ ಸಂಸತ್ತಿನ ರಚನೆಯನ್ನು ಅರ್ಥೈಸುವುದು. ಮಕ್ಕಳಿಗೆ ಅವರ ಕ್ಷೇತ್ರದ ಎಂ ಪಿ ಯಾರು? ಅವರು ಹೇಗೆ ಆಯ್ಕೆಯಾಗುತ್ತಾರೆ? ಏನು ಕೆಲಸ ಮಾಡುತ್ತಾರೆ ಎಂಬ ಪ್ರಶ್ನೆಗಳನ್ನು ಕೇಳಿ ಅವುಗಳ ಮೇಲೆ ಚರ್ಚೆ ನಡೆಸಬೇಕು.

**ಚಟುವಟಿಕೆ: 3** ನೀಡಿರುವ ಪ್ರಶ್ನೆಗಳಿಗೆ ಮಕ್ಕಳೇ ಉತ್ತರಿಸಲು ಅವಕಾಶ ನೀಡುವುದು.

**ಕಲಿಕಾ ಹಾಳೆ: 44**

ಸಂಭಾಷಣೆಯನ್ನು ಮುಂದುವರಿಸಿ ಮಕ್ಕಳಿಗೆ ಕೇಂದ್ರ ಕಾರ್ಯಾಂಗ ಮತ್ತು ಭಾರತದ ನ್ಯಾಯಾಂಗ ವ್ಯವಸ್ಥೆಯನ್ನು ಪರಿಚಯಿಸುವುದು.

**ಚಟುವಟಿಕೆ: 1** ನೀಡಿರುವ ಪ್ರಶ್ನೆಗಳಿಗೆ ಮಕ್ಕಳೇ ಉತ್ತರಿಸಲು ಅವಕಾಶ ನೀಡುವುದು.

**ಚಟುವಟಿಕೆ: 2** ಈ ಮೇಲಿನ ಪಟ್ಟಿಯನ್ನು ಗಮನಿಸಿ ನಿಮಗೆ ಇಷ್ಟವಾದ ಒಂದು ಅಂಗದ ಬಗ್ಗೆ ಐದು ವಾಕ್ಯಗಳನ್ನು ಬರೆಯಿರಿ.

ಮೇಲಿನ ಪಟ್ಟಿಯನ್ನು ಗಮನಿಸಿ ಕೇಳಿದ ಪ್ರಶ್ನೆಗೆ ಉತ್ತರಿಸಲು ಹೇಳುವುದು.

**ಮೌಲ್ಯಮಾಪನ:** ಕಲಿಕಾಹಾಳೆ 44 ರಲ್ಲಿ ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

## ಕಲಿಕಾಂಶ 17– ಆಕಾಶಕಾಯಗಳು

**ಕಲಿಕಾಫಲ 17: ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವರು**

**ಉದ್ದೇಶ:**

- ಸೂರ್ಯ ಮತ್ತು ಅದರ ಪರಿವಾರವನ್ನು ಅರಿಯುವರು.
- ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳ ಲಕ್ಷಣಗಳ ಬಗ್ಗೆ ಅರಿಯುವರು ಮತ್ತು ಅವುಗಳ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸುವರು

**ಕಲಿಕಾ ಸಾಮಗ್ರಿಗಳು:** ಸೌರಮಂಡಲದ ಮಾದರಿ, ವೀಡಿಯೋಗಳು.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಕೆಲವು ಪ್ರಶ್ನೆಗಳನ್ನು ಕೇಳಿ ಮಕ್ಕಳ ಪೂರ್ವಜ್ಞಾನವನ್ನು ಅರಿಯುವುದು. ಆಕಾಶವನ್ನು ಹಗಲು ರಾತ್ರಿ ಸೂಕ್ಷ್ಮವಾಗಿ ಗಮನಿಸಿ ಆಕಾಶದಲ್ಲಿ ಆಗುವ ಬದಲಾವಣೆಗಳನ್ನು ಪಟ್ಟಿಮಾಡಿಸಿ ಚರ್ಚೆ ಮಾಡುವುದು. ಚಟುವಟಿಕೆ ಹಾಳೆಯಲ್ಲಿ ನೀಡಿರುವ ಸೌರವ್ಯೂಹ ಚಿತ್ರ ನೋಡಲು ತಿಳಿಸಿ ಅದರ ಮೇಲೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದು, ಗುಂಪಿನಲ್ಲಿ ಚರ್ಚಿಸಲು ಅವಕಾಶ ನೀಡುವುದು. ಮಕ್ಕಳಿಗೆ ಮಾರ್ಗದರ್ಶನ ನೀಡಿ ಸೌರವ್ಯೂಹ ಮಾದರಿ ತಯಾರಿಸಲು ಹೇಳುವುದು ಅಥವಾ ತಾವು ಮಕ್ಕಳೊಂದಿಗೆ ಸೇರಿ ಮಾದರಿ ತಯಾರಿಸುವುದು. ಜೊತೆಗೆ ಚಟುವಟಿಕೆಗಳ ಮೂಲಕ ಆಕಾಶಕಾಯಗಳ ನಡುವಿನ ವ್ಯತ್ಯಾಸಗಳನ್ನು ಮಕ್ಕಳೇ ಗುರುತಿಸಿ ಅರ್ಥೈಸಿಕೊಳ್ಳಲು ಅವಕಾಶ ಮಾಡಿಕೊಡುವುದು. ದೈನಂದಿನ ಜೀವನದಲ್ಲಿ ಇವುಗಳ ಮಹತ್ವವನ್ನು ಅರ್ಥೈಸುವುದು.

### ಕಲಿಕಾ ಹಾಳೆ: 45

**ಚಟುವಟಿಕೆ: 1** ನೀವು ರಾತ್ರಿ ಮತ್ತು ಹಗಲಿನಲ್ಲಿ ಆಕಾಶವನ್ನು ನೋಡಿ. ಆಕಾಶದಲ್ಲಿ ನೀವು ನೋಡಿದ ಆಕಾಶಕಾಯಗಳನ್ನು ಮತ್ತು ಆಕಾಶದಲ್ಲಾಗುವ ಬದಲಾವಣೆಗಳನ್ನು ಪಟ್ಟಿ ಮಾಡಿ.

ಈ ಪಾಠವನ್ನು ಆರಂಭಿಸುವುದಕ್ಕೆ 1 ವಾರ ಮುಂಚಿತವಾಗಿ ಮಕ್ಕಳಿಗೆ ಆಕಾಶದಲ್ಲಾಗುವ ಬದಲಾವಣೆಗಳನ್ನು ಪಟ್ಟಿ ಮಾಡಲು ತಿಳಿಸಬೇಕು. ನಂತರ ಮಕ್ಕಳು ಸಂಗ್ರಹಿಸಿದ ಮಾಹಿತಿಯ ಮೇಲೆ ಪ್ರಶ್ನೆಗಳನ್ನು ಹಾಕಿ ಚರ್ಚೆ ನಡೆಸಬೇಕು. ಸ್ವ ಅನುಭವದ ಮೂಲಕ ಪ್ರಾಯೋಗಿಕವಾಗಿ ಮಗು ಕಲಿಯಲು ಸಹಕಾರಿಯಾಗುತ್ತದೆ. ಇಲ್ಲಿ ಮಕ್ಕಳಿಗೆ ಆಕಾಶಕಾಯಗಳ ಬಗ್ಗೆ ಅರ್ಥೈಸಬೇಕು.

**ಚಟುವಟಿಕೆ: 2** ಈ ಕೆಳಗೆ ನೀಡಿರುವ ಸೌರವ್ಯೂಹದ ಚಿತ್ರವನ್ನು ಗಮನಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣ.

ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಲು ಹೇಳುವುದು. ನಂತರ ಅದರ ಮೆಲೆ ಪ್ರಶ್ನಿಸಿ ಸೌರವ್ಯೂಹದ ಬಗ್ಗೆ ಅರ್ಥೈಸುವುದು. ಈ ವೇಳೆ ಹೆಚ್ಚುವರಿಯಾಗಿ ಕೆಲವು ವೀಡಿಯೋಗಳು ಮತ್ತು ಪೂರಕ ಚಿತ್ರಗಳನ್ನು ಸುಗಮಕಾರರು ಬಳಸಬಹುದು. ಮಕ್ಕಳ ಜೊತೆ ಸೇರಿ ಅಥವಾ ಮಾರ್ಗದರ್ಶನ ನೀಡಿ ಸೌರವ್ಯೂಹದ ಮಾದರಿಯನ್ನು ತಯಾರಿಸಿ, ತರಗತಿಯಲ್ಲಿ ಪ್ರದರ್ಶಿಸುವುದು.

**ಚಟುವಟಿಕೆ: 3** ಕೆಳಗೆ ಕೊಟ್ಟಿರುವ ಕೋಷ್ಟಕದಲ್ಲಿ ಗ್ರಹಗಳ ಹೆಸರುಗಳನ್ನು ಗುರುತಿಸಿ ವೃತ್ತ ಹಾಕಿ.

**ಉದಾಹರಣೆ:** ಗುರು ನೀಡಿರುವ ಸುಳಿವಿನಂತೆ ಮುಂದುವರಿಸಲು ಹೇಳುವುದು.

**ಚಟುವಟಿಕೆ: 4** ನಾ ಯಾವ ಗುಂಪಿಗೆ ಬರುವೇ? ಕೆಳಗಿನ ಪಟ್ಟಿಯಲ್ಲಿ ಕೆಲವು ಆಕಾಶಕಾಯಗಳನ್ನು ಕೊಡಲಾಗಿದೆ ಇವು ಯಾವ ಗುಂಪಿಗೆ ಬರುತ್ತವೆ ಎಂಬುದನ್ನು ಕೋಷ್ಟಕದಲ್ಲಿ ಬರೆಯಿರಿ.

**ಚಟುವಟಿಕೆ: 5** ಈ ಕೆಳಗಿನ ಹೇಳಿಕೆಗಳಲ್ಲಿ ಸರಿ ಮತ್ತು ತಪ್ಪು ಗುರುತಿಸಿ. ಏಕೆ ಸರಿ ಮತ್ತು ತಪ್ಪು ಚರ್ಚಿಸಿ.

ಈ ಮೇಲಿನ 4 ಮತ್ತು 5 ನೇ ಚಟುವಟಿಕೆಗಳನ್ನು ಮಕ್ಕಳೇ ಯೋಚಿಸಿ ಮಾಡುವಂತೆ ಅನುಕೂಲಿಸುವುದು. ಅಗತ್ಯವಿರುವ ಕಡೆ ಮಾರ್ಗದರ್ಶನ ನೀಡುವುದು. ಆಕಾಶಕಾಯಗಳ ನಡುವೆ ಇರುವ ವ್ಯತ್ಯಾಸಗಳನ್ನ ಮಕ್ಕಳು ಅರ್ಥೈಸಿಕೊಳ್ಳಲು ಇಲ್ಲಿ ಅವಕಾಶಮಾಡಿಕೊಡಬೇಕು. ಅದಕ್ಕೆ ಪೂರಕ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಬೇಕು.

**ಚಟುವಟಿಕೆ: 6** ನಕ್ಷತ್ರ, ಗ್ರಹ, ಉಪಗ್ರಹಗಳ ಬಗ್ಗೆ ನಾವು ತಿಳಿದ ವಿಚಾರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಬರೆಯೋಣ.

ಸೂಚನೆಯಂತೆ ಉತ್ತರಿಸಲು ತಿಳಿಸುವುದು.

**ಮೌಲ್ಯಮಾಪನ:** ಕಲಿಕಹಾಳೆ 45 ರಲ್ಲಿ ಚಟುವಟಿಕೆ 6 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

**ಕಲಿಕಾಂಶ 18 – ಭೂಮಿಯ ಆಕಾರ ಮತ್ತು ಚಲನೆಗಳು**

**ಕಲಿಕಾಫಲ 18: ಭೂಮಿಯ ಆಕಾರ ಮತ್ತು ಗಾತ್ರದ ಬಗ್ಗೆ ತಿಳಿಯುವರು**

**ಉದ್ದೇಶ:**

- ಭೂಮಿಯ ಆಕಾರ ಮತ್ತು ಗಾತ್ರವನ್ನು ಅರಿಯುವರು
- ಭೂಮಿಯು ಜಿಯಾಡ್ ಆಕಾರವಿರುವುದನ್ನು ಪ್ರಯೋಗಾತ್ಮಕವಾಗಿ ಅರಿಯುವರು

**ಕಲಿಕಾ ಸಾಮಗ್ರಿಗಳು:** ಗ್ಲೋಬ್, ದಪ್ಪನೆಯ ಚೆಂಡು, ಕಟರ್, ಡ್ರಾಯಿಂಗ್ ಶೀಟ್, ಗಮ್ಮು, ಕತ್ತರಿ, ರೀಫಿಲ್.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಭೂಮಿಯ ಆಕಾರದ ಮೇಲೆ ಕೆಲವು ಪ್ರಶ್ನೆಗಳನ್ನು ಕೇಳಿ ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು. ನಂತರ ಒಂದು ಚಟುವಟಿಕೆ ಮೂಲಕ ಭೂಮಿ ಏಕೆ ನಮಗೆ ಸಮತಟ್ಟಾಗಿ ಕಾಣುತ್ತದೆ ಎಂಬುದನ್ನು ಮಕ್ಕಳೇ ಪ್ರಯೋಗದ ಮೂಲಕ ಅರ್ಥೈಸಿಕೊಳ್ಳುವಂತೆ ಮಾಡುವುದು. ತದನಂತರ ಭೂಮಿಯಾಕಾರದ ಬಗ್ಗೆ ಒಂದು ಚಟುವಟಿಕೆಯನ್ನು ಮಕ್ಕಳಿಂದಲೇ ಮಾಡಿಸಿ ಏಕೆ ಭೂಮಿ ಧೃವಪ್ರದೇಶಗಳಲ್ಲಿ ಸ್ವಲ್ಪ ತಗ್ಗಿದೆ ಎಂಬುದನ್ನು ಅರ್ಥೈಸುವುದು. ಭೂಮಿಯ ಆಕಾರವನ್ನು ಮಕ್ಕಳು ಅರಿತ ನಂತರ ಅದರ ಗಾತ್ರದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಚರ್ಚೆ ನಡೆಸಿ ಭೂಮಿಯ ಗಾತ್ರವನ್ನು ಅರ್ಥೈಸುವುದು.

**ಕಲಿಕಾ ಹಾಳೆ: 46**

**ಚಟುವಟಿಕೆ: 1** ಭೂಮಿ ಏಕೆ ಸಮತಟ್ಟಾಗಿ ಕಾಣುತ್ತದೆ ಎಂದು ನೋಡೋಣ. ಮಕ್ಕಳ ಜೊತೆ ಸೇರಿ ಒಂದು ಚೆಂಡನ್ನು ತೆಗೆದುಕೊಂಡು ಈ ಚಟುವಟಿಕೆಯನ್ನು ಮಾಡಿಸಿ ಮಕ್ಕಳು ಪ್ರಯೋಗಿಕವಾಗಿ ಏಕೆ ಭೂಮಿ ಸಮತಟ್ಟಾಗಿ ಕಾಣುತ್ತದೆ ಎಂಬುದನ್ನು ಅರ್ಥೈಸಿಕೊಳ್ಳುವಂತೆ ಮಾಡುವುದು.

**ಚಟುವಟಿಕೆ: 2 ಭೂಮಿಯಾಕಾರ** : ಮಕ್ಕಳಿಗೆ ಮಾರ್ಗದರ್ಶನವನ್ನು ನೀಡಿ ಭೂಮಿಯಾಕಾರ (ಜಿಯಾಡ್ ಶೇಪ್) ಮಾದರಿಯನ್ನು ಮಕ್ಕಳಿಂದಲೇ ಮಾಡಿಸುವುದು. ನಂತರ ಮಕ್ಕಳಿಗೆ ಏಕೆ ಭೂಮಿಯ ಧೃವಪ್ರದೇಶಗಳಲ್ಲಿ ಸ್ವಲ್ಪ ತಗ್ಗಿದೆ ಮತ್ತು ಮಧ್ಯಭಾಗ ಉಬ್ಬಿದೆ ಎಂಬ ಪ್ರಶ್ನೆ ಕೇಳಿ ಜಿಯಾಡ್ ಶೇಪ್ ಅನ್ನು ಅರ್ಥೈಸಿಕೊಳ್ಳಲು ಅವಕಾಶ ನೀಡುವುದು. ನಂತರ ಭೂಮಿಯ ಗಾತ್ರದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಭೂಮಿಯ ಗಾತ್ರದ ಪರಿಕಲ್ಪನೆಯನ್ನು ಅರ್ಥೈಸುವುದು.

**ಕಲಿಕಾಫಲ 19: ಭೂಮಿಯ ದೈನಂದಿನ ಚಲನೆ**

**ಕಲಿಕಾಫಲ 19: ಭೂಮಿಯ ದೈನಂದಿನ ಚಲನೆ ಮತ್ತು ವಾರ್ಷಿಕ ಚಲನೆ ಅರ್ಥೈಸಿಕೊಳ್ಳುವುದು.**

**ಉದ್ದೇಶ:**

- ಭೂಮಿಯ ಚಲನೆಗಳ ಬಗ್ಗೆ ಅರಿಯುವರು.
- ಹಗಲು ರಾತ್ರಿ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವರು.
- ಭೂಮಿಯ ಚಲನೆಯಿಂದ ದೈನಂದಿನ ಜೀವನದಲ್ಲಿ ಆಗುವ ಪರಿಣಾಮಗಳ ಬಗ್ಗೆ ತಿಳಿಯುವರು.

**ಕಲಿಕಾ ಸಾಮಗ್ರಿಗಳು:** ಗ್ಲೋಬ್, ಮೇಣದ ಬತ್ತಿ, ಸೂರ್ಯ ಮತ್ತು ಭೂಮಿಯ ಮುಖವಾಡ, ವೀಡಿಯೋಗಳು, ಚಿತ್ರಪಟಗಳು.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಭೀಮಣ್ಣ ಮತ್ತು ಕವನಳ ಕಾಲ್ಪನಿಕ ಸಂಭಾಷಣೆಯ ಮೂಲಕ ಆರಂಭಿಸುವರು. ಪೂರಕ ಚಿತ್ರಪಟಗಳನ್ನು ತೋರಿಸಿ ಮತ್ತು ಮಕ್ಕಳಿಂದ ಭೂಮಿಯ ಚಲನೆಯ ಚಟುವಟಿಕೆ ಮಾಡಿಸುವುದು. ಭೂಮಿಯ ದೈನಂದಿನ ಚಲನೆ ಮತ್ತು ವಾರ್ಷಿಕ ಚಲನೆಯನ್ನು ಮಕ್ಕಳಿಗೆ ಅರ್ಥೈಸುವುದು. ಈ ಚಲನೆಗಳಿಂದ ಏನು ಪರಿಣಾಮಗಳಾಗುತ್ತವೆ ಎಂಬುದನ್ನು ಮಕ್ಕಳೇ ಅರ್ಥೈಸಿಕೊಳ್ಳಲು ಕೆಲವು ಪ್ರಶ್ನೆಗಳನ್ನು ಹಾಕಿ ಮಕ್ಕಳನ್ನು ಆಲೋಚನೆಗೆ ಹಚ್ಚುವುದು. ಹಗಲು ರಾತ್ರಿ ಪರಿಕಲ್ಪನೆಯನ್ನು ಪ್ರಯೋಗಿಕವಾಗಿ ನೈಜ ಉದಾಹರಣೆಯ ಮೂಲಕ ಮಕ್ಕಳಿಗೆ ಅರ್ಥೈಸುವುದು.

**ಕಲಿಕಾ ಹಾಳೆ: 47**

**ಚಟುವಟಿಕೆ: 1** ಭೂಮಿಯ ಚಲನೆಯ ಮಾಡಿ ಕಲಿಯೋಣ

ಮಕ್ಕಳಿಂದಲೇ ಈ ಚಟುವಟಿಕೆಯನ್ನು ಮಾಡಿಸುವುದು. ಅಗತ್ಯವಿರುವ ಕಡೆ ಸೂಕ್ತ ಮಾರ್ಗದರ್ಶನವನ್ನು ನೀಡುವುದು. ಪ್ರಶ್ನೆಗಳನ್ನು ಹಾಕಿ ಚರ್ಚೆ ನಡೆಸುವುದು. ಭೂಮಿಯ ದೈನಂದಿನ ಮತ್ತು ವಾರ್ಷಿಕ ಚಲನೆಯನ್ನು ಅರ್ಥೈಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

**ಚಟುವಟಿಕೆ: 2** ಹಗಲು ರಾತ್ರಿಗಳನ್ನು ತಿಳಿಯೋಣ.

ಮಕ್ಕಳ ಜೊತೆಗೂಡಿ ಗ್ಲೋಬ್ ಮತ್ತು ಮೇಣದಬತ್ತಿ ಬಳಸಿ ಕತ್ತಲ ಕೋಣೆಯಲ್ಲಿ ಸುಗಮಕಾರರು ಈ ಪ್ರಾಯೋಗಿಕ ಚಟುವಟಿಕೆಯನ್ನು ಮಾಡಿಸಬೇಕು. ಹಗಲು ರಾತ್ರಿ ಪರಿಕಲ್ಪನೆಯನ್ನು ಅರ್ಥೈಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಜೊತೆಗೆ ನೈಜ ಉದಾಹರಣೆಯನ್ನು ಬಳಸುವುದು. ಉದಾಹರಣೆ: ಅಮೇರಿಕ ಮತ್ತು ಭಾರತದ ಸಮಯ

**ಚಟುವಟಿಕೆ: 3** ಚರ್ಚಿಸಿ ಮತ್ತು ಉತ್ತರಿಸೋಣ.

ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ ಚರ್ಚೆ ನಡೆಸಿ ಭೂಮಿಯ ಚಲನೆಯ ಪರಿಣಾಮಗಳನ್ನು ಅರ್ಥೈಸುವುದು.

**ಚಟುವಟಿಕೆ: 4 ಪ್ರಶ್ನೆಗಳಿಗೆ ಉತ್ತರಿಸಿ**

ಸೂಚನೆಯಂತೆ ಪ್ರಶ್ನೆಗಳಿಗೆ ಉತ್ತರ ಬರೆಯಲು ತಿಳಿಸುವುದು.

**ಮೌಲ್ಯಮಾಪನ:** ಕಲಿಕಹಾಳೆ 47 ರಲ್ಲಿ ಚಟುವಟಿಕೆ 4ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

## ಕಲಿಕಾಂಶ 19– ದಿಕ್ಕುಗಳು

**ಕಲಿಕಾಫಲ 20: ದಿಕ್ಕುಗಳ ಬಗ್ಗೆ ಅರಿಯುತ್ತಾರೆ ಮತ್ತು ದಿನ ನಿತ್ಯದ ಜೀವನದಲ್ಲಿ ಅನ್ವಯಿಸುತ್ತಾರೆ**

**ಉದ್ದೇಶ:**

- ದಿಕ್ಕುಗಳನ್ನು ಗುರುತಿಸುವರು ಮತ್ತು ದಿನನಿತ್ಯದ ಜೀವನದಲ್ಲಿ ಬಳಸುವರು.

**ಕಲಿಕಾ ಸಾಮಗ್ರಿಗಳು:** ಭೂಪಟಗಳು, ದಿಕ್ಸೂಚಿ

ಪ್ರಕ್ರಿಯೆ: ಸುಗಮಕಾರರು ಮೊದಲಿಗೆ ದಿಕ್ಕುಗಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಪ್ರತಿಕ್ರಿಯೆ ಪಡೆದು ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು. ನಂತರ ದಿಕ್ಕುಗಳನ್ನು ಗುರುತಿಸುವ ಚಟುವಟಿಕೆಯ ಮೂಲಕ ದಿಕ್ಕುಗಳನ್ನು ಪರಿಚಯಿಸುವುದು. ತದನಂತರ ದಿಕ್ಸೂಚಿ ಬಳಸಿ ದಿಕ್ಕುಗಳನ್ನು ಗುರುತಿಸುವುದನ್ನು ಅರ್ಥೈಸುವುದು. ಮಕ್ಕಳಿಗೆ ದಿಕ್ಕುಗಳ ಆಟವನ್ನು ಆಡಿಸುವುದು ಮತ್ತು ಭೂಪಟ ಬಳಸಿ ಸ್ಥಳಗಳನ್ನು ಹೇಳಿ ದಿಕ್ಕುಗಳನ್ನು ಗುರುತಿಸುವ ಚಟುವಟಿಕೆ ಮಾಡಿಸುವುದು. ಶಾಲೆ ಮತ್ತು ತನ್ನ ಮನೆಯ ಸುತ್ತಮುತ್ತಲಿನ ಸ್ಥಳಗಳ ದಿಕ್ಕುಗಳನ್ನು ಗುರುತಿಸಲು ಹೇಳುವುದು ಜೊತೆಗೆ ದಿಕ್ಕುಗಳ ಮಹತ್ವದ ಬಗ್ಗೆ ಅರ್ಥೈಸುವುದು.

**ಕಲಿಕಾ ಹಾಳೆ: 48**

**ಚಟುವಟಿಕೆ: 1** ದಿಕ್ಕುಗಳ ಬಗ್ಗೆ ಕೇಳಿರಬಹುದು ಹಾಗಾದರೆ ನಿಮಗೆಷ್ಟು ಗೊತ್ತು ಹೇಳಿ ನೋಡೋಣ.

ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು ಈ ಚಟುವಟಿಕೆ ಉದ್ದೇಶವಾಗಿದ್ದು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬೇಕು.

**ಚಟುವಟಿಕೆ: 2 ದಿಕ್ಕುಗಳ ಗುರುತಿಸೋಣ**

ಚಿತ್ರವನ್ನು ಗಮನಿಸಲು ಹೇಳುವುದು ನಂತರ ಅದರ ಮೇಲೆ ಪ್ರಶ್ನೆಗಳನ್ನು ಕೇಳಿ ದಿಕ್ಕುಗಳನ್ನು ಮಕ್ಕಳಿಗೆ ಅರ್ಥೈಸಿಕೊಳ್ಳಲು ಅವಕಾಶ ನೀಡುವುದು.

**ಚಟುವಟಿಕೆ: 3** ದಿಕ್ಸೂಚಿಯ ಜೊತೆ ಆಟವಾಡೋಣ ಬನ್ನಿ ಸೂರ್ಯ ಮತ್ತು ದಿಕ್ಸೂಚಿ ಹೊರತು ಪಡಿಸಿ ಮತ್ತೆ ಯಾವುದರಿಂದ ನಾವು ದಿಕ್ಕುಗಳನ್ನು ಗುರುತಿಸಬಹುದು ಚರ್ಚಿಸಿ.

ದಿಕ್ಸೂಚಿಯನ್ನು ಮಕ್ಕಳಿಗೆ ಪರಿಚಯಿಸುವುದು ನಂತರ ದಿಕ್ಸೂಚಿ ಬಳಸಿ ದಿಕ್ಕುಗಳನ್ನು ಗುರುತಿಸಲು ಹೇಳುವುದು. ಅಗತ್ಯವಿರುವ ಕಡೆ ಮಾರ್ಗದರ್ಶನವನ್ನು ನೀಡುವುದು ಮತ್ತು ದಿಕ್ಸೂಚಿ ಬಳಕೆಯ ಮಹತ್ವದ ಬಗ್ಗೆ ಚರ್ಚಿಸುವುದು.

**ಚಟುವಟಿಕೆ: 4** ಮಕ್ಕಳನ್ನು ಸೂಚನೆಯಂತೆ ಚಿತ್ರನೋಡಿ ದಿಕ್ಕುಗಳ ಆಟ ಆಡಲು ಹೇಳುವುದು ಮತ್ತು ಶಾಲೆಯ ಮೈದಾನದಲ್ಲಿ ಮಕ್ಕಳಿಗೆ ಇದೇ ರೀತಿ ಆಟ ಆಡಿಸುವುದು.

**ಚಟುವಟಿಕೆ: 5** ಚಿತ್ರದಲ್ಲಿ ತೋರಿಸಿದಂತೆ ಭಾರತದ ಭೂಪಟವನ್ನು ದಿಕ್ಕಿನ ಅನುಸಾರ ನೆಲದ ಮೇಲಿಟ್ಟು ಭೂಪಟ ಬಳಸಿ ದಿಕ್ಕುಗಳ ಅರಿಯೋಣ.

ಭಾರತದ ರಾಜಕಿಯ ಭೂಪಟವನ್ನು ನೆಲದ ಮೇಲೆ ದಿಕ್ಕುಗಳ ಅನುಸಾರ ಇಡಲು ಹೇಳುವುದು. ನಂತರ ಚಟುವಟಿಕೆಯಲ್ಲಿ ಸೂಚಿಸಿರುವಂತೆ ದಿಕ್ಕುಗಳನ್ನು ಗುರುತಿಸಲು ಅವಕಾಶ ನೀಡುವುದು. ದಿನನಿತ್ಯ ಜೀವನದಲ್ಲಿ ದಿಕ್ಕುಗಳ ಮಹತ್ವದ ಬಗ್ಗೆ ಚರ್ಚಿಸಿ ಅರ್ಥೈಸುವುದು.

**ಚಟುವಟಿಕೆ: 6** ಬಿಟ್ಟ ಸ್ಥಳಗಳನ್ನು ಭರ್ತಿ ಮಾಡೋಣ

ಚಟುವಟಿಕೆ: 7 ನಿಮ್ಮ ಮನೆಯ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರಕ್ಕೆ ಏನಿದೆ ಪಟ್ಟಿಮಾಡಿ ಗೆಳೆಯರೊಂದಿಗೆ ಹಂಚಿಕೊಳ್ಳಿ.

ಮಕ್ಕಳು ಯಾರ ಸಹಾಯ ಪಡೆಯದೆ ಈ ಚಟುವಟಿಕೆ ಮಾಡಲು ಹೇಳುವುದು.

**ಮೌಲ್ಯಮಾಪನ:** ಕಲಿಕಾಹಾಳೆ 48ರಲ್ಲಿ ಚಟುವಟಿಕೆ 6ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ 20 – ಅಕ್ಷಾಂಶ ಮತ್ತ ರೇಖಾಂಶಗಳು

**ಕಲಿಕಾ ಫಲ 21: ಅಕ್ಷಾಂಶ, ರೇಖಾಂಶಗಳ ಬಗ್ಗೆ ತಿಳಿಯುವರು ಮತ್ತು ಪ್ರಮುಖವಾದವುಗಳನ್ನು ಗುರುತಿಸುವರು.**

**ಉದ್ದೇಶ:**

- ಅಕ್ಷಾಂಶ ಮತ್ತು ರೇಖಾಂಶಗಳು ಮತ್ತು ದಿನನಿತ್ಯ ಜೀವನದಲ್ಲಿ ಅವುಗಳ ಮಹತ್ವದ ಬಗ್ಗೆ ಅರಿಯುವರು.
- ಪ್ರಧಾನ ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುತಿಸುವರು.

**ಕಲಿಕಾ ಸಾಮಗ್ರಿಗಳು:** ಗ್ಲೋಬ್, ಭೂಪಟ, ಚೆಂಡು, ಮಾರ್ಕರ್.

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ಅಕ್ಷಾಂಶ ಮತ್ತು ರೇಖಾಂಶ ಪರಿಕಲ್ಪನೆಯನ್ನು ಮಕ್ಕಳಲ್ಲಿ ಮೂಡಿಸುವುದಕ್ಕೆ ಮೊದಲಿಗೆ ಸ್ಥಳ ಗುರುತಿಸುವ ಚಟುವಟಿಕೆಯನ್ನು ಮಾಡಿಸುವುದು. ನಂತರ ಅಕ್ಷಾಂಶ ಮತ್ತು ರೇಖಾಂಶ ಪರಿಕಲ್ಪನೆಯನ್ನು ಒಂದು ಸನ್ನಿವೇಶವನ್ನು ತೆಗೆದುಕೊಂಡು ಅರ್ಥೈಸುವುದು. ತದನಂತರ ಪ್ರಧಾನ ಅಕ್ಷಾಂಶ ಮತ್ತು ರೇಖಾಂಶಗಳನ್ನು ಪರಿಚಯಿಸುವುದು. ಪ್ರಶ್ನೆಗಳನ್ನು ಕೇಳಿ ಚರ್ಚಿಸಿ ಕಲಿಕೆ ಗಟ್ಟಿಗೊಳ್ಳುವಂತೆ ಮಾಡುವುದು. ಗ್ಲೋಬ್ ಮತ್ತು ಭೂಪಟದಲ್ಲಿ ಪ್ರಧಾನ ಅಕ್ಷಾಂಶ ಮತ್ತು ರೇಖಾಂಶಗಳ ಗುರುತಿಸಲು ಅವಕಾಶ ಮಾಡಿಕೊಡುವುದು. ಜೊತೆಗೆ ದಿನನಿತ್ಯ ಜೀವನದಲ್ಲಿ ಇವುಗಳ ಮಹತ್ವದ ಬಗ್ಗೆ ಅರ್ಥೈಸುವುದು.

### ಕಲಿಕಾ ಹಾಳೆ: 49

**ಚಟುವಟಿಕೆ: 1 ಸ್ಥಳ ಗುರುತಿಸುವ ಚಟುವಟಿಕೆ :** ಮಕ್ಕಳಿಂದಲೇ ಈ ಚಟುವಟಿಕೆಯನ್ನು ಮಾಡಿಸುವುದು. ಅಗತ್ಯ ಮಾರ್ಗದರ್ಶನ ನೀಡುವುದು.

**ಚಟುವಟಿಕೆ: 2 ಅಕ್ಷಾಂಶ ಮತ್ತು ರೇಖಾಂಶ ಪರಿಕಲ್ಪನೆ :** ನೀಡಿರುವ ಸನ್ನಿವೇಶವನ್ನು ಮಕ್ಕಳು ಓದಲು ಹೇಳುವುದು ಮತ್ತು ಸುಗಮಕಾರರು ಓದಿ ಹೇಳುವುದು. ಈ ಮೂಲಕ ಅಕ್ಷಾಂಶ ಮತ್ತು ರೇಖಾಂಶ ಪರಿಕಲ್ಪನೆಯನ್ನು ಹಾಗೂ ಪ್ರಧಾನ ಅಕ್ಷಾಂಶ, ರೇಖಾಂಶಗಳನ್ನು ಮಕ್ಕಳಿಗೆ ಪರಿಚಯಿಸುವುದು. ಈ ವೇಳೆ ಚಿತ್ರಪಟಗಳನ್ನು ಬಳಸಬಹುದು.

**ಚಟುವಟಿಕೆ: 3** ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ ಅಕ್ಷಾಂಶ ಮತ್ತು ರೇಖಾಂಶ ಪರಿಕಲ್ಪನೆಯನ್ನು ಗಟ್ಟಿಗೊಳಿಸುವುದು ಹಾಗೂ ಇವುಗಳ ಮಹತ್ವವನ್ನು ಅರ್ಥೈಸುವುದು.

**ಚಟುವಟಿಕೆ: 4** ಗ್ಲೋಬ್ ಮತ್ತು ಪ್ರಪಂಚದ ನಕ್ಷೆಗಳನ್ನು ತೆಗೆದುಕೊಂಡು ನಿಮ್ಮ ಗೆಳೆಯ/ಗೆಳತಿಯರ ಜೊತೆ ಸೇರಿ ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುಸಲು ಅನುಕೂಲಿಸಿರಿ. ಮಕ್ಕಳಿಗೆ ಗ್ಲೋಬ್ ಮತ್ತು ಪ್ರಪಂಚದ ನಕ್ಷೆಗಳನ್ನು ನೀಡಿ ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುತಿಸಲು ಹೇಳುವುದು ಮತ್ತು ಅದರ ಮೇಲೆ ಚರ್ಚೆ ನಡೆಸುವುದು.

**ಚಟುವಟಿಕೆ: 5** ಈ ಕೆಳಗಿನ ಪ್ರಪಂಚದ ಭೂಪಟದಲ್ಲಿ ಮೂರು ಪ್ರಧಾನ ಅಕ್ಷಾಂಶಗಳನ್ನು ಎಳೆಯಲಾಗಿದೆ. ಅವುಗಳನ್ನು ಗುರುತಿಸಿ ಮತ್ತು ಬಿಟ್ಟ ಸ್ಥಳದಲ್ಲಿ ಹೆಸರಿಸಲಿ. ಚಟುವಟಿಕೆ ಹಾಳೆಯಲ್ಲಿ ನೀಡಿರುವ ಚಿತ್ರದ ಮೇಲೆ ಮಕ್ಕಳು ಪ್ರಧಾನ ಅಕ್ಷಾಂಶಗಳನ್ನು ಗುರುತಿಸಲು ಹೇಳುವುದು.

**ಮೌಲ್ಯಮಾಪನ:** ಕಲಿಕಾಹಾಳೆ 50ರ ಚಟುವಟಿಕೆ 5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ 21– ನಕ್ಷೆ

**ಕಲಿಕಾಫಲ 22: ನಕ್ಷೆಯನ್ನು ಓದುವ ಕೌಶಲ್ಯಗಳನ್ನು ಅರಿಯುವರು ಮತ್ತು ನಕ್ಷೆಯನ್ನು ರಚಿಸುವರು**

**ಉದ್ದೇಶ:**

- ನಕ್ಷೆಯ ಅಗತ್ಯ ಅಂಶಗಳ ಬಗ್ಗೆ ತಿಳಿಯುವರು.
- ನಕ್ಷೆಯ ವಿಧಗಳ ಬಗ್ಗೆ ಮತ್ತು ಅವುಗಳ ವಿಶೇಷತೆಯ ಬಗ್ಗೆ ಅರಿಯುವರು.
- ನಕ್ಷೆಯನ್ನು ಓದುವ ಮತ್ತು ರಚಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳುವರು.

**ಕಲಿಕಾ ಸಾಮಗ್ರಿಗಳು:**

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ನಕ್ಷೆ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಪ್ರತಿಕ್ರಿಯೆ ಪಡೆದು ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು. ಮಕ್ಕಳನ್ನು ಗುಂಪುಗಳಾಗಿ ಮಾಡಿ ನಕ್ಷೆಯನ್ನು ನೀಡಿ ನಕ್ಷೆಯ ಅಂಶಗಳನ್ನು ಗುರುತಿಸಲು ಹೇಳುವುದು. ಎಲ್ಲರಿಗೂ ಮಂಡಿಸಲು ಅವಕಾಶ ನೀಡುವುದು. ನಂತರ ಭೂಪಟವನ್ನು ಬಳಸಿ ಮಕ್ಕಳನ್ನು ಪ್ರಶ್ನಿಸುತ್ತ ನಕ್ಷೆಯ ಅಗತ್ಯಾಂಶಗಳು ಮತ್ತು ಅವುಗಳ ಮಹತ್ವವನ್ನು ಅರಿಯಲು ಅವಕಾಶ ನೀಡುವುದು. ತದನಂತರ ಮಕ್ಕಳನ್ನು ಗುಂಪು ಮಾಡಿ ವಿವಿಧ ವಿಧದ ನಕ್ಷೆಗಳನ್ನು ನೀಡಿ ಅವುಗಳ ನಡುವೆ ಇರುವ ವ್ಯತ್ಯಾಸಗಳನ್ನು ಪಟ್ಟಿಮಾಡಲು ಹೇಳುವುದು. ಮಕ್ಕಳು ಪಟ್ಟಿ ಮಾಡಿದ ಅಂಶಗಳನ್ನು ತೆಗೆದುಕೊಂಡು ನಕ್ಷೆಯ ವಿಧಗಳನ್ನು ಅರ್ಥೈಸುವುದರ ಜೊತೆಗೆ ಯಾವ ನಕ್ಷೆಯಿಂದ ಯಾವ ಮಾಹಿತಿಯನ್ನು ಪಡೆಯಬಹುದು ಎಂಬುದರ ಬಗ್ಗೆ ಸ್ಪಷ್ಟತೆಯನ್ನು ನೀಡುವುದು. ನಕ್ಷೆ ಓದುವ ಕೌಶಲ್ಯವನ್ನು ಅರ್ಥೈಸಿಕೊಂಡ ನಂತರ ನಕ್ಷೆ ರಚಿಸುವ ಚಟುವಟಿಕೆ ಮಾಡಿಸುವುದು ಇದಕ್ಕೆ ಅಗತ್ಯ ಮಾರ್ಗದರ್ಶನವನ್ನು ನೀಡುವುದು. ಭೂಗೋಳದ ತರಗತಿಯಲ್ಲಿ ನಕ್ಷೆ ಅಥವಾ ಮ್ಯಾಪ್ ಬಳಸುವುದು ಬಹುಮುಖ್ಯ. ಮ್ಯಾಪ್ ಅಥವಾ ನಕ್ಷೆ ಇಲ್ಲದೆ ಭೂಗೋಳದ ತರಗತಿ ಅಪೂರ್ಣ ಎನ್ನುವುದನ್ನು ಸುಗಮಕಾರರು ಅರ್ಥಮಾಡಿಕೊಳ್ಳಬೇಕು.

### ಕಲಿಕಾ ಹಾಳೆ: 50

**ಚಟುವಟಿಕೆ: 1**

ಮಕ್ಕಳನ್ನು ಗುಂಪುಗಳಾಗಿ ಮಾಡಿ ನಕ್ಷೆಯನ್ನು ನೀಡಿ ನಕ್ಷೆಯ ಅಂಶಗಳನ್ನು ಗುರುತಿಸಲು ಅನುಕೂಲಿಸುವುದು. ಎಲ್ಲಾ ಮಕ್ಕಳು ಮಂಡಿಸಿದ ನಂತರ ಚರ್ಚೆ ನಡೆಸುವುದು.

**ಚಟುವಟಿಕೆ: 2** ನಕ್ಷೆಯನ್ನು ಒಮ್ಮೆ ನೋಡಿ ಹೇಳೋಣ. (ಭಾರತದ ರಾಜಕೀಯ ಭೂಪಟವನ್ನು ಬಳಸಿಕೊಳ್ಳುವುದು)

ಭೂಪಟವನ್ನು ಬಳಸಿ ಮಕ್ಕಳನ್ನು ಪ್ರಶ್ನಿಸುತ್ತ ನಕ್ಷೆಯ ಅಗತ್ಯಾಂಶಗಳು ಮತ್ತು ಅವುಗಳ ಮಹತ್ವವನ್ನು ಅರಿಯಲು ಅವಕಾಶ ನೀಡುವುದು.

**ಚಟುವಟಿಕೆ: 3** ನಕ್ಷೆಯ ವಿಧಗಳ ಬಗ್ಗೆ ಅರಿಯೋಣ. ನೀವು ಗಮನಿಸಬೇಕಾದ ಅಂಶಗಳು: ನಕ್ಷೆಗಳ ಶೀರ್ಷಿಕೆ, ನಕ್ಷೆಗಳಲ್ಲಿ ಬಳಸಿರುವ ಬಣ್ಣ, ಚಿಹ್ನೆಗಳು, ಸ್ಕೇಲ್, ನಕ್ಷೆ ಯಾವ ವಿಷಯದ ಬಗ್ಗೆ ತಿಳಿಸುತ್ತದೆ.

ಮಕ್ಕಳನ್ನು ಗುಂಪುಗಳಾಗಿ ಮಾಡಿ ವಿವಿಧ ವಿಧದ ನಕ್ಷೆಗಳನ್ನು ನೀಡಿ ಗಮನಿಸಿ ಅವುಗಳಲ್ಲಿರುವ ವ್ಯತ್ಯಾಸಗಳನ್ನು ಗುರುತಿಸಲು ಹೇಳುವುದು. ನಂತರ ಅದರ ಮೇಲೆ ಚರ್ಚಿಸಿ ನಕ್ಷೆಯ ವಿಧಗಳನ್ನು ಅರ್ಥೈಸುವುದು ಜೊತೆಗೆ ಯಾವ ನಕ್ಷೆಯಿಂದ ಯಾವ ಮಾಹಿತಿಯನ್ನು ಪಡೆಯಬಹುದು ಎಂಬುದರ ಬಗ್ಗೆ ಸ್ಪಷ್ಟತೆಯನ್ನು ನೀಡುವುದು ಮತ್ತು ನಕ್ಷೆಯ ಮಹತ್ವವನ್ನು ಅರ್ಥೈಸುವುದು. ಶಾಲೆ/ ಅಟ್ಲಾಸ್/ ಪಠ್ಯ ಪುಸ್ತಕದಲ್ಲಿರುವ ವಿವಿಧ ವಿಧದ ನಕ್ಷೆಗಳನ್ನು ಬಳಸಿ ಈ ಚಟುವಟಿಕೆ ಮಾಡಿಸುವುದು ಬಹಳ ಮುಖ್ಯ.

**ಚಟುವಟಿಕೆ: 4** ನಕ್ಷೆಯನ್ನು ತಯಾರಿಸೋಣ.

ನೀಡಿರುವ ಸುಳಿವು ಆಧರಿಸಿ ಪ್ರತಿಯೊಬ್ಬರು ನಕ್ಷೆ ರಚಿಸಲು ಹೇಳುವುದು. ಅಗತ್ಯವಿರುವ ಕಡೆ ಮಾರ್ಗದರ್ಶನ ನೀಡುವುದು. ಮಕ್ಕಳು ರಚಿಸಿದ ನಕ್ಷೆಯ ಪ್ರದರ್ಶಿಸಲು ಅವಕಾಶ ನೀಡಿ ಆ ನಕ್ಷೆಗಳ ಮೇಲೆ ಚರ್ಚಿಸುವುದು.

**ಚಟುವಟಿಕೆ: 5** ನಕ್ಷಾ ಸಂಕೇತಗಳನ್ನು ಬಳಸಿ ನಿಮ್ಮ ಶಾಲೆಯ ಅಥವಾ ಗ್ರಾಮದ ಕಾಲ್ಪನಿಕ ನಕ್ಷೆಯನ್ನು ರಚಿಸಲು ಹೇಳುವುದು.

**ಮೌಲ್ಯಮಾಪನ:** ಕಲಿಕಾಹಾಳೆ 49 ರಲ್ಲಿ ಚಟುವಟಿಕೆ 4ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## ಕಲಿಕಾಂಶ 22– ಭೂಖಂಡಗಳು

| ಕಲಿಕಾಫಲ 22: ನಕ್ಷೆಯನ್ನು ಓದುವ ಕೌಶಲ್ಯಗಳನ್ನು ಅರಿಯುವರು ಮತ್ತು ನಕ್ಷೆಯನ್ನು ರಚಿಸುವರು |
|---|

**ಉದ್ದೇಶ:**

- ಭೂಖಂಡಗಳ ಬಗ್ಗೆ ಅರಿಯುವರು.

**ಕಲಿಕಾ ಸಾಮಗ್ರಿಗಳು:** ಪ್ರಪಂಚದ ಭೂಪಟ, ಭೂಖಂಡಗಳ ಭೂಪಟ.

**ಪ್ರಕ್ರಿಯೆ:** ಸುಗಮಕಾರರು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ ಪೂರ್ವಜ್ಞಾನವನ್ನು ತಿಳಿಯುವುದು. ಪ್ರಪಂಚದ ಭೂಪಟದ ಚಿತ್ರದಲ್ಲಿ ಭೂಖಂಡಗಳು ಮತ್ತು ಸಾಗರ ಸಮುದ್ರಗಳ ಗುರುತಿಸಲು ಹೇಳುವುದು. ನಂತರ ಮಕ್ಕಳಿಗೆ ಪ್ರಶ್ನೆ ಕೇಳಿ ಅರ್ಥೈಸುವುದು. ಶಾಲೆಯಲ್ಲಿರುವ ಭೂಪಟ ಮತ್ತು ಅಟ್ಲಾಸ್ ಪುಸ್ತಕದಲ್ಲಿ ಗೆಳೆಯ/ಗೆಳತಿಯರ ಜೊತೆಗೂಡಿ ಭೂಖಂಡಗಳು ಮತ್ತು ಸಾಗರ ಗುರುತಿಸಲು ಹೇಳುವುದು. ಕೊಟ್ಟಿರುವ ಚಿತ್ರದಲ್ಲಿ ಭೂಖಂಡಗಳಿಗೆ ಬಣ್ಣ ಹಚ್ಚಿ ಹೆಸರಿಸಲು ಮತ್ತು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ತಿಳಿಸುವುದು. ಮಕ್ಕಳನ್ನು ಗುಂಪುಗಳಾಗಿ ಮಾಡಿ ಭೂಖಂಡಗಳಲ್ಲಿ ದೇಶಗಳನ್ನು ಗುರುತಿಸುವ ಮತ್ತು ಇವುಗಳ ನಡುವೆ ಇರುವ ಭಿನ್ನತೆ ಮತ್ತು ವೈವಿಧ್ಯತೆಯನ್ನು ಪಟ್ಟಿಮಾಡಿಸಿ ಇವುಗಳ ಬಗ್ಗೆ ಚರ್ಚೆ ಮಾಡುವುದು.

**ಕಲಿಕಾ ಹಾಳೆ: 51**

**ಚಟುವಟಿಕೆ: 1** ಮಕ್ಕಳೇ, ಮೇಲೆ ನಾವು ಭೂಖಂಡ, ಸಾಗರ, ಸಮುದ್ರಗಳ ಬಗ್ಗೆ ತಿಳ್ಕೊಂಡ್ವಿ ಅಲ್ವಾ? ಈಗ ನಾವಿಲ್ಲಿ ಒಂದು ಪ್ರಪಂಚದ ಭೂಪಟವನ್ನು ನೋಡಿ ಅದರಲ್ಲಿ ಇವುಗಳನ್ನು ಗುರುತಿಸಿ ತಿಳಿದುಕೊಳ್ಳೋಣ.

ನೀಡಿರುವ ಪ್ರಪಂಚದ ಭೂಪಟ ಚಿತ್ರವನ್ನು ಗಮನಿಸಲು ಹೇಳುವುದು. ನಂತರ ಅದರ ಮೇಲೆ ಪ್ರಶ್ನೆಗಳನ್ನು ಕೇಳಿ ಮಕ್ಕಳಿಗೆ ಭೂಖಂಡಗಳು, ಸಾಗರ, ಸಮುದ್ರಗಳ ಬಗ್ಗೆ ಅರ್ಥೈಸುವುದು.

**ಚಟುವಟಿಕೆ: 2** ಶಾಲೆಯಲ್ಲಿರುವ ಪ್ರಪಂಚದ ನಕ್ಷೆಯನ್ನು ತೆಗೆದುಕೊಂಡು ಭೂಖಂಡಗಳು ಮತ್ತು ಸಾಗರಗಳನ್ನು ಸ್ನೇಹಿತರ ಜೊತೆಗೂಡಿ ಗುರುತಿಸಿ ಹೇಳಿ. ನೀಡಿರುವ ಸೂಚನೆಯಂತೆ ಮಕ್ಕಳೇ ಚಟುವಟಿಕೆ ಮಾಡಲು ಹೇಳುವುದು. ಅಗತ್ಯವಿರುವ ಕಡೆ ಮಾರ್ಗದರ್ಶನ ನೀಡುವುದು.

**ಚಟುವಟಿಕೆ: 3** ಕೆಳಗೆ ಕೊಟ್ಟಿರುವ ಪ್ರಪಂಚದ ಖಾಲಿ ನಕ್ಷೆಯಲ್ಲಿ ಭೂಖಂಡಳಿಗೆ ಬಣ್ಣ ಹಚ್ಚಿ ಅವುಗಳನ್ನು ಹೆಸರಿಸೋಣ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣ.

ನೀಡಿರುವ ಚಿತ್ರಕ್ಕೆ ಬಣ್ಣ ಹಚ್ಚಲು ಹೇಳುವುದು. ನಂತರ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಹೇಳುವುದು.

**ಚಟುವಟಿಕೆ: 4** ಪ್ರಪಂಚದ ಭೂಪಟವನ್ನು ತೆಗೆದುಕೊಂಡು ಭೂಖಂಡಗಳನ್ನು ಗುರುತಿಸಿ ಮತ್ತು ನಿಮ್ಮ ಗೆಳೆಯ/ಗೆಳತಿಯರ ಜೊತೆಗೂಡಿ ಪ್ರತಿ ಭೂಖಂಡದಲ್ಲಿರುವ 5 ದೇಶಗಳನ್ನು ಪಟ್ಟಿ ಮಾಡಿ.

ನೀಡಿರುವ ಸೂಚನೆಯಂತೆ ಮಕ್ಕಳೇ ಚಟುವಟಿಕೆ ಮಾಡಲು ಹೇಳುವುದು. ಅಗತ್ಯವಿರುವ ಕಡೆ ಮಾರ್ಗದರ್ಶನ ನೀಡುವುದು. ಚರ್ಚೆ ಮಾಡಿ ಭೂಖಂಡಗಳಲ್ಲಿ ಕಂಡುಬರುವ ಪ್ರಮುಖ ದೇಶಗಳನ್ನು ಪರಿಚಯಿಸುವುದು.

**ಚಟುವಟಿಕೆ: 5** ಮಕ್ಕಳೇ ಕೆಳಗೆ ನೀಡಿರುವ ಮೂರು ಭೂಖಂಡಗಳಲ್ಲಿ ಅಲ್ಲಿನ ಅಕ್ಷಾಂಶ ಸ್ಥಾನದ ಆಧಾರದ ಮೇಲೆ ಅಲ್ಲಿನ ಪ್ರಾಣಿ ಮತ್ತು ಸಸ್ಯವರ್ಗಗಳಲ್ಲಿ ವೈವಿಧ್ಯತೆಗಳನ್ನು ಕಾಣುತ್ತೇವೆ. ಹಾಗಾದರೆ ನಿಮ್ಮ ಪಠ್ಯಪುಸ್ತಕದ ಸಹಾಯದಿಂದ ಅಲ್ಲಿ ಕಂಡುಬರುವ ವಿಶೇಷತೆಗಳನ್ನು ಪಟ್ಟಿ ಮಾಡಿ ಮತ್ತು ಚರ್ಚಿಸಿ.

ಮಕ್ಕಳನ್ನು ಗುಂಪುಗಳಾಗಿ ಮಾಡಿ ಈ ಚಟುವಟಿಕೆಯನ್ನು ಮಾಡಿಸುವುದು. ಈ ಚಟುವಟಿಕೆಗೆ ಪಠ್ಯಪುಸ್ತಕದ ಸಹಾಯ ಪಡೆಯಲು ಹೇಳುವುದು. ಮಕ್ಕಳೊಂದಿಗೆ ಚರ್ಚಿಸಿ ಮೂರು ಭೂಖಂಡಗಳ ನಡುವೆ ಇರುವ ಭಿನ್ನತೆ ಮತ್ತು ವೈವಿಧ್ಯತೆಯ ಅರ್ಥೈಸುವುದು.

**ಮೌಲ್ಯಮಾಪನ:** ಕಲಿಕಾಹಾಳೆ 51ರ ಚಟುವಟಿಕೆ 3ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಬಹುದು.

## 28. ಸಮಾಜ ವಿಜ್ಞಾನ ಕಲಿಕೆ ಅನುಕೂಲಿಸಬಹುದಾದ ವಿಧಾನಗಳು

ಕಲಿಕೆ ಎಂದರೆ ಶಿಕ್ಷಕರು ಹೇಳಿದ್ದನ್ನೆಲ್ಲ ಮಕ್ಕಳು ಕಲಿಯುವುದಲ್ಲ. ಕಲಿಕೆ ಮಕ್ಕಳೇ ಕ್ರಿಯಾಶೀಲರಾಗಿ ತೊಡಗಿಕೊಂಡು ಅನುಭವಗಳ ಮೂಲಕ ತಮ್ಮ ಜ್ಞಾನ ಕಟ್ಟಿಕೊಳ್ಳುವ ಪ್ರಕ್ರಿಯೆ. ಮಕ್ಕಳು ಗುಂಪುಚರ್ಚೆಯಲ್ಲಿ, ಸಹವರ್ತಿಗಳ ಜೊತೆ ಚರ್ಚೆಯಲ್ಲಿ, ಅನುಭವ ಹಂಚಿಕೆಯಲ್ಲಿ ಸಹಕಲಿಕೆಯಲ್ಲಿ ತೊಡಗಿಕೊಂಡು ವೈಯಕ್ತಿಕವಾಗಿ ಹಾಗೂ ಗುಂಪಿನಲ್ಲಿ ಕಲಿಯುವಂತಾದರೆ ಶಿಕ್ಷಕರೊಂದಿಗೆ ಆತ್ಮೀಯವಾಗಿ, ಆತ್ಮವಿಶ್ವಾಸದಿಂದ ಚರ್ಚಿಸುವಂತಾಗಬೇಕು. ಈ ಎಲ್ಲಾ ವಿಧಾನಗಳಲ್ಲೂ ಮಕ್ಕಳು ಕ್ರಿಯಾಶೀಲರಾಗಿರುತ್ತೇರೆಯೇ ಹೊರತು ಶಿಕ್ಷಕರು ಹೇಳಿದ್ದನ್ನು ಆಲಿಸುವವರಾಗಿರುವುದಿಲ್ಲ.

1. ಕಥಾ ನಿರೂಪಣಾ ವಿಧಾನ.
2. ಯೋಜನಾ ವಿಧಾನ
3. ಪಠ್ಯಪುಸ್ತಕದ ಪಾಠ ಅವಲೋಕನ / ವಿಮರ್ಶಾ ಚಟುವಟಿಕೆ.
4. ಚರ್ಚಾ ವಿಧಾನ
5. ಸಮಸ್ಯಾ ಪರಿಹಾರ ವಿಧಾನ
6. ಮೂಲಾಧಾರ ವಿಧಾನ.
7. ಶಿಶು ಕೇಂದ್ರಿತ ಉಪನ್ಯಾಸ (ಶಿಕ್ಷಕರೇ ಕೇಂದ್ರವಾಗದೇ ಎಚ್ಚರಿಕೆಯಿಂದ ಬಳಸಬೇಕು)
8. ಘಟಕ ಪದ್ಧತಿ
9. ವೀಕ್ಷಣಾ ವಿಧಾನ
10. ಪ್ರವಾಸ / ಹೊರಸಂಚಾರ ವಿಧಾನ
11. ಪಾತ್ರಾಭಿನಯ/ನಾಟಕಾಭಿನಯ ವಿಧಾನ
12. ಕ್ಷೇತ್ರ ಅಧ್ಯಯನ
13. ಪ್ರಯೋಗ
14. ಕ್ರೀಡಾ ವಿಧಾನ
15. ಪ್ರಶ್ನೋತ್ತರ ವಿಧಾನ
16. ಸಂಶೋಧನೆ.
17. ಸಮೀಕ್ಷೆ / ಸಂದರ್ಶನ
18. ವಿಶ್ಲೇಷಣೆ.

ಶಿಕ್ಷಕರು ದೈನಂದಿನ ಕಲಿಕಾಂಶದ ಸ್ವರೂಪವನ್ನು ಅರ್ಥೈಸಿಕೊಂಡು ಯಾವ ವಿಧಾನದಿಂದ ಸುಲಭವಾಗಿ, ಗುಣಾತ್ಮಕವಾಗಿ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಮೈಗೂಡಿಸಬಹುದೆಂಬುದನ್ನು ಯೋಚಿಸಿ, ಯೋಜಿಸಿ ಕಾರ್ಯಪ್ರವೃತ್ತರಾದರೆ ಅವರ ಉದ್ದೇಶವು ಈಡೇರುವುದರಲ್ಲಿ ಸಂಶಯವಿಲ್ಲ. ಇಂಥ ಶಿಕ್ಷಕರು ಮಾತ್ರ ಉತ್ತಮ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಬಲ್ಲರು.

**ವಿವಿಧ ಮಾಹಿತಿ ಆಕರ/ಸಂಪನ್ಮೂಲಗಳನ್ನು ಬಳಸುವುದು.**

ನಿರಂತರ ಅಧ್ಯಯನ ಶೀಲರಾಗಿರುವವರು ಮಾತ್ರವೇ ಅಧ್ಯಾಪಕರೆನಿಸುತ್ತಾರೆ. 'ತಿಳಿದಿರುವುದು ಅಂಗೈ ಅಗಲದಷ್ಟು, ತಿಳಿಯಬೇಕಾಗಿರುವುದು ಸಾಗರದಷ್ಟು' ನಾವು ಎಷ್ಟೇ ಕಲಿತರೂ ಕಲಿಯಲು ಬಹಳಷ್ಟಿದೆ ಎಂಬ ಅರಿವು ನಮಗಿರಬೇಕು. ಪ್ರತಿಯೊಂದು ಮಗುವಿನಿಂದಲೂ ಕಲಿಯಬೇಕಾದುದು ಇರುತ್ತದೆ. ಹುಡುಕಾಟ, ಅಂತರಾವಲೋಕನ ಮತ್ತು ಮಕ್ಕಳ ಅಗತ್ಯಗಳಿಗೆ ಸಂವೇದನಾ ಶೀಲತೆಯಿದ್ದರೆ ತನ್ನ ವೃತ್ತಿ ಜೀವನದ ದಕ್ಷತೆಯನ್ನು ಶಿಕ್ಷಕರು ಖಂಡಿತವಾಗಿಯೂ ಹೆಚ್ಚಿಸಿಕೊಳ್ಳುತ್ತಾರೆ. ಪರಿಣಾಮಕಾರಿ ತರಗತಿ ನಿರ್ವಹಣೆ, ಆಕರ್ಷಕವಾದ ರೀತಿಯಲ್ಲಿ ಕಲಿಕಾಂಶಗಳ ವರ್ಗಾಯಿಸುವಿಕೆ ನಡೆಸಲು ಹಲವು ಸಾಧನ ಸಲಕರಣೆಗಳು ಸೃಜಿಸಲ್ಪಡುತ್ತವೆ. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಮೊದಲಾದ ಸುದ್ದಿ ಮಾಧ್ಯಮಗಳಲ್ಲಿ ಬರುವ ಪಾಠಕ್ಕೆ ಪೂರಕವಾಗಬಲ್ಲ ವಿಷಯ, ಚಿತ್ರ, ಅಂಕಿ-ಅಂಶಗಳನ್ನು ಅಂದೇ ಕತ್ತರಿಸಿ ಜೋಪಾನವಾಗಿಟ್ಟು ಕೊಂಡಲ್ಲಿ ಅವು ಉಪಯುಕ್ತ ಕಲಿಕಾ ಸಾಧನಗಳಾಗುತ್ತವೆ. ತಾಂತ್ರಿಕ ಸಾಧನ ಸಲಕರಣೆಗಳಾದ ರೇಡಿಯೋ, ದೂರದರ್ಶನ, ಕಂಪ್ಯೂಟರ್, ಒ.ಹೆಚ್.ಪಿ, ಪ್ರೊಜೆಕ್ಟರ್‌ಗಳನ್ನು ಸೂಕ್ತ ಸಂದರ್ಭದಲ್ಲಿ ಕಲಿಕೆಗೆ ಪೂರಕವಾದ ಆಕರಗಳಾಗಿ ಬಳಸುವ ಅಭ್ಯಾಸವೂ ಒಳ್ಳೆಯದು. ಶಾಲಾ ವಾಚನಾಲಯದಲ್ಲಿರುವ ಆಕರ ಗ್ರಂಥಗಳನ್ನು ಶಿಕ್ಷಕರೂ ಓದಿ ವಿದ್ಯಾರ್ಥಿಗಳಿಗೂ ಓದಲು ಅವಕಾಶ ಕಲ್ಪಿಸಬೇಕು.

**ಕೆಲವು ಆಕರ ಗ್ರಂಥಗಳು**

1. ಭೂಗೋಳ ಸಂಗಾತಿ - ಭಾಗ 1, 2 ಮತ್ತು 3
2. ಕಿರಿಯರ ವಿಶ್ವ ಕೋಶ - 7 ಸಂಪುಟಗಳು - ಡಾ ನಿರಂಜನ್
3. ಸಚಿತ್ರ ಇತಿಹಾಸ
4. ಪ್ರಾಚೀನ ಭಾರತ
5. ಸಮಗ್ರ ಭಾರತದ ಇತಿಹಾಸ
6. ಭಾರತದ ಸಂವಿಧಾನ

ಇವೇ ಮುಂತಾದ ಮೌಲ್ಯಯುತ ಆಕರ ಗ್ರಂಥಗಳನ್ನು ಒಳಗೊಂಡ ಒಂದು ಇತಿಹಾಸ / ರಾಜ್ಯ ಶಾಸ್ತ್ರ / ಭೂಗೋಳದ ಪ್ರಯೋಗ ಶಾಲೆಯನ್ನು ಹೊಂದುವ ಮೂಲಕ ಸಮಾಜ ವಿಜ್ಞಾನ ವಿಷಯದ ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸ ಬಹುದಾಗಿದೆ.

**ಚಟುವಟಿಕೆಗಳನ್ನು ಸಂಘಟಿಸುವುದು ಮತ್ತು ಗುಂಪು ರಚನೆ**

ಪರಿಣಾಮಕಾರಿಯಾಗಿ ಕಲಿಕೆ ಅನುಕೂಲಿಸಲು ನಿರಂತರ ಚಟುವಟಿಕೆಗಳನ್ನು ತರಗತಿ ಕೋಣೆಯ ಒಳಗೂ-ಹೊರಗೂ ರೂಪಿಸಿಕೊಳ್ಳಬೇಕಾಗುತ್ತದೆ. ಆದರೆ ಚಟುವಟಿಕೆಗಳಿಗಾಗಿ ಚಟುವಟಿಕೆಯಲ್ಲ. ತರಗತಿಯ ಏಕತಾನತೆಯನ್ನು ಹೋಗಲಾಡಿಸಿ ಜ್ಞಾನವನ್ನು ಕಟ್ಟಿಕೊಳ್ಳಲು ಅನುಕೂಲಿಸುವಂತಹ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು. ಉದ್ದೇಶಿತ ಚಟುವಟಿಕೆಯಿಂದ ಕಲಿಕೆಯ ಮಾರ್ಗವು ಸರಳಗೊಳ್ಳುವಂತಿರಬೇಕೇ ಹೊರತು ಅದು ವಿಷಯವನ್ನು ಮತ್ತಷ್ಟು ಕ್ಲಿಷ್ಟಗೊಳಿಸುವಂತಾಗಬಾರದು. ಕಲಿಕೆಯ ಅವಲೋಕನವನ್ನು ಕೂಡ ಚಟುವಟಿಕೆಗಳ ಮೂಲಕವೇ ನಿರ್ಣಯಿಸಬಹುದೆಂಬ ಅರಿವಿನೊಂದಿಗೆ ವಿವಿಧ ಹಂತಗಳಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ಸಂಯೋಜಿಸಿಕೊಳ್ಳಬೇಕು. ಈ ಚಟುವಟಿಕೆಗಳಿಗೆ ಕೆಲವು ಪೂರ್ವ ಸಿದ್ಧತೆಗಳಿರಬೇಕು. ಚಟುವಟಿಕೆಯ ಭಾಗವಾಗಿ ಗುಂಪು ಕಲಿಕೆಗೆ ಅವಕಾಶ ಕಲ್ಪಿಸಿಕೊಡಿ. ವಿವಿಧ ಗುಂಪುಗಳನ್ನು ರಚಿಸುವಾಗ ಯಾವ ವಿದ್ಯಾರ್ಥಿಯನ್ನು ಯಾವ ಗುಂಪಿನಲ್ಲಿಡಬೇಕು, ಯಾರು ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಸಹಾಯಕರು, ಯಾರು ಗುಂಪಿನ ನಾಯಕರು ಎಂದು ಮಕ್ಕಳೇ ನಿರ್ಧರಿಸುವಂತೆ ಅನುಕೂಲಿಸಿ. ಗುಂಪು ಕಲಿಕೆಯ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ವೈಯಕ್ತಿಕ ಗಮನ ನೀಡಿಕೆ ಅತಿ ಅವಶ್ಯಕ. ಪ್ರತಿ ಸಂದರ್ಭದಲ್ಲಿಯೂ ಮಕ್ಕಳ ಸಹಜ ಪ್ರವೃತ್ತಿಗಳಾದ ಕುತೂಹಲ, ಪ್ರಶ್ನಿಸುವ ಮನೋಭಾವನೆ, ಚಿಕಿತ್ಸಕ ಬುದ್ಧಿಗೆ ಪ್ರೇರಕವಾಗಬಲ್ಲ ಚಟುವಟಿಕೆಗಳನ್ನು ಸಿದ್ಧಗೊಳಿಸಲು ಹೆಚ್ಚಿನ ಆದ್ಯತೆ ನೀಡುವುದು ಅವಶ್ಯಕ. ಒಟ್ಟಿನಲ್ಲಿ

- ಚಟುವಟುಕೆಗಳು ಸರಳವಾಗಿರಲಿ
- ಚಟುವಟಿಕೆಗಳು ಕಲಿಕಾಂಶಕ್ಕೆ ಪೂರಕವಾಗಿರಲಿ
- ಎಲ್ಲಾ ವಿದ್ಯಾರ್ಥಿಗಳಿಗೂ ಭಾಗವಹಿಸಲು ಅವಕಾಶ ನೀಡುವಂತಿರಲಿ
- ವಿವಿಧ ಹಂತಗಳಿಗೆ ವಿವಿಧ ಮಾದರಿಯ ಚಟುವಟಿಕೆಗಳಿರಬಹುದು.
- ಚಟುವಟಿಕೆಯ ನಂತರ ವಿದ್ಯಾರ್ಥಿಗಳ ಅನಿಸಿಕೆಗಳನ್ನು ಸಂಗ್ರಹಿಸಿ
- ಕಲಿಕೆಯ ಅವಲೋಕನ ಮತ್ತು ಹಿಮ್ಮಾಹಿತಿಗೆ ಪ್ರತ್ಯೇಕ ಚಟುವಟಿಕೆಗಳು ಅವಶ್ಯವೆಂದಾದರೆ ಅವುಗಳ ಕಡೆ ಗಮನವಿರಲಿ.

**ಚಟುವಟಿಕೆಗಳನ್ನು ಸಂಘಟಿಸಲು ಕೆಲವು ಉದಾಹರಣೆಗಳು**

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕಾರ್ಥಿ ಕೇಂದ್ರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕಂಠಪಾಠ ಕಲಿಕೆಯಿಂದ ಹೊರಬಂದು ನಿಜವಾದ ಕಲಿಕೆಗೆ ಕಲಿಕಾರ್ಥಿಯನ್ನು ಕರೆತರುವ ಪದ್ಧತಿಗಳು ಜಾರಿಯಾಗಿವೆ.

ಕಲಿಕೆಗೆ ಬೇಕಾದ ಅಗತ್ಯತೆಗಳನ್ನು ಅನುಕೂಲಿಸುವವರು ತಯಾರಿಸಿಕೊಂಡಿದ್ದರೂ ಅವರ ತಯಾರಿಕೆಯ ಹಿಂದೆ ಅನೇಕ ಸಮಸ್ಯೆಗಳು ಬರಬಹುದಾಗಿದೆ. ಇವುಗಳನ್ನು ಸಮರ್ಪಕವಾಗಿ ಬಿಡಿಸಿಕೊಳ್ಳಲು ಅನುಕೂಲಿಸುವವರು ಅನೇಕ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಚಟುವಟಿಕೆಗಳನ್ನು ನೀಡುವುದರ ಮೂಲಕ ಕಲಿಕೆಯನ್ನು ಸಮಗ್ರ ಕಲಿಕೆಯನ್ನಾಗಿಸಬಹುದು.

ಕಲಿಕಾರ್ಥಿಗಳಲ್ಲಿ ವೈಯಕ್ತಿಕ, ಸಹವರ್ತಿ ಗುಂಪು ಅಥವಾ ಗುಂಪುಗಳಲ್ಲಿ ಚಟುವಟಿಕೆಗಳನ್ನು ನೀಡಬಹುದು. ಕೆಲವೊಮ್ಮೆ ಇಡೀ ತರಗತಿಗೇ ಚಟುವಟಿಕೆ ನೀಡಬಹುದಾಗಿದೆ.

**1. ಕಲಿಕಾ ನಿಲ್ದಾಣ ಚಟುವಟಿಕೆ**

ಸಮಾಜ ವಿಜ್ಞಾನದಲ್ಲಿ ಬರುವ ವಂಶಾವಳಿಗಳು, ದಾರ್ಶನಿಕರು, ವಾಸ್ತುಶಿಲ್ಪಗಳು, ಆಡಳಿತದ ಅಂಗಗಳು, ಭೂಮಿಯ ಮೇಲ್ಮದರಗಳು, ಸಸ್ಯವರ್ಗ, ಪ್ರಾಣಿಗಳು, ಸಮಾಜ ವಿಜ್ಞಾನಿಗಳ ಹೀಗೆ ಯಾವುದಾದರೂ ಒಂದು ಘಟಕಕ್ಕೆ ಸೇರಿದ ಅಂಶಗಳನ್ನು ಕಾರ್ಡ್‌ನಲ್ಲಿ ವಿವರವಾಗಿ ಬರೆಯುವುದು. ಅವುಗಳನ್ನು ನಿಗಧಿತ ಸ್ಥಳದಲ್ಲಿ ಇಡುವುದು. ಮಕ್ಕಳ ನಾಲ್ಕು ಅಥವ ಐದು ಗುಂಪನ್ನು (ಕಾರ್ಡ್‌ಗಳಿಗೆ ಅನುಸಾರವಾಗಿ) ರಚಿಸಿ ಕಾರ್ಡ್ ಇಟ್ಟಿರುವ ಸ್ಥಳಕ್ಕೆ ಪ್ರತಿ ಗುಂಪೂ ಆವರ್ತಗಳಲ್ಲಿ ಚಲಿಸಬೇಕು. ಅಲ್ಲಿನ ವಿಷಯ ಓದಿ ತಮ್ಮ ತಮ್ಮಲ್ಲಿ ಚರ್ಚಿಸಬೇಕು. ನಂತರ ಮುಂದಿನ ಕಾರ್ಡ್ ಬಳಿ ಚಲಿಸಬೇಕು. ಕಾರ್ಡ ಇರಿಸಿದ ಸ್ಥಳವೇ ಕಲಿಕೆಯ ನಿಲ್ದಾಣ. ಉಪನ್ಯಾಸ ಪದ್ಧತಿ ಅನಿವಾರ್ಯ ಎಂದು ಭಾವಿಸಿದ್ದವರಿಗೆ ಅದನ್ನು ತಪ್ಪಿಸಲು ಈ ವಿಧಾನ ಹೇಳಿ ಮಾಡಿಸಿದ ವಿಧಾನ.

**2. ನಮ್ಮ ಗುಂಪು – ಪರಿಣಿತ ಗುಂಪು ಕಲಿಕೆ (ಹೋಮ್ ಗ್ರೂಪ್ – ಎಕ್ಸಪರ್ಟ್ ಗ್ರೂಪ್)**

ಇಲ್ಲಿನ ಗುಂಪಿನಲ್ಲಿ ಮೊದಲ ಹಂತದಲ್ಲಿ ಐದು ಅಥವ ಆರು ಮಕ್ಕಳ ಗುಂಪು ರಚಿಸುವುದು. ಈ ಗುಂಪು ನಮ್ಮ ಗುಂಪು ಎಂದಾಗುತ್ತದೆ. ಪ್ರಾರಂಭದಲ್ಲಿ ಈ ಗುಂಪಿಗೆ ಕೆಲಸವಿಲ್ಲ. ಕೊನೆಗೆ ಈ ಗುಂಪಿಗೆ ಕೆಲಸವಿದೆ.

ಎರಡನೇ ಹಂತದಲ್ಲಿ ನಮ್ಮ ಗುಂಪಿನಲ್ಲಿಯೇ ಸಂಖ್ಯೆಗಳನ್ನು ಒಬ್ಬೊಬ್ಬರಿಗೆ ನೀಡಬೇಕು. ಸದರಿ ಸಂಖ್ಯೆಯವರು ಒಂದೊಂದು ಗುಂಪು ರಚಿಸಿಕೊಳ್ಳುತ್ತಾರೆ. ಇದು ಪರಿಣಿತ ಗುಂಪು. ಪರಿಣಿತ ಗುಂಪು ತಮಗೆ ನೀಡಿದ ಒಂದು ಕಲಿಕಾಂಶದ ಬಗ್ಗೆ ಕೂಲಂಕುಷವಾಗಿ ಚರ್ಚಿಸುತ್ತದೆ. ನೀಡಿದ ವಿಷಯದ ಮೇಲೆ ಪರಿಣಿತಿ ಸಾಧಿಸುತ್ತದೆ.ಶಿಕ್ಷಕರು ಪ್ರತಿ ಗುಂಪಿಗೂ ಚಲಿಸುತ್ತಾ ಚರ್ಚೆ ಅನುಕೂಲಿಸುತ್ತಾರೆ.

ನಂತರ ವಾಪಾಸು ಸದಸ್ಯರು ತಮ್ಮ ಮೂಲ ಗುಂಪಿಗೆ ಮರಳಿ ತಾವು ಚರ್ಚಿಸಿದ ವಿಷಯವನ್ನು ತಮ್ಮ ಮೂಲ ಗುಂಪಿನೊಂದಿಗೆ ಹಂಚಿಕೊಳ್ಳುತ್ತಾರೆ. ಪ್ರತಿ ಸದಸ್ಯರೂ ಒಂದೊಂದು ವಿಷಯವನ್ನು ಚರ್ಚಿಸಿ ಪರಿಣಿತಿಗಳಿಸಿರುವುದರಿಂದ ಮೂಲ ಗುಂಪುಗಳು ಎಲ್ಲ ವಿಷಯಗಳನ್ನು ಹಂಚಿಕೊಳ್ಳುತ್ತವೆ. ಕೊನೆಯಲ್ಲಿ ಹೆಚ್ಚಿನ ವಿವರಗಳಿಗೆ ಶಿಕ್ಷಕರನ್ನು ಸಂಪರ್ಕಿಸಬಹುದು. ಉಪನ್ಯಾಸ ಪದ್ಧತಿ ಅನಿವಾರ್ಯ ಎಂದು ಭಾವಿಸಿದ್ದವರಿಗೆ ಅದನ್ನು ತಪ್ಪಿಸಲು ಈ ವಿಧಾನವೂ ಸಹ ಹೇಳಿ ಮಾಡಿಸಿದ ವಿಧಾನ.

**3. ಸಹವರ್ತಿ ಚಟುವಟಿಕೆ**

ಇಬ್ಬರು ಸಹವರ್ತಿಗಳ ನಡುವೆ ಸಮಾಜವಿಜ್ಞಾನದಲ್ಲಿ ಬರುವ ವಂಶಾವಳಿಗಳು, ವಾಸ್ತುಶಿಲ್ಪಗಳು, ಆಡಳಿತದ ಅಂಗಗಳು, ಭೂಮಿಯ ಮೇಲ್ಮದರಗಳು, ಸಸ್ಯವರ್ಗ, ಪ್ರಾಣಿವರ್ಗ, ಸಮಾಜ ವಿಜ್ಞಾನಿಗಳ ಹೆಸರುಗಳನ್ನು ಚೀಟಿಯಲ್ಲಿ ಬರೆದು

ಅವುಗಳನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವುದು, ಹಾಗೂ ಸಹವರ್ತಿಗಳ ಗುಂಪುಗಳಲ್ಲಿ ಸೇರಿಕೊಳ್ಳಲು ತಿಳಿಸುವುದು. ಅಲ್ಲಿ ಅವರ ವಿಷಯ ಚರ್ಚಿಸಬಹುದು.

**4. ಗುಂಪು ಚಟುವಟಿಕೆ**

ಗುಂಪು ಚಟುವಟಿಕೆಯಲ್ಲಿ ಎರಡು ವಿದ್ಯಾರ್ಥಿಗಳ ಗುಂಪುಗಳು, ಮೂರು ವಿದ್ಯಾರ್ಥಿಗಳ ಗುಂಪು.... ಹೀಗೆ ಗರಿಷ್ಠ ಹತ್ತು ವಿದ್ಯಾರ್ಥಿಗಳ ಗುಂಪುಗಳನ್ನು ಸಂಘಟಿಸಬಹುದಾಗಿದೆ. ಈ ಗುಂಪುಗಳಿಗೆ ಸಮಾಜ ವಿಜ್ಞಾನ ಪಠ್ಯದಲ್ಲಿ ಬರುವ ಅನೇಕ ರಾಜ–ರಾಣಿ–ಆಡಳಿತಗಾರರ ಹೆಸರುಗಳು, ಸ್ಥಳಗಳು, ದಾರ್ಶನಿಕರು, ನದಿಗಳು, ರಾಷ್ಟ್ರ ನಾಯಕರು, ದೇಶ ಅಥವ ರಾಜಧಾನಿಗಳು, ಗ್ರಹಗಳು, ನಕ್ಷತ್ರಗಳ ಗುಂಪು / ಗೆಲಕ್ಸಿ ಮುಂತಾದುವುಗಳ ಹೆಸರುಗಳನ್ನು ನೀಡಬಹುದಾಗಿದೆ.

ಕಲಿಕಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ, ಕಲಿಕಾಂಶಕ್ಕೆ ಸರಿಹೊಂದುವಂತಹ ಚಟುವಟಿಕೆಗಳನ್ನು ಆಯೋಜಿಸುವುದು. ಪ್ರತಿ ಗುಂಪಿಗೂ ಅದರದೇ ಆದ ಜವಾಬ್ದಾರಿ / ಚರ್ಚಾಂಶಗಳನ್ನು ನೀಡುವುದು. ಪ್ರತಿ ಗುಂಪುಗಳಲ್ಲಿಯ ಚರ್ಚೆಯಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಗಮನಿಸುತ್ತಾ ಅಗತ್ಯ ಮಾರ್ಗದರ್ಶನ ನೀಡುವುದು. ಗುಂಪಿನಲ್ಲಿ ಮಗುವಿನ ಭಾಗವಹಿಸುವಿಕೆ, ಅಲ್ಲಿ ಉಂಟಾಗಬಹುದಾದ ಗೊಂದಲ / ಅಸ್ಪಷ್ಟತೆಗಳಿಗೆ ಅಗತ್ಯ ಸಲಹೆ ನೀಡುತ್ತಾ ಪರಸ್ಪರ ಕಲಿಕೆಗೆ ಹೆಚ್ಚು ಅವಕಾಶ ನೀಡುವುದು.

ಪ್ರಸ್ತುತ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಈ ರೀತಿಯ ಗುಂಪು ಚರ್ಚೆ ಹಾಗೂ ಮಾಹಿತಿ ಸಂಗ್ರಹಣಾ ಚಟುವಟಿಕೆಗಳು ಇದ್ದು, ಇವು ಮಗುವಿನ ಕಲಿಕಾ ಹಂದರಗಳನ್ನು ತುಂಬಲು ಹಾಗೂ ಅವರ ಪೂರ್ವಜ್ಞಾನದೊಂದಿಗೆ ತಾವೇ ಜ್ಞಾನವನ್ನು ಕಟ್ಟಿಕೊಳ್ಳಲು ಅವಕಾಶಗಳು ಇವೆ.

**ಉದಾ :–**

1. ದೇವಾಲಯ, ಮಸೀದಿ ಅಥವ ಬೌತಿಕ ಸ್ಮಾರಕಗಳಿಗೆ ಭೇಟಿ ನೀಡಿ ಅಲ್ಲಿನ ವೈಶಿಷ್ಟ್ಯ ದಾಖಲಿಸುವ ಚಟುವಟಿಕೆ. ಗ್ರಾಮ ಪಂಚಾಯ್ತಿ ಅಥವ ಅಂತಹಾ ಯಾವುದೇ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುವ ಸಭೆ ಅಥವ ಇತರೆ ಪ್ರಕ್ರಿಯೆ ತಿಳಿದುಕೊಂಡು ದಾಖಲಿಸುವ ಚಟುವಟಿಕೆ.
2. ವಿವಿಧ ಚಿಹ್ನೆಗಳು, ಪ್ರಾಣಿವರ್ಗ, ಸಸ್ಯವರ್ಗ, ಪಕ್ಷಿಗಳು, ನಾಣ್ಯ, ಬಾವುಟಗಳ ಚಿತ್ರಗಳನ್ನು ಸಂಗ್ರಹಿಸಿ ತೋರಿಸುವ ಚಟುವಟಿಕೆ.
3. ಒಂದು ಚಟುವಟಿಕೆಯಲ್ಲಿ 'ಕಾರ್ಯನಿರತ ಮಾದರಿ'ಯೊಂದನ್ನು ವೀಕ್ಷಿಸುತ್ತಾ, ಅಲ್ಲಿ ಚರ್ಚಿಸಿ, ತೀರ್ಮಾನಿಸುವ ಅವಕಾಶಗಳೂ ಇವೆ.

ಈ ಮೇಲ್ಕಂಡ ಸಂದರ್ಭಗಳಲ್ಲಿ ಮಗುವಿನ ಮಾತುಗಾರಿಕೆ, ಪಾಲ್ಗೊಳ್ಳುವಿಕೆ, ಪರಸ್ಪರ ವಿನಿಮಯ/ ಸಂವಹನ ಹಾಗೂ ದಾಖಲೀಕರಣವು ಪ್ರಧಾನವಾಗಿರುತ್ತದೆ. ತನಗೆ ತಿಳಿದಿರುವ ಜ್ಞಾನದ ಮೂಲಕ ಹೊಸ ಸನ್ನಿವೇಶವೊಂದರಲ್ಲಿ ಆ ಜ್ಞಾನವನ್ನು ಪುನರ್‌ರಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಆ ಮೂಲಕ ತಾನೇ ಜ್ಞಾನವನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಪ್ರತಿ ಸಂದರ್ಭದಲ್ಲಿಯೂ ಮಗುವಿಗೆ ಹಿಮ್ಮಾಹಿತಿ ನೀಡಬಹುದಾದ ಅಥವಾ ಮಗುವೇ ಹಿಮ್ಮಾಹಿತಿ ನೀಡಬಹುದಾದ ಅವಕಾಶವಿರುತ್ತದೆ.

*****